ಹಂಪಿ ಪರಿಸರದ ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಮಾಜಶಾಸ್ತ್ರದ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ಮರೆಪ್ಪ

ಮಾರ್ಗದರ್ಶಕರು
ಡಾ.ಕೇಶವನ್ ಪ್ರಸಾದ್.ಕೆ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೯

ಹಂಪಿ ಪರಿಸರದ ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಮಾಜಶಾಸ್ತ್ರದ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ಮರೆಪ್ಪ

ಮಾರ್ಗದರ್ಶಕರು
ಡಾ.ಕೇಶವನ್ ಪ್ರಸಾದ್.ಕೆ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೯

ಪ್ರಮಾಣ ಪತ್ರ

'ಹಂಪಿ ಪರಿಸರದ ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿ' ಈ ನಿಬಂಧವನ್ನು **ಡಾ.ಕೇಶವನ್ ಪ್ರಸಾದ್.ಕೆ,** ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 15/10/09

(ಮರೆಪ್ಪ)

ಸಂಶೋಧಕರು

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

* * *

ಅಧ್ಯಾಯ ೧

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಮಹತ್ವ

೧.೪. ಅಧ್ಯಯನದ ವಿಧಾನ

೧.೫. ಇಲ್ಲಿವರೆಗೆ ನಡೆದಿರುವ ಅಧ್ಯಯನಗಳು

೧.೬ ಅಧ್ಯಯನದ ಅವಶ್ಯಕತೆ

ಪ್ರಸ್ತಾವನೆ

ಹಂಪೆ ಕ್ರಿ.ಶ.೧೩೩೬ ರಿಂದ ೧೫೬೫ರ ವರೆಗೆ ಸುಮಾರು ೨೩೬ ವರ್ಷಗಳ ಕಾಲ ಮೆರೆದು ವಿಶ್ವಮಟ್ಟದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಬಗ್ಗೆ ನಮಗೆ ಇತಿಹಾಸದಿಂದ ತಿಳಿದುಬರುತ್ತದೆ. ಇಂತಹ ಸಾಮ್ರಾಜ್ಯವು ಸೋಲನ್ನು ಅನುಭವಿಸಿದಾಗ ಹಂಪೆಯು ಹಾಳು ಹಂಪೆಯಾಯಿತು. "ಛತ್ರ ಪತಿ ಶಿವಾಜಿಯು ಇಲ್ಲಿಗೆ ಬಂದು ಇಲ್ಲಿನ ದುಸ್ಥಿತಿಯನ್ನು ಕಂಡು ವಿರೂಪಾಕ್ಷನ ಪೂಜೆಯೂ ಮೊದಲಿನಂತೆ ನೆರವೇರುವಂತೆ ಏರ್ಪಾಡು ಮಾಡಿದನು ಆಗ ಪೂಜೆಯೂ ಆರಂಭವಾಗಿ ಹಂಪೆಯೂ ಧಾರ್ಮಿಕ ಕೇಂದ್ರವಾಯಿತು. ಹಾಳು ಪಟ್ಟಣವಾಗಿದ್ದ ವಿಜಯನಗರ ಸಾಮ್ರಾಜ್ಯವು ಗತ ವೈಭವದ ಕುರುಹಾಗಿ ಉಳಿಯಿತು." ಈಗಲೂ ಮುನ್ನೂರ ಅರವತ್ತೈದು ವರ್ಷದ ದಿವಸಗಳು ಸಾವಿರಾರು ಭಕ್ತರು ಮತ್ತು ಪ್ರವಾಸಿಗಳಿಂದ ಕೂಡಿರುತ್ತದೆ. ಹಾಗೆಯೇ ಹಂಪೆ ಮತ್ತು ಸುತ್ತಮುತ್ತಲ ಪ್ರದೇಶವು ಬಹು ಹಿಂದಿನಿಂದಲೂ ರಾಮಾಯಣದ ತಾದಾತ್ಮ್ಯ ಸಂಬಂಧವನ್ನು ಹೊಂದಿದೆ. ವಾಲಿದಿಬ್ಬ, ಸೀತೆಸೆರಗು ಮುಂತಾದ ಸ್ಥಳಗಳು ರಾಮಾಯಣ ಕಾಲದಿಂದ ಇಲ್ಲಿ ಜನವಸತಿ ಇತ್ತೆಂಬುದನ್ನು ನೆನಪಿಗೆ ತರುತ್ತದೆ. ಹಂಪೆ ಮತ್ತು ಅದರ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಕಂಡುಬರುತ್ತವೆ. ಹಳೇಯ ಶಿಲಾಯುಗ, ನೂತನ ಶಿಲಾಯುಗ, ಕಬ್ಬಿಣ ಮತ್ತು ಸಂಸ್ಕೃತಿ ಯುಗಗಳು ಕಂಡುಬಂದಿರುವುದನ್ನು ಹಲವಾರು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ.

ಒಂದು ಕಾಲದಲ್ಲಿ ತನ್ನ ಚರಿತ್ರೆಯನ್ನು ಉನ್ನತಮಟ್ಟದಲ್ಲಿ ರಚಿಸಿಕೊಂಡ ಪ್ರದೇಶವೆಂದರೆ ಹಂಪಿ ಪರಿಸರವಾಗಿದೆ. ಇದು ಬಹುಸಂಸ್ಕೃತಿಗಳ ನೆಲೆಬೀಡಾಗಿದೆ. ಈ ಪ್ರದೇಶದಲ್ಲಿ ಅನೇಕ ಸಮುದಾಯಗಳು ಕಂಡುಬರುತ್ತವೆ. ಅವುಗಳಲ್ಲಿ ಬುಡಕಟ್ಟು ಸಮುದಾಯಗಳು ವಿಭಿನ್ನವಾದ ಸಂಸ್ಕೃತಿಯನ್ನು ಪ್ರಸ್ತುತ ಸಂದರ್ಭದವರೆಗೂ ಮೈಗೂಡಿಸಿಕೊಂಡು ಬಂದಿವೆ. ಇಲ್ಲಿ ಹಲವಾರು ಧರ್ಮಗಳು ನೆಲೆಗೊಂಡರೂ ಕೂಡ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳು

ಧರ್ಮಾತೀತವಾಗಿದ್ದವು. ಈ ಸಮುದಾಯಗಳ ಸಂಸ್ಕೃತಿಯನ್ನು ಬೇರೊಬ್ಬರು ಅನುಕರಣೆ ಮಾಡುವರೇ ಹೊರತು. ಇವರು ಮಾತ್ರ ತಮ್ಮ ಪೂರ್ವಜರು ಮಾಡಿದ ಕೆಲಸಂಪ್ರದಾಯಗಳನ್ನು ಯಾವುದೇ ಧರ್ಮಕ್ಕೆ ಅಂಟಿಕೊಳ್ಳದೆ ಆಚರಣೆ ಮಾಡುವ ಸನ್ನಿವೇಶವನ್ನು ಕಾಣುತ್ತದೆ.

ಹಂಪಿ ಪರಿಸರವೆಂದರೆ ವಿಶಾಲ ದೃಷ್ಟಿಕೋನದಿಂದ ನೋಡುವುದು ಇಂದಿನ ಸಂದರ್ಭದಲ್ಲಿ ಅವಶ್ಯಕತೆಯಿದೆ. ಸ್ಥಳೀಯ ಸಮುದಾಯಗಳ ಚರಿತ್ರೆ ವರ್ತಮಾನದಲ್ಲಿ ಮಹತ್ವವನ್ನು ಪಡೆದುಕೊಳ್ಳುವ ಹಂತಕ್ಕೆ ತಲುಪಿವೆ. ಈ ಸಮುದಾಯಗಳ ಹುಟ್ಟು, ಬೆಳವಣಿಗೆ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಮತ್ತು ಇನ್ನಿತರ ಮೂಲಭೂತ ಅವಶ್ಯಕತೆ ವಿಚಾರಗಳನ್ನು ತಿಳಿಸುವ ಪ್ರಯತ್ನಮಾಡಲಾಗಿದೆ.

ಬಹಳ ಪ್ರಮುಖವಾಗಿ ಹಿಂದಿನ ಕಾಲದಿಂದಲು ಆಚರಣೆಯಲ್ಲಿರುವ "ಫಲಪೂಜಾ" ಪದ್ಧತಿಯು ಇಂದಿಗೂ ಇಲ್ಲಿನ ಜನಸಾಮಾನ್ಯರ ಬದುಕಿನ ಪ್ರಮುಖ ವಿಷಯ. ಈ ಪ್ರದೇಶದಲ್ಲಿ ಫಲಪೂಜಾ ಆಚಾರಣೆಯ ಅನಂತರವೇ ಅವರು ಮದುವೆಗಳ ನಿಶ್ಚಯ, ಮದುವೆ ಕಾರ್ಯಗಳಂತಹ ಶುಭ ಕಾರ್ಯಗಳನ್ನು ನಡೆಸುವುದು ಆದಿಮ ಕಾಲದಿಂದಲೂ ನಡೆದುಬಂದ ಸಂಪ್ರದಾಯಗಳು ಪ್ರಸ್ತುತ ಸಂದರ್ಭದಲ್ಲಿಯೂ ಜೀವಂತಿಕೆಯನ್ನು ಉಳಿಸಿಕೊಂಡು ಬರುತ್ತಿವೆ. ನದಿಯಲ್ಲಿ ಮಿಂದು (ಚಕ್ರತೀರ್ಥ) ಮೂರು ಕಲ್ಲಿಟ್ಟು ಮನೆಯನ್ನು ರಚಿಸುವುದು. ಗಿಡದ ಟೊಂಗೆಯಲ್ಲಿ ಬಟ್ಟೆಯಿಂದ ತೊಟ್ಟಿಲು ಕಟ್ಟಿ ಸಣ್ಣ ಕಲ್ಲೊಂದನ್ನು ಹಾಕುವುದು. ಹೀಗೆ ಹಂಪೆ ಹಾಳಗಿದ್ದರೇನು ಜನರಿಗೆ ಗತಕಾಲದ ಆಚರಣೆಯನ್ನು ಮುಂದುವರಿಸಲು ಯಾವ ಅಡ್ಡಿಯೂ ಆಗಿಲ್ಲ. ಆದ್ದರಿಂದ ಇಂತಹ ಚಾರಿತ್ರಿಕವಾಗಿ, ಧಾರ್ಮಿಕವಾಗಿ ಮತ್ತು ಪೌರಾಣಿಕವಾಗಿ ಹಿನ್ನೆಲೆಯಲ್ಲಿ ಅಪಾರ ಹೆಸರನ್ನು ಪಡೆದು ಜನಸಾಮನ್ಯರ ಆಕರ್ಷಣೆಯನ್ನು ಉಳಿಸಿಕೊಂಡಿರುವ ಹಂಪೆ ಪರಿಸರದಲ್ಲಿ ಇಂದಿಗೂ ಕಂಡು ಬರುವ ಹಲವು ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿಯನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಹಲವಾರು ಮಹತ್ವದ ಸಂಗತಿಗಳನ್ನು ತಿಳಿದು ಕೊಳ್ಳುವುದು ಸಾಧ್ಯವಿದೆ.

ಬಹು ಮುಖ್ಯವಾಗಿ ಬೇಡ ಬುಡಕಟ್ಟು ವಿಜಯನಗರ ಸಾಮ್ರಾಜ್ಯದಲ್ಲಿ ಸೈನಿಕರಾಗಿ, ದಂಡನಾಯಕರಾಗಿ, ಕಾವಲುಗಾರರಾಗಿ, ಹಲವಾರು ಹುದ್ದೆಗಳಲ್ಲಿ ಸೇವೆ ಸಲ್ಲಿಸಿರುವುದು ಇತಿಹಾಸದಲ್ಲಿ ದಾಖಲಾಗಿದೆ. ಸಮುದಾಯದ ಸಾಮಾಜಿಕ ಜೀವನ ಇಂದು ಯಾವ ಬದಲಾವಣೆಯೊಂದಿಗೆ ಅಸ್ತಿತ್ವದಲ್ಲಿದೆ? ಪರ್ಯಾಯ ಕಸಬುಗಳು ಯಾವುವು? ಎಂಬುದನ್ನು ಅಧ್ಯಯನದ ಮೂಲಕ ಇಲ್ಲಿ ವಿವರಿಸಲಾಗಿದೆ. ಹಾಗೆಯೇ ಹೊರ ರಾಜ್ಯಗಳಿಂದ ವಲಸೆ ಬಂದು ಹಂಪೆ ಪರಿಸರದಲ್ಲಿ ನೆಲಸಿ ತಮ್ಮ ಬದುಕನ್ನು ಕಟ್ಟಿಕೊಂಡಿರುವ ಲಂಬಾಣಿ ಸಮುದಾಯವು ಇಂದಿಗೂ ಪ್ರತ್ಯೇಕವಾಗಿ ನೆಲಸಿ ತನ್ನ ಸಾಂಸ್ಕೃತಿಕ ಮತ್ತು ಭಾಷೆಯೊಂದಿಗೆ

ವಿಭಿನ್ನವಾಗಿ ಕಂಡುಬರುತ್ತಿದೆ. ಒಂದು ಕಡೆ ನೆಲೆಸದೆ ಅರೆ-ಅಲೆಮಾರಿಗಳಾಗಿ ಗುರುತಿಸಿಕೊಂಡಿರುವ ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯ ಹಂಪೆ ಪರಿಸರದಲ್ಲಿ ವಾಸ್ತವ್ಯವನ್ನು ಕಂಡುಕೊಂಡಿದೆ. ಹಾಗೂ ಧಾರ್ಮಿಕ ಭಿಕ್ಷಾಟನೆಯನ್ನು ತಮ್ಮ ಬದುಕಿಗೆ ಆಧಾರವಾಗಿಸಿಕೊಂಡು ಹಳ್ಳಿ ಹಳ್ಳಿಯಲ್ಲಿ ದೇವರನ್ನು ಒತ್ತು ಸಂಚರಿಸುವ ದುರಗ ಮುರುಗಿ ಸಮುದಾಯ ಸಹ ಇಲ್ಲಿ ನೆಲೆ ನಿಂತಿದೆ. ಇವುಗಳಲ್ಲದೆ ಅಲೆಮಾರಿಗಳಾಗಿ ಜನರಿಗೆ ಮನರಂಜನೆ ನೀಡುವ ಮೂಲಕ ತಮ್ಮ ಬದುಕಿಗೆ ಒಂದಿಷ್ಟು ಆದಾಯವನ್ನು ಗಳಿಸುವ ಹಾವಡಿಗರು, ದೊಂಬರು, ಸುಡುಗಾಡುಸಿದ್ಧರು, ಗೋಸಂಗಿಗಳು, ಕೊರವರು, ಬುಡ್ಗಜಂಗಮರು, ಶಿಳ್ಳೆಕ್ಯಾತರು, ಮುಂತಾದವರು ಹಂಪೆ ಪರಿಸರದಲ್ಲಿ ಆಸರೆ ಪಡೆದಿದ್ದಾರೆ. ಆದ್ದರಿಂದ ಈ ಸಮುದಾಯಗಳ ಸಾಮಾಜಿಕ ಸ್ಥಿತಿಗತಿಯನ್ನು ಅರಿಯುವ ಮೂಲಕ ಹಂಪೆಯೊಂದಿಗೆ ಇವರಿಗಿರುವ ಚಾರಿತ್ರಿಕ ಸಂಬಂಧಗಳನ್ನು ಈ ಅಧ್ಯಯನದಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಿ ಇವುಗಳ ಇಂದಿನ ಸಾಮಾಜಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗುವುದು.

೧.೧. ಅಧ್ಯಯನದ ಉದ್ದೇಶ

ವರ್ಷವಿಡೀ ನಿರಂತರವಾಗಿ ಹರಿಯುವ ತುಂಗಭದ್ರೆ ನದಿ ಕಲ್ಲಿನಿಂದ ಆವೃತವಾದ ಬೆಟ್ಟಗುಡ್ಡಗಳನ್ನು ಹೊಂದಿರುವ ಜಗತ್ತಿನಲ್ಲೇ ಶ್ರೇಷ್ಠವಾದ ಸಾಮ್ರಾಜ್ಯವೆಂದು ಕರೆಯುವ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪೆ ಇಂದಿಗೂ ಬೇರೆಂದು ರೀತಿಯಲ್ಲಿ ಜಗತ್ಪ್ರಸಿದ್ಧಿಯನ್ನು ಹೊಂದಿದೆ. ಹಾಳಾದ ಸಾಮ್ರಾಜ್ಯವನ್ನು ವಿಶ್ವಪರಂಪರೆಯ ಪಟ್ಟಿಯಲ್ಲಿ ಸೇರಿಸಿ ಅದನ್ನು ಸಂರಕ್ಷಿಸುವ ಕೆಲಸ ಸಾಗಿದೆ. ಇಂತಹ ಮಹತ್ವವನ್ನು ಹೊಂದಿದ ಹಂಪೆಯ ಪರಿಸರದಲ್ಲಿ ಆದಿಮ ಕಾಲದಿಂದಲೂ ಬದುಕಿ ಸಾಮ್ರಾಜ್ಯದ ಏಳು-ಬೀಳಿಗೆ ಪಾಲುದಾರರಾದ ಬೇಡ ಬುಡಕಟ್ಟು ಹಾಗೂ ಇತರೆ ಬುಡಕಟ್ಟುಗಳು ಮತ್ತು ಅಲೆಮಾರಿ ಸಮುದಾಯಗಳು ಇಲ್ಲಿ ನೆಲೆಸಿವೆ. ಇವುಗಳ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ತಿಳಿಯಲು ಈ ಕೆಳಗೆ ದಾಖಲಿಸಿದ ಕೆಲವುಗಳನ್ನು ಪ್ರಮುಖವಾಗಿ ಪರಿಗಣಿಸಲಾಗಿದೆ.

೧. ಹಂಪೆ ಪರಿಸರದ ಬುಡಕಟ್ಟು ಸಮುದಾಯಗಳ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ವಲಯಗಳ ಸ್ಥಿತಿಗತಿಗಳ ಬಗ್ಗೆ ತಿಳಿಸಲಾಗಿದೆ.

೨. ಆಧುನಿಕ ಜಗತ್ತಿನಲ್ಲಿ ಹಂಪೆ ಪರಿಸರದಲ್ಲಿನ ಬುಡಕಟ್ಟು ಸಮುದಾಯಗಳು ಹೇಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಎನ್ನುವುದನ್ನು ಗುರುತಿಸಲಾಗಿದೆ.

೩. ಕೆಲವು ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳು ಈ ಪರಿಸರದಲ್ಲಿ ಯಾವ ರೀತಿಯಲ್ಲಿ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿವೆ ಎಂಬುದನ್ನು ತಿಳಿಸಲು ಪ್ರಯತ್ನಿಸಲಾಗಿದೆ.

೪. ಬುಡಕಟ್ಟು ಚಹರೆಯನ್ನು ಹೊಂದಿರುವ ಲಂಬಾಣಿ ಸಮುದಾಯ ಹಂಪೆ ಪರಿಸರದಲ್ಲಿ ಜೀವನ ರೂಪಿಸಿಕೊಂಡಿರುವ ಸವಾಲಿನ ಅವರ ಬದುಕನ್ನು ತಿಳಿಸಿಕೊಡಲಾಗಿದೆ.

೫. ಕಾಲದಿಂದ ಕಾಲಕ್ಕೆ ಹಂಪೆಯ ಪರಿಸರದಲ್ಲಿರುವ ಬುಡಕಟ್ಟುಗಳ ಬದುಕಿನಲ್ಲಿ ಆಗಿರುವ ಬದಲಾವಣೆಗಳಿಗೆ ಈ ದೇಶದ ರಾಜಕೀಯ ಆರ್ಥಿಕ, ಶಕ್ತಿಗಳ ಕಾರಣಗಳು ಯಾವುವು ಎಂಬುದು ತಿಳಿಸಲಾಗಿದೆ.

೬. ಹಲವಾರು ಉದ್ದೇಶಗಳನ್ನು ಇಟ್ಟುಕೊಂಡು ಹಂಪೆ ಪರಿಸರಕ್ಕೆ ವಲಸೆಬಂದ ಬುಡಕಟ್ಟುಗಳು ಮತ್ತು ಮೂಲಬುಡಕಟ್ಟುಗಳ ತಮ್ಮ ಮೂಲ ಲಕ್ಷಣಗಳನ್ನು ಕಳೆದು ಕೊಂಡಿವೆ. ಅದಕ್ಕೆ ಕಾರಣಗಳು ಯಾವುವು ಎಂಬುದು ಚರ್ಚಿಸಲಾಗಿದೆ.

೭. ಈ ಕಳೆದುಕೊಳ್ಳುವಿಕೆಗೆ ಚಾರಿತ್ರಿಕ ಕಾರಣಗಳಿವೆ. ಅವು ಶುದ್ಧ ಸಾಮಾಜಿಕಾರ್ಥಿಕ ಕಾರಣಗಳು ಯಾವುವು ಎಂಬುದನ್ನು ತಿಳಿಸಲಾಗಿದೆ.

೮. ಶ್ರೇಣೀಕರಣದ ತೆಕ್ಕೆಗೆ ಬಂದ ಹಂಪೆ ಪರಿಸರದ ಬುಡಕಟ್ಟುಗಳು ಒಂದು ಜಾತಿಯಾಗಿ ಮಾರ್ಪಟ್ಟು ಸಾಮಾಜಿಕ ಆರ್ಥಿಕ ಹಿನ್ನಡೆಯನ್ನು ಅನುಭವಿಸುತ್ತವೆ ಎಂಬುದನ್ನು ತಿಳಿಸಲಾಗಿದೆ.

೯. ಹಂಪೆಯು ಒಂದು ಪ್ರವಾಸ ಉದ್ಯೋಮ ತಾಣವಾಗಿರುವುದರಿಂದ ಇಲ್ಲಿಯ ಬುಡಕಟ್ಟುಗಳು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಅವರ ಬದುಕಿನ ಮೇಲೆ ಆಗುವ ಪರಿಣಾಮಗಳನ್ನು ಕಂಡುಕೊಳ್ಳಲಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಹಂಪೆ ಪರಿಸರದಲ್ಲಿನ "ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿ" ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಪರಿಸರವು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಹಂಪೆ ಹಾಗೂ ಸಣ್ಣ ಹಳ್ಳಿ ಈ ಪ್ರದೇಶದಲ್ಲಿ ಬರುವ ಎರಡು ಹೋಬಳಿಗಳಾದ ಕಮಲಾಪುರ, ಕಂಪ್ಲಿ ಮತ್ತು ಮೂರು ಹಳ್ಳಿಗಳನ್ನು ಒಳಗೊಂಡ ವೆಂಕಟಾಪುರ, ಬುಕ್ಕಸಾಗರ, ಹಂಪೆ ಹಾಗೂ ಇತರ ಸುತ್ತ-ಮುತ್ತಲಿನ ಕ್ಯಾಂಪ್ ಹಾಗೂ ತಾಂಡ (ವೆಂಕಾಟಾಪುರ ಕ್ಯಾಂಪ್, ಕೆರೆತಾಂಡ, ಕಡ್ಡಿರಾಂಪುರ, ಶ್ರೀಲಂಕ, ರಾಮನಗರ) ಪ್ರದೇಶದಲ್ಲಿ ಕಂಡು ಬರುವ ಬುಡಕಟ್ಟುಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು ಅವರ ಸಾಮಾಜಿಕ ಸ್ಥಿತಿಗತಿಗಳ ಕುರಿತು ಅರಿಯಲು ಪ್ರಯತ್ನಿಸಲಾಗಿದೆ. ಮೇಲೆ ಹೆಸರಿಸಿದ ಪ್ರದೇಶವನ್ನು ಅಧ್ಯಯನಕ್ಕೆ ಮಿತಿಗೊಳಿಸಿಕೊಂಡು ಆ ಭಾಗದಲ್ಲಿ ವಾಸ್ತವ್ಯವಿರುವ ಹಕ್ಕಿಪಿಕ್ಕಿ,

ಬೇಡ, ದುರಗ ಮುರಗಿ ಮತ್ತು ಲಂಬಾಣಿ ಸಮುದಾಯಗಳನ್ನು ನೇರವಾಗಿ ಸಂದರ್ಶಿಸಿ ಮಾಹಿತಿಯನ್ನು ಪಡೆಯಲಾಗಿದೆ.

೧.೩. ಅಧ್ಯಯನದ ಮಹತ್ವ

೨೧ನೇ ಶತಮಾನದ ಈ ಆಧುನಿಕಯುಗದ ಸಂದರ್ಭದಲ್ಲಿ ಇಂದಿಗೂ ಪಾರಂಪರಿಕ ಜೀವನಶೈಲಿಯನ್ನೇ ಅವಲಂಬಿಸಿ ಬದುಕಲು ಪ್ರಯತ್ನಿಸುತ್ತಿರುವ ಬುಡಕಟ್ಟು ಸಮುದಾಯಗಳ ಸ್ಥಿತಿಗತಿ ನಿಜವಾಗಿಯೂ ಅಧ್ಯಯನ ಮಹತ್ವದ್ದಾಗಿದೆ. ಅದರಲ್ಲಿಯೂ ವಿಶೇಷವಾಗಿ ವಿಶ್ವಪರಂಪರೆಯ ತಾಣಗಳಲ್ಲಿ ಒಂದಾದ ಹಂಪೆಯ ಪರಿಸರದಲ್ಲಿ ವಾಸ್ತವ್ಯವನ್ನು ಹೊಂದಿರುವ ಸಮುದಾಯಗಳು ಪ್ರಸ್ತುತ ಸಂದರ್ಭದಲ್ಲೂ ಧಾರ್ಮಿಕ ಬದುಕನ್ನು ಅಪ್ಪಿಕೊಂಡು ಪೌರಾಣಿಕ ಅಂಶಗಳನ್ನು ಒಪ್ಪಿಯೂ ಆಧುನಿಕದ ಜೊತೆ ಜೊತೆಯಲ್ಲೂ ಬದುಕನ್ನೂ ಸಾಗಿಸುವವರಾಗಿದ್ದಾರೆ. ಇವರಲ್ಲಿ ಹಲವಾರು ಸಮುದಾಯಗಳಿಗೂ ಇಂದಿಗೂ ವಾಸದ ನೆಲೆಯ ಸಮಸ್ಯೆಯಿದ್ದರೆ, ಇನ್ನು ಕೆಲವರಿಗೆ ಹೊತ್ತಿನ ತುತ್ತಿಗಾಗಿ ಪರಿತಪಿಸುವಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆಯಾದಿನದ ಅನ್ನಕ್ಕಾಗಿ ಅಂದಿನ ದುಡಿಮೆಯನ್ನು ಆಧಾರವಾಗಿದೆ. ಈ ಹಿನ್ನೆಲೆಯುಳ್ಳ ಕೆಲವು ಬುಡಕಟ್ಟು ಸಮುದಾಯಗಳನ್ನು ಅಧ್ಯಯನ ಮಾಡುವ ಮೂಲಕ ಅವರ ಪ್ರಚಲಿತ ಸಮಸ್ಯೆಗಳನ್ನು ಅನಾವರಣಗೊಳಿಸುವುದು ಸಾಧ್ಯವಿದೆ. ಹಾಗೆಯೇ ಈ ಸಮುದಾಯಗಳಿಗಾಗಿ ಸರ್ಕಾರವು ಹಮ್ಮಿಕೊಳ್ಳುತ್ತಿರುವ ಅಭಿವೃದ್ಧಿ ಯೋಜನೆಗಳ ವಾಸ್ತವತೆಯನು ತಿಳಿಯುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ಅಧ್ಯಯನವು ಹಂಪೆ ಪರಿಸರದಲ್ಲಿ ಕಂಡುಬರವ ಬುಡಕಟ್ಟುಗಳ ಪ್ರಚಲಿತ ಬದುಕಿನ ಚಿತ್ರಣವನ್ನು ಅರಿಯಲು ಸಹಕಾರಿಯಾಗುತ್ತದೆ.

೧.೪. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಈ ಕೆಳಗೆ ದಾಖಲಿಸಿದ ವಿಧಾನಗಳನ್ನು ಅನುಸರಿಸಲಾಗಿದೆ.

೧. ಚಾರಿತ್ರಿಕ ವಿಧಾನ

ಈಗಾಗಲೇ ಈ ಸಮುದಾಯದ ಬಗ್ಗೆ ನಡೆದಿರುವ ಅಧ್ಯಯನಗಳನ್ನು ಅವಲೋಕಿಸಿ ವಿಷಯಗಳನ್ನು ತಿಳಿದುಕೊಳ್ಳಲಾಗುವುದು ಹಾಗೂ ಈ ಮಾಹಿತಿಗಳನ್ನು ಪ್ರೌಢ ಪ್ರಬಂಧ ಬರಹದಲ್ಲಿ ಪೂರಕವಾಗಿ ಬಳಸಿಕೊಳ್ಳಲಾಗುವುದು.

೨. ಸಂದರ್ಶನ ವಿಧಾನ

ಹಂಪೆಯ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಹಾಗೂ ಇತರ ಅಲೆಮಾರಿ ಸಮುದಾಯಗಳ ಜನರನ್ನು ಸಂದರ್ಶಿಸಿ ಮಾಹಿತಿಗಳನ್ನು ಸಂಗ್ರಹಿಸಲಾಗುವುದು

ಹಾಗೂ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಸಮುದಾಯಗಳ ವಿಶೇಷವಾಗಿ ಸಂಪರ್ಕಿಸಿ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ.

೩. ಅವಲೋಕನ ವಿಧಾನ

ಅಧ್ಯಯನಕ್ಕೆ ಒಳಪಡಿಸಿರುವ ಪ್ರದೇಶದಲ್ಲಿ ಕಂಡುಬರುವ ಬುಡಕಟ್ಟು ಸಮುದಾಯಗಳ ನಿತ್ಯದ ಬದುಕನ್ನು ಅವಲೋಕಿಸುವ ಮೂಲಕ ಅವರಲ್ಲಿ ಅಧ್ಯಯನ ವಿಷಯಕ್ಕೆ ಪೂರಕ ಮಾಹಿತಿಯನ್ನು ಸಂಗ್ರಹಿಸಿ ಬಳಸಿಕೊಳ್ಳಲಾಗುವುದು.

೪. ಪ್ರಶ್ನಾವಳಿ ವಿಧಾನ

ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲು ಪ್ರಶ್ನಾವಳಿಯನ್ನು ಸಿದ್ಧ ಪಡಿಸುವುದರ ಮೂಲಕ ಮತ್ತು ನೇರವಾಗಿ ಅವರಿಗೆ ಪ್ರಶ್ನೆಯನ್ನು ಕೇಳುವುದರ ಮೂಲಕ ಉತ್ತರಗಳನ್ನು ಪಡೆದುಕೊಂಡು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೧.೫. ಇಲ್ಲಿವರೆಗೆ ನಡೆದಿರುವ ಅಧ್ಯಯನಗಳು

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿರುವ "ಸ್ಥಳೀಯ ಚರಿತ್ರೆ" ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ ಎಂಬ ಗ್ರಂಥದ ಲೇಖಕರಾದ ಲಕ್ಷ್ಮಣ್ ತೆಲಗಾವಿ ಅವರು ತಮ್ಮ ಗ್ರಂಥದಲ್ಲಿ ಸಾವಿರಾರು ವರ್ಷಗಳ ಸುಧೀರ್ಘ ಮತ್ತು ಉಜ್ವಲ ಸಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಉಳಿಸಿಕೊಂಡು ಬಂದಿರುವ ಹಂಪೆಯ ಚರಿತ್ರೆಯನ್ನು ತಿಳಿಯಲು ಸಂಪೂರ್ಣ ಮಾಹಿತಿಯನ್ನು ನೀಡಿದ್ದಾರೆ. ಪ್ರತಿಯೊಂದು ಚರಿತ್ರೆಯು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುತ್ತದೆ. ಎಂಬುದು ಇವರ ಗ್ರಂಥದಲ್ಲಿ ತಿಳಿದು ಬರುತ್ತದೆ. ಹಂಪೆಯ ಸುತ್ತಲಿನ ಪರಿಸರದ ಬಗ್ಗೆ ತಿಳಿಸಿದ್ದಾರೆ. ಆದರೆ ಈ ಅಧ್ಯಯನವು ಹಂಪೆ ಪರಿಸರದ ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಗಮನಹರಿಸಬೇಕಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿರುವ "ಹಂಪೆಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು" ಅಧ್ಯಯನವು ಎಂಬ ಗ್ರಂಥದ ಲೇಖಕರಾದ ಚಲುವರಾಜ ಅವರು ತಮ್ಮ ಗ್ರಂಥದಲ್ಲಿ ಹಂಪೆಯ ಭೌಗೋಳಿಕ ಪರಿಸರದ ಮತ್ತು ಅಲ್ಲಿನ ಜಾನಪದ ಸಂಸ್ಕೃತಿಯ ಅಧ್ಯಯನವು ದಕ್ಷಿಣಾ ಭಾರತದ ಇತಿಹಾಸದಲ್ಲಿ ತನ್ನ ಸಾಂಸ್ಕೃತಿ ವೈಭವದ ಉತ್ತುಂಗ ಶಿಖರವನ್ನೇರಿದ ಮೆರೆದ ವಿಜಯನಗರ ಸಾಮ್ರಾಜ್ಯ, ಮೂಲತಃ ಹುಟ್ಟಿ ಬೆಳೆದು ಬಾಳಿದ್ದು ಈ ನೆಲದಲ್ಲಿ, ರಾಜಕೀಯಾರ್ಥಿಕ, ಸಾಮಾಜಿಕ, ಸ್ಥಿತಿಗತಿ ಆದಿವಾಸಿ ಸಮುದಾಯಗಳ ಮತ್ತು ಇಲ್ಲಿನ ಪಶುಪಾಲನೆ, ಕೃಷಿ, ರಾಜ್ಯ ಸಾಮ್ರಾಜ್ಯದವರೆಗೆ ಮಾನವನ ಸಮಗ್ರ ಸಂಸ್ಕತಿಕ

ಬದುಕುನ್ನು ಕಟ್ಟಿಕೊಡುವ ಪ್ರದೇಶವಾಗಿದೆ. ಆದರೆ ಈ ಅಧ್ಯಯನ ಹಂಪಿ ಪರಿಸರದ ಬುಡಕಟ್ಟುಗಳ ಸಾಮಾಜಿಕ ಸ್ಥಿತಿಗತಿಯ ಬಗ್ಗೆ ಗಮನಹರಿಸಬೇಕಾಗಿದೆ. ಜಗದೀಶ್ ಕುಮಾರ ಚ ಇವರ ಎಂ.ಫಿಲ್. ಪ್ರಬಂಧ (ಅಪ್ರಕಟಿತ) ಕನ್ನಡ ವಿಶ್ವವಿದ್ಯಾಲಯ ಹಂಪೆ, "ಕಮಲಾಪುರ ಬೇಡ ಬುಡಕಟ್ಟಿನ ಬೇಟೆ ಆಚರಣೆ" (ಒಂದು ಸಮಾಜ ಶಾಸ್ತ್ರೀಯ ಅಧ್ಯಯನ) ಎಂಬ ಪ್ರಬಂಧವು ಇದು ಇಲ್ಲಿನ ಬೇಡ ಬುಡಕಟ್ಟಿನ ಸಾಮಾಜಿಕ ಸ್ಥಿತಿಗತಿ ವೃತ್ತಿ, ಕೌಟುಂಬಿಕ ಜೀವನ, ನ್ಯಾಯಪದ್ಧತಿ, ವಿವರವಾಗಿ ತಿಳಿಸಲು ಮುಂತಾದವುಗಳನ್ನು ಕುರಿತು ಕ್ಷೇತ್ರಕಾರ್ಯ ಆಧಾರಿತ ಮಾಹಿತಿಗಳನ್ನು ಒದಗಿಸಿದ್ದಾರೆ.

ಸಿ.ವಿ.ಜಿ. ಪಬ್ಲಿಕೇಷನ್ಸ್ (ಬೆಂಗಳೂರು) ಪ್ರಕಟಿಸಿರುವ "ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ" ಎಂಬ ಗ್ರಂಥದ ಲೇಖಕರಾದ ಎನ್. ಚಿನ್ನಸ್ವಾಮಿ ಸೋಸಲೆ, ಅವರು ತಮ್ಮ ಗ್ರಂಥದಲ್ಲಿ ವಿಜಯನಗರದ ಅರಸರ ಆಳ್ವಿಕೆಯಲ್ಲಿ ದೇಶವು ಸುವ್ಯವಸ್ಥಿತವೊ ಸುಭದ್ರವೊ ಆಗಿದ್ದು ಧರ್ಮ, ಸಂಸ್ಕೃತಿ, ಕಲೆ, ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಹಾಗೂ ಸಾಹಿತ್ಯದ ಬೆಳವಣಿಗೆಗೆ ಸಾರ್ವತ್ರಿಕ ಉತ್ತೇಜನ ದೊರೆಯಲು ಇತಿಹಾಸದ ನಿರ್ಮಾಣಕ್ಕೆ ಸಹಕಾರಿಯಾಗಿದೆ. ಇದು ನನ್ನ ಅಧ್ಯಯನಕ್ಕೆ ಕರ್ನಾಟಕ ರಾಜ್ಯ ಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯದ ಜನ ಸಾಮಾನ್ಯರ ಜೀವನಗತಿ ಅಳಿಯಲು ಸಹಕಾರಿಯಾಗಿದೆ.

೧.೬ ಅಧ್ಯಯನದ ಅವಶ್ಯಕತೆ

ಭಾರತದ ಮೂಲ ನಿವಾಸಿಗಳನ್ನು ಗಮನಿಸಿದಾಗ ಅವರು ಮತಾಂತರ, ನಿರುದ್ಯೋಗ, ಬಡತನ, ಹಸಿವು ಮುಂತಾದ ಸಮಸ್ಯೆಗಳಿಂದ ತೊಳಲಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪರಿಶೋಧಿಸಬೇಕಾದ ವಿಷಯವು ಹೆಚ್ಚು ಹೆಚ್ಚು ಕ್ಷೇತ್ರಾಧಾರಿತವಾಗಿರುವುದರಿಂದ ಬರುವ ಫಲಿತತೆಗಳು, ಸಮುದಾಯದ ತಾರತಾಮ್ಯದ ಕ್ರೂರ ವ್ಯವಸ್ಥೆಯಲ್ಲಿ ತೊಳಲಾಡುತ್ತಿರುವ ಹಂಪೆ ಪರಿಸರದಲ್ಲಿ (ಅಂದು ಇಂದು) ನೆಲೆ ನಿಂತುಕೊಂಡಿರುವ ಅಥವಾ ನೆಲೆಸಿರುವ ಕೆಲವು ಬುಡಕಟ್ಟು ಸಮುದಾಯಗಳ ಬಿಡುಗಡೆಗೆ ಹಾಗೂ ಅಭಿವೃದ್ಧಿಗೆ ಪೂರಕವಾದ ಮಾಹಿತಿಯನ್ನು ಒದಗಿಸಬಲ್ಲದು. ಈ ಕಾರಣ ಸಂವಿಧಾನದ ಅನುಸೂಚಿಯಲ್ಲಿ ತೋರಿಸಲ್ಪಟ್ಟ ಹಲವಾರು ಸಮುದಾಯಗಳ ಬಗ್ಗೆ ನಡೆದ ಅಧ್ಯಯನದ ಫಲಿತತೆಗಳು ರಾಷ್ಟ್ರಕ್ಕೆ ಹೇಗೆ ಸದುಪಯೋಗವಾಗಬಲ್ಲದೋ ಹಾಗೆ ಈ ಸಂಶೋಧನೆಯು ಸಹ ಸದುಪಯೋಗವಾಗಬಲ್ಲದು.

* * *

ಅಧ್ಯಾಯ ೨

ಹಂಪೆ ಪರಿಸರದ ಭೌಗೋಳಿಕ ಹಾಗೂ ಚಾತ್ರಿಕ ಹಿನ್ನೆಲೆ

೨.೧. ಪೌರಾಣಿಕ ಹಿನ್ನೆಲೆ

೨.೨. ಚಾರಿತ್ರಿಕ ಹಿನ್ನೆಲೆ

೨.೩. ಸಾಮಾಜಿಕ ಹಿನ್ನೆಲೆ

೨.೪. ವಿಶ್ವಪರಂಪರೆ ಮಾನ್ಯತೆ ಹಿನ್ನೆಲೆ

ಭೌಗೋಳಿಕ ಹಿನ್ನೆಲೆ

ಹಂಪೆಯು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿರುವ ಒಂದು ಸಣ್ಣ ಗ್ರಾಮ. ಇದು ತಾಲೂಕು ಕೇಂದ್ರದಿಂದ ಸುಮಾರು ೧೪ ಕಿ.ಮೀ ಅಂತರದಲ್ಲಿದೆ. ಮತ್ತು ಇದು (ಹಂಪೆ) ೧೫°-೩೦° ಕರ್ನಾಟಕದ ಪೂರ್ವ ಭಾಗದ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿದೆ ೧೪°-೩೦° ಮತ್ತು ಉತ್ತರ ಅಕ್ಷಾಂಶ ಹಾಗೂ ೭೫°-೪೦° ಮತ್ತು ೭೭°-೧೧° ಪೂರ್ವ ರೇಖಾಂಶ ಇವುಗಳ ಮಧ್ಯದಲ್ಲಿದೆ. ಹಾಗೂ ಹಂಪೆಯು ಉತ್ತರದಲ್ಲಿ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು, ಪಶ್ಚಿಮದಲ್ಲಿ ಧಾರವಾಡ ಜಿಲ್ಲೆ ದಕ್ಷಿಣದಲ್ಲಿ ಹೊಸಪೇಟೆ ತಾಲೂಕು ಮತ್ತು ಪೂರ್ವದಲ್ಲಿ ಬಳ್ಳಾರಿ ಜಿಲ್ಲೆಯಿಂದ ಸುತ್ತುವರಿದಿದೆ ಇದು ಜಾಗತಿಕ ಇತಿಹಾಸ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ಬೃಹತ್ ಏಕಶಿಲಾ ಬೆಟ್ಟಗಳು, ದೊಡ್ಡ ಗ್ರಾನೈಟ್ ಕಲ್ಲುಗುಂಡುಗಳ ರಾಶಿಯನ್ನು ಹೊದ್ದುಕೊಂಡಿರುವ ಬೆಟ್ಟಸಾಲುಗಳ ಪ್ರದೇಶ ಇದಾಗಿದೆ. ನಿಸರ್ಗ ನಿರ್ಮಿತವಾದ ಬೃಹತ್ ಗವಿಗಳು, ಕಂದರಗಳು, ಬಂಡೆಗಳ ಕಡಿದಾದ ಇಳಿಜಾರುಗಳು ಇಲ್ಲಿನ ನಿಸರ್ಗ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿವೆ. ಬೆಟ್ಟಗುಡ್ಡಗಳ ನಡುವೆ ನುಸುಳಿ ಹರಿಯುವ ತುಂಗಭದ್ರಾ ನದಿ, ಈ ಪ್ರದೇಶಕ್ಕೆ ಮತ್ತೊಂದು ವರದಾನ ಈ ಪ್ರದೇಶದ ಜನರ ಜೀವನದಿಯೂ ಹೌದು. ನದಿಯ ಎಡಬಲ ದಂಡೆಗಳ ಹಲವು ಸ್ಥಳಗಳಲ್ಲಿ ಆದಿಮ ಸಂಸ್ಕೃತಿಯ ನೆಲೆಗಳನ್ನು ಗುರುತಿಸಲಾಗಿದೆ. ಅಲ್ಲದೆ ಅಲ್ಲಲ್ಲಿ ಕಂಡುಬರುವ ಅಲ್ಪಸ್ವಲ್ಪ ಸಮತಟ್ಟಾದ ಮೈದಾನ ಪ್ರದೇಶ ವ್ಯವಸಾಯಕ್ಕೆ ಯೋಗ್ಯವಾದ ಫಲವತ್ತಾದ ಮಣ್ಣನ್ನು ಹೊಂದಿದೆ. ಈ ಕಾರಣಕ್ಕಾಗಿ ವಿಜಯನಗರದ ರಾಜರು ತಮ್ಮದೇ ಆದ ಪಾರಂಪರಿಕ ತಂತ್ರಜ್ಞಾನವನ್ನು ಬಳಸಿ ತುಂಗಭದ್ರಾ ನದಿಯ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳುವ ನಿಟ್ಟಿನಲ್ಲಿ ಮಹತ್ತರ ಕಾರ್ಯನಿರ್ವಹಿಸಿದ್ದಾರೆ.

ಹಂಪೆಯಿಂದ ದಕ್ಷಿಣಕ್ಕೆ ಕಂಡುಬರುವ ಜಂಬುನಾಥನಗುಡ್ಡ, ಪ್ರಕೃತಿ ನಿರ್ಮಿತ ಮತ್ತೊಂದು ನೈಸರ್ಗಿಕ ಸಂಪತ್ತಿನ ರಾಶಿ. ಈ ಪ್ರದೇಶ ಪುರಾತನ ಜನರ ಕಬ್ಬಿಣ ತಯಾರಿಕೆಯ ಕೇಂದ್ರವಾಗಿತ್ತು. ಕಬ್ಬಿಣದ ಕಲ್ಲುಗಳನ್ನು ಕರಗಿಸಿಬೀಡು ಕಬ್ಬಿಣವನ್ನು ತಯಾರಿಸುತ್ತಿದ್ದ ಬಗೆಗೆ ಕಬ್ಬಿಣದ ಕುಲುಮೆಯ ತ್ಯಾಜ್ಯವಸ್ತು ಕಂಡುಬರುತ್ತದೆ. ಈ ಪ್ರದೇಶದಲ್ಲಿ ಇಂದಿಗೂ ವಾಸಮಾಡುತ್ತಿರುವ ಮುದ್ದೆ ಕಂಬಾರ ಸಮುದಾಯ ಅವರು ಪೂಜಿಸುತ್ತಿದ್ದ ಆದಿ ದೇವತೆ 'ಕಾಳಿ' ದೈವದ ನೆಲೆಗಳು ಸಾಕ್ಷಿ ನುಡಿಯುತ್ತವೆ. ಅಲ್ಲದೆ ಗೊಲ್ಲರ ಹಟ್ಟಿ, ಢಣಾಯಕನ ಕೆರೆ, ನಾಗೇನಹಳ್ಳಿ, ಕಾಕುಬಾಳು, ವಡ್ಡರಹಳ್ಳಿ ಸೊಂಡೂರಿನ ಪರಿಸರಗಳಲ್ಲಿ ಬೀಡು ಕಬ್ಬಿಣ ತಯಾರಿಕೆಯ ನೆಲೆಗಳು ಹಾಗೂ ಅವುಗಳ ಅವಶೇಷಗಳು ವಿಪುಲವಾಗಿ ಕಂಡುಬರುತ್ತವೆ. ಇಲ್ಲಿನ ಹೇರಳವಾದ ಬೆಟ್ಟರಾಶಿಯನ್ನು ಗಮನಿಸಿದಾಗ ಈ ಪ್ರದೇಶವು ಸಮೃದ್ಧ ಸಸ್ಯರಾಶಿಯ ತಾಣವಾಗಿತ್ತೆಂಬುದಾಗಿ ತಿಳಿದುಬರುತ್ತದೆ. ಅಲ್ಲದೆ ಇಲ್ಲಿನ ಆದಿಮ ಸಂಸ್ಕೃತಿಯ ಜನರು ಚಿತ್ರಿಸಿರುವ ಹುಲಿ, ಚಿರತೆ, ಆನೆಯಂತಹ ಚಿತ್ರಗಳು ಅದಕ್ಕೆ ಪೂರಕ ಅಂಶವಾಗಿದೆ.

ಇಲ್ಲಿನ ಭೌಗೋಳಿಕ ಪರಿಸರದಲ್ಲಿ ವಿವಿಧ ಸಮುದಾಯಗಳು ನೆಲೆ ನಿಲ್ಲಲ್ಲು ಮುಖ್ಯಕಾರಣವಾಗಿದೆ. ಇದು ನದಿಬಯಲಿನ ಪ್ರದೇಶವಾದ್ದರಿಂದ ಪಶುಸಂಗೋಪನಾ ವೃತ್ತಿಯ ಕುರುಬರು, ಗೊಲ್ಲರು, ವಿಶೇಷವಾಗಿ ಈ ಪ್ರದೇಶದಲ್ಲಿ ಕಂಡುಬರುತ್ತಾರೆ. ಬೇಟೆಯಾಡಲು ಅನುಕೂಲವಾದ ಅರಣ್ಯ ಪ್ರದೇಶ ಹಾಗೂ ಪ್ರಾಣಿವರ್ಗ ಇಲ್ಲಿ ಹೆಚ್ಚಾಗಿದುದ್ದರಿಂದ ಬೇಡರು, ಅಡವಿಚುಂಚರು, ಮ್ಯಾಸಬೇಡರು, ಮುಂತಾದ ಬುಡಕಟ್ಟು ಸಮುದಾಯಗಳು ಈ ಪ್ರದೇಶದಲ್ಲಿ ನೆಲೆಸಿದ್ದಾರೆ. ಇವರೆಲ್ಲ ವಿಜಯನಗರ ಕಾಲಕ್ಕಿಂತ ಪೂರ್ವದಿಂದಲೂ ಈ ಪ್ರದೇಶದಲ್ಲಿ ನೆಲೆನಿಂತ ಸಮುದಾಯಗಳಾಗಿವೆ.

ತುಂಗಭದ್ರ ನದಿ ಬಲದಂಡೆಯ ಮೇಲೆ ಕಂಡುಬರುವ ಹಂಪೆಯು ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ತನ್ನ ಸಾಂಸ್ಕೃತಿಕ ವೈಭವದ ಉತ್ತುಂಗ ಶಿಖರವನ್ನೇರಿ ಮೆರೆದು ಸುಮಾರು ೨೩೬ ವರ್ಷಗಳ ಕಾಲ ರಾಜ್ಯಭಾರ ಮಾಡಿರುವುದು ತಿಳಿದುಬರುತ್ತದೆ. ಹಾಗೂ ಸಾಮ್ರಾಜ್ಯವು ಕ್ರಮೇಣ ಪೂರ್ವ ಪಶ್ಚಿಮವಾಗಿ ಬಂಗಾಳಕೊಲ್ಲಿಯಿಂದ ಅರಬ್ಬಿ ಸಮುದ್ರದವರೆಗೆ, ಉತ್ತರದ ದಕ್ಷಿಣಾವಾಗಿ ಓರಿಸ್ಸಾದಿಂದ ಕನ್ಯಾಕುಮಾರಿಯವರೆಗೆ ತನ್ನ ಅಧಿಕಾರವನ್ನು ವಿಸ್ತರಿಸಿಕೊಂಡಿತು. ಆದುದರಿಂದ ಈ ಸಾಮ್ರಾಜ್ಯವು ಇತಿಹಾಸದಲ್ಲೇ ಅಪಾರ ಖ್ಯಾತಿಯನ್ನು ಪಡೆದಿದೆ. ಹಾಗೂ ಈ ಭಾಗದಲ್ಲಿ ಪ್ರಾಗೈತಿಹಾಸ ಕಾಲದಿಂದಲೇ ಜನವಸತಿ ಇತ್ತು. ಇದಕ್ಕೆ ಪೂರಕವಾಗಿ ಇಲ್ಲಿನ ಭೌಗೋಳಿಕ ಪೂರಕ ಅಂಶವಾಗಿ ಕಾಣುತ್ತದೆ. ಹಾಗೂ ಇದರ ಚರಿತ್ರೆಯನ್ನು ಸಾರಿ ಹೇಳುವ ಅಗಣಿತ ಮೌಖಿಕ ಹಾಗೂ ಲಿಖಿತ ಸಾಹಿತ್ಯಾಧಾರಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ದೊರಕಿರುವ ಆಕರಗಳಲ್ಲಿ ಹಂಪೆಯನ್ನು ನಾನಾ ಹೆಸರುಗಳಿಂದ

ಕರೆಯಲಾಗಿದೆ. ಉದಾಹರಣೆಗೆ ಪಂಪಾಕ್ಷೇತ್ರ, ಪಂಪಾತೀರ್ಥ, ಪಂಪಾನಗರಿ, ವಿರೂಪಾಕ್ಷತೀರ್ಥ, ಕಿಷ್ಕಿಂದೆ ಮುಂತಾದ ಪ್ರಾಚೀನ ಹೆಸರುಗಳು ಈ ಪ್ರದೇಶಕ್ಕಿವೆ.

೨.೧. ಪೌರಾಣಿಕ ಹಿನ್ನೆಲೆ

ಪ್ರತಿಯೊಂದು ಪ್ರದೇಶವು ತನ್ನದೇಯಾದ ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವುದು ಚರಿತ್ರೆಯ ಬರವಣಿಗೆಗಳ ಮೂಲಕ ತಿಳಿದುಬರುತ್ತದೆ. ಹಂಪಿ ಪರಿಸರವು ಪೌರಾಣಿಕ ಹಿನ್ನೆಲೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವುದು ತಿಳಿದುಬರುವ ಸಂಗತಿಯಾಗಿದೆ. ಈ ಪರಿಸರವನ್ನು ಕಿಷ್ಕಿಂಧೆ ಎಂದು ಕರೆಯಲಾಗಿದೆ. ವಾಲ್ಮೀಕಿ ರಾಮಾಯಣದ ಪ್ರಕಾರ ಮಾಲ್ಯವಂತಗಿರಿ, ಋಷ್ಯಮುಖ, ಕಿಷ್ಕಿಂದಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಜಂಬುನಾಥಗಿರಿ, ಸೋಮಪರ್ವತ ಮುಂತಾದ ಹೆಸರುಗಳನ್ನು ಸೂಚಿಸುವ ಗಿರಿಪರ್ವತಗಳು ಇಲ್ಲಿ ಕಂಡುಬರುತ್ತವೆ. ಅಲ್ಲದೆ ರಾಮಾಯಣದಲ್ಲಿ ಉಲ್ಲೇಖಗೊಂಡಿರುವ ಕಾರ್ತಿಕೇಯನ ತಪೋವನ ಕುಡಿತಿನಿಯಲ್ಲಿದೆ. ಸಂಡೂರು ಕುಮಾರಸ್ವಾಮಿಯ ಬೆಟ್ಟಕೂಡ ಈ ಕಾವ್ಯದಲ್ಲಿ ಉಲ್ಲೇಖಗೊಂಡಿರುವುದು ಕಂಡುಬರುತ್ತದೆ.

ಕಿಷ್ಕಿಂದೆ ಎಂದು ಕರೆಯಿಸಿಕೊಂಡ ಪರ್ವತವು ಪರ್ವತಗಳಲ್ಲಿಯೇ ಅತ್ಯಂತ ದೊಡ್ಡದೆಂದು ಪ್ರಖ್ಯಾತಿ ಪಡೆದಿದೆ. ರಾಮಾಯಣ ಮಹಾಕಾವ್ಯವನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದ ರಾಮದಾಸ, ಸರ್ದಾರ್ ಕೈಬ್, ರಾಮದಾಸ ಹೀರಾಲಾಲ್, ಸಂಕಾಲಿಯ ಮೊದಲಾದವರು ಕಿಷ್ಕಿಂಧೆಯು ಹಂಪಿ ಪರಿಸರದಲ್ಲಿದೆ ಎಂದು ತಿಳಿಸಿದ್ದಾರೆ.[1] ಅಲ್ಲದೆ ರಾಮಾಯಣದಲ್ಲಿ ಉಲ್ಲೇಖವಾದ ಸಾಲವೃಕ್ಷ ಎಂಬ ಮರಗಳು ಕಿಷ್ಕಿಂಧೆ ಪ್ರದೇಶದಲ್ಲಿ ಬೆಳೆಯುತ್ತಿದ್ದವು ಎಂಬ ಅಂಶವನ್ನು ಗಮನಿಸಿದಾಗ ಇದು ದಂಡಕಾರಣವಾಗಿತ್ತೆಂದು ತಿಳಿಸಿರುವುದು ಕೂಡ ಗಮನಾರ್ಹವಾಗಿದೆ. ರಾಮಾಯಣ ಕಾವ್ಯದಲ್ಲಿ ಅತ್ಯಂತ ರೋಮಾಂಚನಕಾರಿಯಾಗಿ ಬೆಕ್ಕಿಗೆ ಚಲ್ಲಾಟ ಇಲಿಗೆ ಪ್ರಾಣ ಸಂಗಟ ಎಂಬಂತಹ ಸ್ಥಿತಿಯಲ್ಲಿ ರಾಮನಿಗೆ ಸಹಾಯ ಮಾಡಿದ ವಾನರ ಸ್ಥಾನವೇ ಹಂಪಿ ಪರಿಸರವಾಗಿದೆ. ರಾಮಾಯಣದಲ್ಲಿ ಹಂಪಿ ಪರಿಸರವು ಪ್ರಮುಖವಾಗಿ ದಾಖಲಾಗಿದೆ.

೧೦೭೬ರ ದೇವಿಘಾಟ್ ಶಾಸನದಲ್ಲಿ ತುಂಗಭದ್ರದ ದಡದಲ್ಲಿರುವ ಕಿಷ್ಕಿಂಧ ಪರ್ವತದ ಉಲ್ಲೇಖವಿರುವುದನ್ನು ಕಾಣಬಹುದಾಗಿದೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯವರು ೧೯೭೨ರಲ್ಲಿ ಪ್ರಕಟಿಸಿದ ಕನ್ನಡ ವಿಶ್ವಕೋಶ ಸಂಪುಟ ನಾಲ್ಕರಲ್ಲಿ (೭೬೭ನೇ ಪುಟದಲ್ಲಿ) ಕಿಷ್ಕಿಂಧೆಯು ವಾಲಿ ಸುಗ್ರೀವರ ರಾಜಧಾನಿ, ರಾಮಾಯಣ ಕಾಲದ ಪ್ರಸಿದ್ಧ ಪಟ್ಟಣವಾಗಿತ್ತು. ಈಗ ಇದು ಬಳ್ಳಾರಿ ಜಿಲ್ಲೆಯ ಹಂಪಿಯ ಸಮೀಪವಿದೆಯೆಂದು ತಿಳಿಸಿದ್ದಾರೆ. ಹಾಗಾಗಿ ರಾಮಾಯಣದಂತಹ ಕಾಲದಲ್ಲಿ ಈ ಪ್ರದೇಶವಿದ್ದುದರಿಂದ ಈ ಮಹಾಕಾವ್ಯವು

ಈ ಪ್ರದೇಶದ ಪೌರಾಣಿಕ ಹಿನ್ನೆಲೆಯನ್ನು ತಿಳಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಹೀಗೆ ಇನ್ನೂ ಕೆಲವು ಸ್ಥಳೀಯ ಪುರಾಣಗಳ ರೂಪ ಈ ಕೆಳಗಿನಂತೆ ವಿವರಿಸಲಾಗಿದೆ.

ಹಂಪೆಯ ಪ್ರದೇಶದಲ್ಲಿರುವ ಋಷ್ಯ ಮೂಕಾಶ್ರಮ, ಮತಂಗ ಋಷ್ಯಾಶ್ರಮಿಗಳು ಬಹಳ ಪ್ರಾಚೀನ ಕಾಲದಿಂದಲೂ ಹಂಪೆ ಸಾಧು ಸಂತರನ್ನು, ಋಷಿ ಮುನಿಗಳನ್ನು ಆಕರ್ಷಿಸುತ್ತಿದ್ದುದಕ್ಕೆ ಸಾಕ್ಷಿಯಾಗಿವೆ. ಸದಾಕಾಲ ಹರಿಯುತ್ತಿರುವ ತುಂಗಭದ್ರೆ ಬಂಡೆಗಲ್ಲುಗಳಿಂದ ಕೂಡಿ ಪರ್ವತಶ್ರೇಣಿ ಇತ್ಯಾದಿಗಳು ತಪೋಭೂಮಿಗೆ ಅನುಕೂಲಕರ ಸನ್ನಿವೇಶಗಳು ಪುರಾಣದ ವಿಭಿನ್ನರೀತಿಯಲ್ಲಿ ವಿಭಿನ್ನ ಕಥೆಗಾರರು ಅಥವಾ ಪುರಾಣಕಾರರು ತಮ್ಮಗೆ ದೊರಕ್ಕಿದ ವಿಷಯಗಳಿಂದ ಅವರವರ ದೃಷ್ಟಿಯಿಂದ ಚಿತ್ರಿಸಿದನ್ನು ಕಂಡುಬರುತ್ತದೆ.

ಸೀತೆ ಸೆರಗು

ಸೀತಾದೇವಿ ತುಂಗಭದ್ರ ನದಿಯಲ್ಲಿ ಸ್ನಾನ ಮಾಡಿದಳೆಂದು ಹೇಳುವ ಸೀತಾಕುಂಡ, ರಾವಣ ಸೀತೆಯನ್ನು ಎಳೆದೊಯ್ಯುತ್ತಿರುವಾಗ ಅವಳ ಸೆರಗು ಕಲ್ಲಿನ ಮೇಲೆ ಎಳೆಯುತ್ತ ಹೋಗಿ ಗೆರೆ ಬಿದ್ದಿದೆ.ಎಂದು ಹೆಳುವ ಸೀತೆಯ ಸೆರಗು ಮೊದಲಾದವನ್ನು ಮುಗ್ಧ, ಭಾವುಕ ಜನರು ಈಗಲೂ ಗುರುತಿಸುತ್ತಾರೆ. ಹೊಸಪೇಟೆಯಿಂದ ಆನೆಗೊಂದಿಗೆ ಹೋಗುವ ಮಾರ್ಗದಲ್ಲಿ ಕಲ್ಲುಬಂಡೆಗಳ ಮಧ್ಯೆ ಒಂದು ಹೊಂಡವಿದ್ದು ಅದನ್ನು ''ಪಂಪಾಸರೋವರ'' ಎಂದು ಕರೆಯಲಾಗುತ್ತದೆ. ಶಿವನೊಲುಮೆ ಪಡೆಯಲು ಪಾರ್ವತಿ ತಪಸ್ಸು ಮಾಡಿದ್ದು ಇದೆ ಸ್ಥಳದ ಒಂದು ಗುಹೆಯಲ್ಲೆಂದು ಹೇಳುತ್ತಾರೆ. ಅಲ್ಲಿಯ ಇನ್ನೊಂದು ಗವಿಯಲ್ಲಿ ಶಬರಿ ಶ್ರೀರಾಮನ ಬರುವಿಗಾಗಿ ಬಹುದಿನ ಕಾಯುತ್ತಿದ್ದು ಅವನು ಬಂದಾಗ ಅವನಿಗೆ ಹಣ್ಣನ್ನಿತ್ತು ತೃಪ್ತಿ ಪಡಿಸಿದಳಂತೆ ಶಿವಪಾವರ್ತಿಯರ ವಿವಾಹ ನೆರವೇರಿದ್ದು ಈ ಪುರಾಣಗಳ ಪ್ರಕಾರ ತುಂಗಭದ್ರೆಗೆ ಆ ಪ್ರದೇಶದಲ್ಲಿ ''ಪಂಪಾ ಸರಸ್'' ಎಂಬ ಹೆಸರಿತ್ತು. ಇದು ದಕ್ಷಿಣಕ್ಕಿರುವ ಹೇಮಕೂಟದಲ್ಲಿ ಪಾರ್ವತಿಗೆ ''ಪಂಪಾ'' ಎಂಬ ಹೆಸರು ಇದೆ ಆದುದರಿಂದ ಅವಳು ತಪಸ್ಸು ಮಾಡಿದ ಆ ಪವಿತ್ರ ಸ್ಥಳಕ್ಕೆ 'ಪಂಪಾತೀರ್ಥ', 'ಪಂಪಾಕ್ಷೇತ್ರ' ಹೆಸರುಗಳು ಬಂದಿರುವುದು ಕಾಣುತ್ತವೆ. ಶಿವನ ವಾಸಸ್ಥಾನ ಹೇಮಕೂಟವಾಗಿದ್ದು ಅವನಿಗೆ ವಿರುಪಾಕ್ಷ ಹೆಸರಿರುವುದರಿಂದ ಆ ಸ್ಥಳವನ್ನು ವಿರುಪಾಕ್ಷ ತೀರ್ಥ ಎಂದು ಕರೆಯಲಾಯಿತು.

ಹನುಮನ ಸೆಳೆವು

"ಹಂಪೆಯನ್ನು ಪುರಾತನ ಕಿಷ್ಕಿಂದೆ ಎಂದು ಭಾವಿಸಲಾಗುತ್ತದೆ. ಪುರಾತನ ಕಿಷ್ಕಿಂಧೆಗೆ ಸಂಬಂಧಿಸಿದಂತೆ ಅನೇಕ ಐತಿಹ್ಯಗಳು ಇಲ್ಲಿ ಪ್ರಚಲಿತದಲ್ಲಿವೆ. ಆದರಲ್ಲಿ ಹನುಮಾನ ಸೆಳೆವು ಮುಖ್ಯವಾದುದು. ಇದಕ್ಕೆ ಸಂಬಂಧಿಸಿದ ಒಂದು ಕತೆ ಈ ರೀತಿ ಇದೆ."

ಹನುಮಂತನ ತಾಯಿ ಅಂಜನದೇವಿ ಹಂಪೆ ಹೊಳೆಯ ಪಕ್ಕದಲ್ಲಿರುವ ಅಂಜನಾದ್ರಿ ಪರ್ವತದಲ್ಲಿ ವಾಸಿಸುತ್ತಿದ್ದಳು. ಕಾಲ ಕಳೆಯುತ್ತಿರುವಾಗ ಆಕೆ ಗಾಳಿಯ ಸಾಹವಾಸದಿಂದ ಹನುಮಂತನಿಗೆ ಜನ್ಮ ನೀಡುತ್ತಾಳೆ. ಜನ್ಮ ನೀಡಿದ ವೇಳೆಯಲ್ಲಿ ತನ್ನ ದೇಹವನ್ನು ತೊಳೆಯಲು ಆಕೆಗೆ ನೀರು ಬೇಕಾಗಿತ್ತು. ಆದರೆ ಆಕೆಯ ಮನೆ ಇರುವು ಬೆಟ್ಟದ ಮೇಲೆ ಮೊದಲೇ ತಂದು ಇಟ್ಟುಕೊಂಡಿದ್ದ ನೀರು ಮುಗಿದಿತ್ತು. ಇಂತಹ ವೇಳೆಯಲ್ಲಿ ಅಂಜನಾದೇವಿ ಚಿಂತಾಕ್ರಾಂತಳಾಗಿ ಕುಳಿತಿರುವಾಗ ಬಾಲಹನುಮಂತನು ಬೆಟ್ಟವನ್ನು ಇಳಿದುಬಂದು ಹರಿಯುವ ಹೊಳೆಗೆ ತನ್ನ ಕೈಯನ್ನು ಅಡ್ಡ ಮಾಡಿ, ಅಂಜನಾದ್ರಿ ಬೆಟ್ಟದ ಕಡೆಗೆ ಸ್ವಲ್ಪ ನೀರು ಹರಿದು ಹೋಗುವಂತೆ ಮಾಡುತ್ತಾನೆ. ಅಂದಿನಿಂದ ಹಂಪೆ ಹೊಳೆಯು ಋಷ್ಯಮೂಕ ಪರ್ವತವನ್ನು ಬಳಸಿ ಎರಡು ಭಾಗವಾಗಿ ಹರಿಯಲು ಆರಂಭಿಸಿತು. ಮೊದಲು ವಿರೂಪಾಕ್ಷ ದೇವಸ್ಥಾನದ ಇದಿರುಭಾಗದಲ್ಲಿ ಮಾತ್ರ ಹರಿಯುತ್ತಿದ್ದ ಹಂಪೆ ಹೊಳೆ ಈ ಘಟನೆಯ ನಂತರ ಋಷ್ಯಮೂಕ ಪರ್ವತದ ಎಡಬಲಗಳಲ್ಲಿ ಹರಿಯತೊಡಗಿತು. ಹೀಗೆ ಹಂಪೆ ಹೊಳೆಯು ಎರಡು ಭಾಗವಾಗಿ ಹರಿಯುವ ಸ್ಥಳಕ್ಕೆ ಹನುಮನ ಸೆಳವು ಎಂಬ ಹೆಸರು ಬಂತು.[೧]

ದುಂದುಭಿ ಗುಹೆ

ಹೊಳೆಯ ತೀರದಲ್ಲಿ ಅಂದರೆ ಚಕ್ರತೀರ್ಥದಲ್ಲಿ ಈ ಗುಹೆ ಇದಕ್ಕೆ ಸಂಬಂಧಿಸಿದಂತೆ ಒಂದು ಕತೆ ಇದೆ. ಪಂಚ ಕನ್ಯೆಯರಲ್ಲಿ ಒಬ್ಬಳಾದ ತಾರಾದೇವಿಯನ್ನು, ಸುಗ್ರೀವನ ಸಾಹಸ ಮತ್ತು ಬುದ್ಧಿವಂತಿಕೆಗೆ ಮೆಚ್ಚಿ, ಅವಳ ತಂದೆ ತಾಯಿಗಳಿಗೆ ಸುಗ್ರೀವನಿಗೆ ಮದುವೆ ಮಾಡಿಕೊಡುತ್ತಾರೆ. ಒಮ್ಮೆ ತಾರಾದೇವಿ ಮತ್ತು ಸುಗ್ರೀವ ವಿಹಾರಕ್ಕೆಂದು ಹಂಪೆಯಲ್ಲಿ ಅಡ್ಡಾಡುತ್ತಾರೆ. ಆಗ ತಾರೆಯನ್ನು ಕಂಡು ಮೋಹಿಸಿದ ದುಂದುಭಿ ಎಂಬ ರಾಕ್ಷಸ ಆಕೆಯನ್ನು ಪಡೆಯಲು ಸುಗ್ರೀವನೊಡನೆ ಯುದ್ಧ ಮಾಡುತ್ತಾನೆ ಇವರಿಬ್ಬರ ಸೆಣಸಾಟ ದೃಶ್ಯ ಕಂಡು ಸುಗ್ರೀವನನ್ನು ಕಾಪಾಡಲು ಅವರ ಅಣ್ಣನಾದ ವಾಲಿಯು ಬರುತ್ತಾನೆ. ದೂರದಿಂದಲೇ ವಾಲಿಯನ್ನು ನೋಡಿದ ದುಂದುಭಿಯು ಪಕ್ಕದಲ್ಲಿ ಇದ್ದು ಗುಹೆಯೊಂದರ ಒಳಹೊಕ್ಕು ಅಡಗಿ ಕುಳಿತನು. ಆಗ ಅಲ್ಲಿಗೆ ಬಂದ ವಾಲಿಯು ಸುಗ್ರೀವನನ್ನು ನಡೆದ ಘಟನೆಯ ಬಗ್ಗೆ ಕೇಳಿದಾಗ, ಸುಗ್ರೀವನು ನಡೆದದ್ದನ್ನೆಲ್ಲ ತಿಳಿಸಿದನು. ಅದನ್ನು ಕೇಳಿ ಕೋಪಿಸಿಕೊಂಡ ವಾಲಿ ಆ ಗುಹೆಯೊಳಗೆ ನುಗ್ಗಿ ಅಡಗಿಕುಳಿತ್ತಿದ್ದ ದುಂಧುಭಿಯನ್ನು ಕೊಲ್ಲುತ್ತಾನೆ. ಆದ್ದರಿಂದ ಈ ಗುಹೆಗೆ ದುಂಧುಬಿ ಗುಹೆಯೆಂದು ಕರೆಯುತ್ತಾರೆ.[೨]

ಅಂಜನಾದ್ರಿ ಪರ್ವತ

ಹನುಮಂತನ ತಾಯಿ ಅಂಜನಾದೇವಿಯು ಈ ಪರ್ವತದಲ್ಲಿ ವಾಸವಾಗಿದ್ದಳೆಂದು ಜನರು ಹೇಳುತ್ತಾರೆ ಹಂಪೆ ಹೊಳೆಯ ಎಡದಂಡೆಗೆ ಕಂಡುಬರುವ ಹನುಮನ ಹಳ್ಳಿಯ ಸಮೀಪದ

ಈ ಪರ್ವತದಲ್ಲಿ ಇಂದು ಅನೇಕ ಸಂತರು ನೆಲೆಯಾಗಿದ್ದು ಹನುಮ ಜಯಂತಿಯ ಕಾರ್ಯಕ್ರಮವನ್ನು ವಿಶೇಷವಾಗಿ ನಡೆಸುತ್ತಾರೆ. ಅಂಜನಾದೇವಿ ಈ ಪರ್ವತದಲ್ಲಿ ವಾಸವಾಗಿದ್ದುದರಿಂದ ಈ ಪರ್ವತಕ್ಕೆ ಅಂಜನಾದ್ರಿ ಪರ್ವತವೆಂದು ಹೆಸರು ಬಂತೆಂಬ ನಂಬಿಕೆ. ಹನುಮಂತನನ್ನು ಹಡೆದ ಮೇಲೆ ಆಕೆಗೆ ನೀರು ಬೇಕಾದಾಗ ಹನುಮಂತನೇ ಇಲಿ ನೀರು ಒದಗಿಸಿಕೊಟ್ಟದ್ದನ್ನು ಜನಪದ ಕವಿಗಳು ದಾಖಲಿಸಿದ್ದಾರೆ.

ಅಡವ್ಯಾಗಂಜನಿದೇವಿ ಹನುಮಾನ ಹಡೆದಾಳೆ
ತೊಡೆಯ ತೋಳೆಯೋಕ ನೀರಿಲ್ಲ ಹನುಮಣ್ಣ
ಸುತ್ತಲ ಹೊಳೆಯ ತಿರುವ್ಯಾನೆ [೩]

ಮಾಲ್ಯವಂತ ಪರ್ವತ

ಹೊಸಪೇಟೆಯಿಂದ ಕಂಪ್ಲಿಗೆ ಹೋಗುವ ದಾರಿಯಲ್ಲಿ ವೆಂಕಟಾಪುರ ಹಾಗೂ ಕಮಲಾಪುರದ ನಡುವೆ ರಸ್ತೆಯ ಎಡಬದಿಗೆ ಮಾಲ್ಯವಂತ ಪರ್ವತವಿದೆ. ಹಂಪೆಯ ಸಪ್ತಪರ್ವತಗಳಲ್ಲಿ ಮಾಲ್ಯವಂತ ಪರ್ವತವೂ ಒಂದು ಮಾಲ್ಯವಂತ ಪರ್ವತದಲ್ಲಿ ದುಂಡನೆಯ ಕಲ್ಲುಗಳಿವೆ. ಜನರ ಪ್ರಕಾರ ಶ್ರೀರಾಮನು ಈ ಪರ್ವತದಲ್ಲಿದ್ದಾಗ ದಶರಥನ ಶ್ರಾದ್ಧ. ಮೂಡಬೇಕಾಯಿತಂತೆ ಅದಕ್ಕಾಗಿ ರಾಮಚಂದ್ರನು ಇಟ್ಟ ಪಿಂಡಗಳೇ ಮುಂದೆ ಕಲ್ಲುಗಳಾದವೆಂದು ಅವರು ಹೇಳುತ್ತಾರೆ. ಜನರು ಹೇಳುವ ಪ್ರಕಾರ ಇಲ್ಲಿನ ರಾಮದೇವರ ಗುಡಿಯ ಹಿಂದೆ ಕಲ್ಲಿನ ಎರಡು ದೊಡ್ಡ ದೋಣಿಗಳಿದ್ದು ಇವನ್ನು ರಾಮಲಕ್ಷ್ಮಣರ ದೋಣೆ ಎಂದು ಜನ ಕರೆಯುತ್ತಾರೆ. ವನವಾಸದ ಕಾಲದಲ್ಲಿ ಸೀತೆ ರಾಮಲಕ್ಷ್ಮಣರು ಇಲ್ಲಿ ಕೆಲದಿನಗಳು ಉಳಿದಿದ್ದರು. ಮತ್ತು ಶ್ರೀರಾಮನಿಗೆ ಹನುಮಂತನ ಭೇಟಿಯಾದುದೂ ಇಲ್ಲೇ ಎಂಬ ನಂಬಿಕೆ ಇದೇ ಈ ಬೆಟ್ಟದಲ್ಲಿ ರಾಮನವಮಿಯನ್ನು ವಿಶೇಷವಾಗಿ ಆಚಸುತ್ತಾರೆ.

ಅಕ್ಕತಂಗಿಯರ ಗುಂಡು

ಕಮಾಲಾಪುರದಿಂದ ಹಂಪೆಗೆ ಹೋಗುವ ದಾರಿಯಲ್ಲಿ ಎಡಬದಿಗೆ ಒಂದಕ್ಕೊಂದು ತಾಗಿನಿಂತ ಎರಡು ಬೃಹದಾಕಾರವಾದ ಕಲ್ಲುಗಳಿಗೆ ಅಕ್ಕತಂಗಿಯರ ಗುಂಡು ಎಂಬ ಹೆಸರಿದೆ. ಈ ಕಲ್ಲುಗಳ ಬಗೆಗೆ ಹಲವಾರು ಕಥೆಗಳಿವೆ.

ಭೋಜರಾಜ ಎಂಬುವನಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರಂತೆ ಆ ರಾಜನು ತನ್ನ ಮಕ್ಕಳಿಗಿಂತ ಸಕಲವಿದ್ಯಾಪಾರಂಗತರು ಬೇರೆ ಯಾರೂ ಇಲ್ಲವೆನ್ನುವಷ್ಟರ ಮಟ್ಟಿಗೆ ಅವರಿಗೆ ವಿದ್ಯೆನ್ನು ನೀಡಿದ್ದನು. ಒಮ್ಮೆ ಅವರಿಬ್ಬರು ತಂದೆಯಲ್ಲಿಗೆ ಬಂದು ಅಪ್ಪಾಜಿ ನಿನ್ನಿಷ್ಟದಂತೆ ಸಕಲವಿದ್ಯಪಾರಂಗತರಾದೆವು, ಆದರೆ ದೇಶಪರ್ಯಟನೆ ಮಾಡಿ, ನಮಗಿಂತಲೂ ಹೆಚ್ಚಿನವರು

ಯಾರಾದರೂ ಇರಬಹುದೇ ಎಂದು ನೋಡಬೇಕಾಗಿದೆ. ಆದ್ದರಿಂದ ನಮ್ಮನ್ನು ದೇಶಪರಟ್ಯನೆಗೆಂದು ಕಳುಹಿಸಿಕೊಡಿ ಎಂದು ಕೇಳಿದರು. ಆಗ ಭೋಜರಾಜನು ಮಕ್ಕಳ ಇಷ್ಟದಂತೆ ಅವರಿಗೆ ಪ್ರವಾಸಕ್ಕೆ ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿ ಅವರನ್ನು ಕಳುಹಿಸಿಕೊಟ್ಟನು. ಆ ರಾಜಕುಮಾರಿಯರು ಹಲವಾರು ದೇಶಗಳನ್ನು ಸುತ್ತಿ ಹಂಪೆಗೆ ಬಂದರು. ಹಂಪೆಯನ್ನು ಕಾಲ್ನಡಿಗೆಯಲ್ಲಿಯೇ ಸುತ್ತಿದ ಅವರಿಗೆ ಬೇಸರ ಬಂದು 'ಈ ಹಾಳು ಹಂಪೆಗೆ ಬರುವುದರ ಬದಲು ಯಾವುದಾದರೂ ಕೊಂಪೆಗೆ ಹೋಗಬಹುದಿತ್ತು' ಎದರಂತೆ ಈ ಮಾತು ಅಲ್ಲೇ ತಪಸ್ಸು ಮಾಡುತ್ತಿದ್ದ ಒಬ್ಬ ಋಷಿಗೆ ಕೇಳಿಸಿತು. ಅವನು ಸಿಟ್ಟಾಗಿ ಇಂತಹ ಪವಿತ್ರವಾದ ನೆಲಕ್ಕೆ ಹೀಗೆ ಹೇಳುವ ನೀವುಗಳು ಕಲ್ಲಾಗಿ ಎಂದು ಶಾಪ ನೀಡಿದನು. ಅಂದಿನಿಂದ ಅವರಿಬ್ಬರು ಕಲ್ಲಾದರು ಮತ್ತು ಆ ಕಲ್ಲುಗಳಿಗೆ ಅಕ್ಕತಂಗಿಯರ ಕಲ್ಲು ಎಂದು ಹೆಸರಾಯಿತು.''[೪]

''ಈ ಕಲ್ಲುಗಳ ಬಗೆಗೆ ಲಭ್ಯ ಇರುವ ಇನ್ನೊಂದು ಜನಪ್ರಿಯ ಐತಿಹ್ಯದ ಪ್ರಕಾರ ಹಿಂದೆ ಹಂಪೆಯಲ್ಲಿ ಒಬ್ಬ ಗೌಡ ಇದ್ದನಂತೆ ಆ ಗೌಡನ ಮಗ ಒಂದೇ ಮನೆಯಿಂದ ಅಕ್ಕತಂಗಿಯರಿಬ್ಬರನ್ನು ಮುದವೆಯಾದನಂತೆ ಅವನು ಮದುವೆಯಾದ ಕೆಲವು ದಿನಗಳಿಗೆ ಹಂಪೆಗೆ ಬರಗಾಲಬಂತು. ಬರಗಾಲದ ಕಷ್ಟಗಳನ್ನು ಅಕ್ಕ ಸಹಿಸುತ್ತಿದ್ದಳು. ಆದರೆ ತಂಗಿಗೆ ಸಹಿಸಲು ಕಷ್ಟವಾಗಿತ್ತು. ಇದಕ್ಕಾಗಿ ಆಕೆ ತನ್ನ ತವರು ಮನೆಗೆ ಹಿಂದಿರುಗಲು ಯೋಚಿಸಿದ್ದಳಂತೆ ಇದನ್ನು ತಿಳಿದ ಅಕ್ಕ, ತಂಗಿ ನನ್ನನ್ನು ಬಿಟ್ಟು ತವರಿಗೆ ಹೋಗಬೇಡ ನಿನ್ನ ಭಾರವನ್ನೆಲ್ಲ ನನ್ನ ಮೇಲೆ ಹಾಕು ಸತ್ತರೆ ಇಬ್ಬರೂ ಇಲ್ಲೇ ಸಾಯೋಣ ಎಂದು ಹೇಳಿ ತಂಗಿಯನ್ನು ತನ್ನ ಹೆಗಲ ಮೇಲೆ ಒಂಗಿಸಿಕೊಂಡಳಂತೆ ಅವರು ಹಾಗೆ ಕಲ್ಲಾದರು. ಈಗಲೂ ಅಕ್ಕನ ತೋಳಿನ ಮೇಲೆ ತಂಗಿ ಒಂಗಿಸಿದಂತೆ ಇರುವುದನ್ನು ಕಾಣಬಹುದು.''[೫]

ಪತಕನಿ ಮಡು

ಹಿಂದೆ ವಿಜಯನಗರದಲ್ಲಿ ಮತ್ತೂರ ಯಜಮಾನ ಅಂತ ಒಬ್ಬನಿದ್ದನಂತೆ ಅವನು ಪಾಳೇಗಾರನಾಗಿದ್ದನು. ಒಂದು ದಿನ ಉತ್ತರ ದಿಕ್ಕಿನಿಂದ ಇನ್ನೊಬ್ಬ ಪಾಳೇಗಾರ ಇವನ ಮೇಲೆ ದಾಳಿ ನಡೆಸಲು ಬಂದನು. ಆಗ ಮತ್ತೂರ ಯಜಮಾನನು ಕುಲಗುರುಗಳ ಸಲಹೆಯಂತೆ ರಾತ್ರಿಯಿಡೀ ಹಂಪೆ ಹೊಳೆಯನ್ನು ಪ್ರಾರ್ಥಿಸಿದನು. ಬೆಳಿಗ್ಗೆವಿರೋಧಿ ಪಾಳೆಗಾರನ ಸೈನ್ಯ ನೀರಿಗಿಳಿಯತ್ತಿದ್ದಂತೆ ಅನಿರೀಕ್ಷಿತ ಪ್ರವಾಹ ಬಂದು ಇಡೀ ಸೈನ್ಯವೇ ನೀರಿನಲ್ಲಿ ಕೊಚ್ಚಿಕೊಂಡು ಹೋಯಿತು. ಹೀಗೆ ವಿರೋಧಿ ಪಾಳಯಗಾರನ ಸೈನ್ಯ ಕೊಚ್ಚಿಕೊಂಡು ಹೋದ ಸ್ಥಳಕ್ಕೆ ಪತಕನಿ ಮಡು ಎಂದು ಹೆಸರಾಯಿತು.

''ಹೀಗೆ ಹಂಪೆಯ ಪರಿಸರವು ತುಂಬ ಪ್ರಿಯವಾದುದಾಗಿದೆ. ಕಾರಣ ಇದು ಅಂದು ಧಾರ್ಮಿಕ ಕ್ಷೇತ್ರವೂ ಕೂಡ ಆಗಿತ್ತು. ಅಂತಹ ಧಾರ್ಮಿಕ ಸಂಸ್ಥೆಗಳನ್ನು ಒಳಗೊಂಡ ಅಂದಿನ

ಒಂದು ಪ್ರಮುಖ ಕೇಂದ್ರವೆಂದರೆ ಪಂಪಾಕ್ಷೇತ್ರ ಆಗ ಅದು ಸುಪ್ರಸಿದ್ಧ ವಿದ್ಯಾಕೇಂದ್ರವಾಗಿದ್ದು ಜೊತೆಗೆ ಪ್ರಭಾವಶಾಲಿ ಮಠಾಚಾರ್ಯರ, ಸ್ವಾಮಿಗಳ ವಾಸಸ್ಥಾನವೂ ಆಗಿತ್ತು. ಹರಿಹರ ರಾಘವಾಂಕರಂತಹ ಕವಿಗಳಿಂದಾಗಿ, ಅವರು ಗುರು ಪರಂಪರೆಯಲ್ಲಿ ಆಗಿ ಹೋದ ಶಿವಯೋಗಿಗಳು ತಪಸ್ವಿಗಳು ಅಲ್ಲಿ ಹಿಂದೆ ವಾಸ್ತವ್ಯ ಮಾಡಿದುದರಿಂದಾಗಿ ಪಂಪಾಂಬಿಕೆ ವಿರೂಪಾಕ್ಷರ ಪವಿತ್ರ ಸಾನಿಧ್ಯದಿಂದಾಗಿ ಜನತೆಯಲ್ಲಿ ಪಂಪಾ ಕ್ಷೇತ್ರದ ಬಗ್ಗೆ ಅಪಾರ ಭಕ್ತಿ ಭಾವನೆಗಳು ಅವರ ಮನದಾಳದಲ್ಲಿ ಬೇರುಬಿಟ್ಟಿದ್ದವು. ಹೀಗೆ ಮೌಖಿಕ ಸಾಹಿತ್ಯದಲ್ಲಿ ಹಂಪೆಯು ತನ್ನದೇ ಆದ ರೀತಿಯಲ್ಲಿ ಸ್ಥಾನ ಪಡೆದಿದೆ. ಆದರೂ ಈ ಕ್ಷೇತ್ರದ ಬಗ್ಗೆ ಪ್ರಚಲಿತವಿರುವ ಕೆಲವು ಪೌರಾಣಿಕ ಕಥೆಗಳನ್ನು ಕುರಿತು ಸಂಶೋಧಕರಲ್ಲಿ ಭಿನ್ನಾಭಿಪ್ರಾಯಗಳಿವೆ.''[೬]

೨.೨. ಚಾರಿತ್ರಿಕ ಹಿನ್ನೆಲೆ

ಒಂದು ಸ್ಥಳದ ಅಥವಾ ಊರಿನ ಚರಿತ್ರೆಯನ್ನು ತಿಳಿದುಕೊಳ್ಳಲು ಮೂಲಾಧಾರಗಳು, ಅವಶ್ಯಕ, ಲಿಖಿತ ದಾಖಲೆಗಳು ಹೆಚ್ಚು ವಸ್ತುನಿಷ್ಟವಾಗಿದ್ದರೂ ಇತಿಹಾಸದ ಖಾಲಿಪುಟಗಳನ್ನು ತುಂಬಿಕೊಳ್ಳಲು ಇಂದಿನ ಅವಶೇಷಗಳು ಅವಶ್ಯಕ. ಇಂದು ಚರಿತ್ರೆಯಲ್ಲಿ ಮಹಾಪುರುಷರ ಹಾಗೂ ರಾಜಮಹಾರಾಜರ ಕುರಿತು ಅಧ್ಯಯನದ ಜೊತೆಗೆ ಜನಸಾಮಾನ್ಯರ ಸಂಸ್ಕೃತಿಯನ್ನು ಕುರಿತ ಅಧ್ಯಯನವೂ ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಹಂಪಿಯ ಜನಸಾಮಾನ್ಯರ ಮತ್ತು ಸಾಮಾಜವನ್ನು ಚರಿತ್ರೆಯನ್ನು ತಿಳಿಯಲು ಇತಿಹಾಸದ ನೆನಪುಗಳು ಮುಖ್ಯವಾಗಿವೆ.

''ಹಂಪಿ ಪರಿಸರದಲ್ಲಿ ಹಳೆಯ ಶಿಲಾಯುಗದಿಂದ ಕಬ್ಬಿಣ ಬೃಹತ್ ಶಿಲಾ ಸಂಸ್ಕೃತಿಯವರೆಗಿನ ಪಳೆಯುಳಿಕೆಗಳು ಅನೇಕ ನೆಲೆಗಳಲ್ಲಿ ಕಂಡುಬಂದಿವೆ. ಹಂಪಿ, ನಿಟ್ಟೂರು, ತೆಕ್ಕಲಕೋಟೆ, ಕುರೆಕುಪ್ಪಬೆಟ್ಟ, ಜೇಡರಬೆಳಗಲ್ಲು, ದರೋಜಿ, ಕುರುವತ್ತಿ ಬಾದನಹಟ್ಟಿ, ತಾಮ್ರಪರ್ವತ ಮೊದಲಾದವು ಹಳೆಶಿಲಾಯುಗದ ಪ್ರಮುಖ ನೆಲೆಗಳಾಗಿವೆ.''[೭] ಈ ಪರಿಸರದಲ್ಲಿ ಕಾರಕ್ಕಾಗುವ ಬೂದಿದಿಬ್ಬಗಳಿಂದ ಪಶುಪಾಲನೆಯ ವೃತ್ತಿ ಇತರೆ ಪ್ರದೇಶಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿತ್ತೆಂದು ತಿಳಿಯುತ್ತದೆ. ಈ ಪಶುಪಾಲಕರಿಂದಲೆ ಪಶುಪತಿ ಶಿವಾ ಸೃಷ್ಟಿ ನಡೆಯಿತು. ನಂದಿ, ಶಿವನ ವಾಹನವಾಗಿರುವುದು ಇದಕ್ಕೆ ಮತ್ತಷ್ಟು ಪುಷ್ಠಿ ನೀಡುತ್ತದೆ. ಆಗಲೇ ಸ್ತ್ರೀ ದೇವತೆಯ ಆರಾಧನೆ ಮಾತೃ ಕಲ್ಪನೆಯಲ್ಲಿ ಬಹುವಿಸ್ತಾರ ಪಡೆದುಕೊಂಡಿತ್ತು. ಅದರ ಇನ್ನೊಂದು ಮಗ್ಗುಲಲ್ಲಿ ಪುರುಷ ದೇವತೆ ಆರಾಧನೆ ಆರಂಭಗೊಂಡಿತು. ಒಂದು ಕಾಲಘಟ್ಟದಲ್ಲಿ ಇವೆರಡನ್ನೂ ಒಗ್ಗೂಡಿಸುವ ಪ್ರಯತ್ನಗಳು ಅಲ್ಲಲ್ಲಿ ನಡೆದುಬಂದಿರುವಂತೆ ತೋರುತ್ತದೆ.

''ಪುರಾಣಗಳ ಉಲ್ಲೇಖದಂತೆ ಹಂಪಿಯಲ್ಲಿ ಮೊದಲು ಕಾಣಿಸಿಕೊಂಡಿರುವುದು ಪಂಪಾಂಬಿಕೆ ಎಂಬ ಸ್ತ್ರೀ ದೇವತೆ ಆದ್ದರಿಂದ ಇದು ಶಕ್ತಿ ಕೇಂದ್ರವಾಗಿರಬೇಕು. ಕ್ರಮೇಣ ಈ ದೇವತೆಯೊಂದಿಗೆ ಪುರುಷ ದೇವತೆಯನ್ನು ಸೇರಿಸುವ ಪ್ರಯತ್ನ ನಡೆದುದು ಅವಳ

ತಪಸ್ಸಿನ ಮೂಲಕ ಗೋಚರಿಸುತ್ತದೆ. ಪುರುಷ ದೇವತೆಯ ಸೇರ್ಪಡೆಯಿಂದಾಗಿ ಇದು ಶೈವ ಕ್ಷೇತ್ರವಾಗಿ ಪರಿವರ್ತಿನೆ ಪಡೆಯುತ್ತ ಸಾಗಿತ್ತು ಇದು ಪೂರ್ಣರೂಪ ಪಡೆದುಕೊಂಡಿದುದು ೧೦ನೇ ಶತಮಾನದ ನಂತರ ಅದಕ್ಕಿಂತ ಪೂರ್ವದಲ್ಲಿ ವಿರೂಪಾಕ್ಷನ ಹೆಸರು ಶಾಸನಗಳಲ್ಲಿ ಕಾಣಿಸಿಗುವುದಿಲ್ಲ. ಸಾಮಾನ್ಯವಾಗಿ ಶಕ್ತಿ ಕ್ಷೇತ್ರಗಳಲ್ಲಿ ಕ್ಷೇತ್ರಪಾಲನಾಗಿ ಬೈರವನಿರುತ್ತಾನೆ. ಕ್ರಿ.ಶ.೧೦೧೪ರಲ್ಲಿ ಗೋನಹಾಳ ಶಾಸನದಲ್ಲಿ ಪಂಪಾತೀರ್ಥದ ಮಹಾಕಾಳದೇವರಿಗೆ ದಾನಕೊಟ್ಟ ವಿಷಯ ಪ್ರಸ್ತಾಪವಾಗಿದೆ.[೮]

''ಹೀಗೆ ಪೌರಾಣಿಕ ಶ್ರೇಷ್ಟತೆಯನ್ನು ಪಡೆದ ಈ ಕ್ಷೇತ್ರ ಧಾರ್ಮಿಕ, ಸಾಮಾಜಿಕವಾಗಿ ಮಹತ್ವ ಪಡೆಯುತ್ತ ರಾಜಕೀಯ ಚಟುವಟಿಕೆಗಳಿಗೆ ಎಡೆಮಾಡಿಕೊಟ್ಟಿತು. ಬಾದಾಮಿ ಚಾಲುಕ್ಯರ ಪೂರ್ವದಲ್ಲಿಯೇ ಇಲ್ಲಿನ ನದಿ, ಪಂಪಾಸರೋವರವೆಂದು ಹೆಸರು ಪಡೆದಿತ್ತು. ಬಾದಾಮಿ ಚಾಲುಕ್ಯ ಅರಸ ವಿನಯಾದಿತ್ಯನ ಕ್ರಿ.ಶ.೬೮೯ರ ತಾಮ್ರಪಟದಲ್ಲಿ ಪಂಪಾತಟ ಮಧಿವಸಾತಿ ವಿಜಯ ಸ್ಕಂಧಾವರೆ ಎಂದು ಉಲ್ಲೇಖ ಬರುತ್ತದೆ. ಅಂದರೆ ಚಾಲುಕ್ಯರು ವಿಜಯದ ಬಿಡಾರವನ್ನು ಪಂಪಾನದಿಯ ದಂಡೆಯ ಮೇಲೆ ಬಿಡಲಾಗಿತ್ತೆಂದು ಕ್ರಿ.ಶ.೧೦೧೮ರಲ್ಲಿ ನೊಳಂಬಪಲ್ಲವ ಅರಸ ಉದಯಾದಿತ್ಯ ಕಂಪಿಲಿಯ ಸ್ಥಳದಿಂದ ಆಳ್ವಿಕೆ ಮಾಡುತ್ತಿದ್ದ. ಉತ್ತರಾಯಣ ಸಂಕ್ರಾಂತಿ ಪುಣ್ಯಕಾಲದಂದು ಪಂಪಾತೀರ್ಥಕ್ಕೆ ಬಂದು ಸೋಮಸಿಂಗ ಭಳಾರ ಪಾದ ತೊಳೆದು ಬಾಗಳಿಯ ಕಲಿದೇವರಿಗೆ ದಾನಕೊಡುತ್ತಾನೆ. ಉದಯಾದಿತ್ಯದೇವನ ಆದೇಶದ ಮೇರೆಗೆ ಪೆರ್ಗಡೆ ನರಸಿಂಘಯ್ಯನು ಕಾಳಾಮುಖ ಪಂಡಿತ ಸೋಮಸಿಂಘ ಬಳಾರರೊಂದಿಗೆ ಬಾಗಳಿಗೆ ಬಂದು, ಅಲ್ಲಿಯ ಮಹಾಜನರ ಅಧ್ಯಕ್ಷತೆಯಲ್ಲಿ ಪಂಪಾಪುರ ತೀರ್ಥದಲ್ಲಿ ಅರಸನು ಮಾಡಿದ ದಾನವನ್ನು ಸ್ಥಳೀಯರ ಸಮ್ಮುಖದಲ್ಲಿ ಕೊಡುತ್ತಾನೆ. ಕ್ರಿ.ಶ. ೧೦೪೬ರ ಮೊರಗೇರಿ ಶಾಸನದಲ್ಲಿ ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಡಿ ದೆವನ ದಂಡನಾಯಕ ಲಕ್ಕಣ್ಣ ಮತ್ತು ಲೆಂಕಸಾಸಿರ್ವರು ಕಾರ್ತಿಕ ಹುಣ್ಣಿಮೆ ಸೋಮಗ್ರಹಣ ದಿನ ಮೊರಗೇರಿಯಲ್ಲಿಯ ಭೂಮಿಯನ್ನು ಬಲ್ಲವರಸರಿಂದ ಪಡೆದು, ವಿರೂಪಾಕ್ಷದೇವರ ಸಮಕ್ಷಮದಲ್ಲಿ ನೊಳಂಬೇಶ್ವರ ದೇವರಿಗೆ ವಿದ್ಯಾಭ್ಯಾಸ ಮುಂತಾದವಕ್ಕೆ ಸೋಮೇಶ್ವರದೇವರ ಕಾಲು ತೊಳದು ಕೊಡುತಾರೆ. ಕ್ರಿ.ಶ. ೧೧೬೩ರಲ್ಲಿ ಕಲಚೂರಿ ಅರಸ ಬಿಜ್ಜಳನು ಹಂಪಿಯ ವಿರೂಪಾಕ್ಷನ ಸನ್ನಿದಾನದಲ್ಲಿ ಮಹಾದಾನಗಳನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಬೆಳ್ವಲ ನಾಡು ಮತ್ತು ಉತ್ಸಯನಾಡಿನ ಅಧಿಕಾರಿ ದಂಡನಾಯಕ ಅಮ್ಮಣಯ್ಯನು ಅರಸನ ಅನುಮತಿ ಪಡೆದು ಎಡೆಯಹಳ್ಳಿಯನ್ನು ಕುಕನೂರು ಮಲ್ಲಿಕಾರ್ಜುನ ದೇವರಿಗೆ ದಾನವಾಗಿ ಕೊಟ್ಟನು.''[೯]

''ಹಂಪಿಯ ಕ್ರಿ.ಶ.೧೯೯೯ರ ಶಾಸನದಲ್ಲಿ ಪಂಪಾತೀರ್ಥ, ಪಂಪಾವರ ಕ್ಷೇತ್ರ, ವಿರೂಪಾಕ್ಷ ತೀರ್ಥ ಮತ್ತು ಹಂಪಾತೀರ್ಥವೆಂದು ಉಲ್ಲೇಖಿಸಿ ಅದು ಗಂಗಾನದಿಯಿಂದ ಹಲವು

ತೀರ್ಥಗಳಿಂದ ಉತ್ತಮವಾದ ದೇವಾಲಯ ಸಮಾಜದಿಂದ ಹಾಗೂ ತಪಸ್ವಿಗಳಿಂದ ಕೂಡಿತ್ತೆಂದು ವರ್ಣಿಸಿದೆ. ಇಂಥ ಪವಿತ್ರ ಕ್ಷೇತ್ರದ ವಿರೂಪಕ್ಷ ತೀರ್ಥದ ರಕ್ಷಣಾರ್ಥವಾಗಿ ಸಾಮಂತ ಮಾದೆನಾಯಕನು ಮತಂಗ ಪರ್ವತವನ್ನು ಪ್ರತಿಪಾಳಿಸುತ್ತಿದ್ದ ಎಂದು ಇತಿಹಾಸಗಳಿಂದ ತಿಳಿದುಬರುತ್ತದೆ.''[೧೦] ಬಾದಾಮಿ ಚಾಲುಕ್ಯರಿಂದ ಕಲಚೂರಿಗಳ ಮಧ್ಯದ ಕಾಲಾವಾವಧಿಯಲ್ಲಿ ಹಂಪಿಯಲ್ಲಿ ಅನೇಕ ದೇವಾಲಯಗಳ ಸಮೂಹವೆ ನಿರ್ಮಾಣವಾಯಿತು. ದುರ್ಗಾ ದೇವಾಲಯದ ಸಮೂಹದಲ್ಲಿ ರಾಷ್ಟ್ರಕೂಟರ ವಾಸ್ತುಲಕ್ಷಣಗಳುಳ್ಳ ದೇವಾಲಯಗಳಿವೆ. ಹಂಪಿಯಲ್ಲಿ ರಾಷ್ಟ್ರಕೂಟರ ಶಾಸನ ದೊರೆತಿಲ್ಲವಾದರೂ ಈ ಪರಿಸರದ ಸಂಡೂರು ಕುಮಾರಸ್ವಾಮಿ ಬೆಟ್ಟ, ಕುಡಿತಿನಿ, ಕೊಳಗಲ್ಲು ಮುಂತಾದ ಸ್ಥಳಗಳಲ್ಲಿ ಅವರ ವಾಸ್ತು ರಚನೆಗಳೊಂದಿಗೆ ಶಾಸನಗಳೂ ಲಭ್ಯವಾಗಿವೆ. ಅವರ ಆಡಳಿತಕ್ಕೊಳಪಟ್ಟ ಹಂಪಿಯಲ್ಲಿ ಕಾಲಭೈರವ, ವಿರೂಪಾಕ್ಷ, ಹಂಪಾದೇವ ಇತರ ದೇವಾಲಯಗಳು ಅವರ ಕಾಲಘಟ್ಟದಲ್ಲಿಯೇ ನಿರ್ಮಾಣವಾದವು.[೧೧] ''ಕಲ್ಯಾಣ ಚಾಲುಕ್ಯ ಕಲಚೂರಿಗಳ ಕಾಲದಲ್ಲಿ ಈ ದೇವಾಲಯ ಜೀರ್ಣೋದ್ಧಾರ ಮತ್ತು ವಿಸ್ತಾರ ರೂಪವನ್ನು ಪಡೆದುಕೊಂಡಿತು. ಕುರುಗೋಡು ಸಿಂದರ ಶಾಸನದಲ್ಲಿ ಇದರ ಪ್ರಸ್ತಾಪವಿದೆ.''[೧೨] ''ಹಂಪಿಯನ್ನೊಳಗೊಂಡು ಈ ಪ್ರದೇಶಕ್ಕೆ ಅಧಿಕಾರಿಗಳಾಗಿದ್ದ ಸಿಂದರು ತಮ್ಮ ರಾಜಧಾನಿ ಕುರುಗೋಡದಲ್ಲಿ ಹೇಮ ಕೂಟದಲ್ಲಿರುವ ವಾಸ್ತು ಲಕ್ಷಣಗಳುಳ್ಳ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಹಂಪಿಗೆ ವಿರೂಪಾಕ್ಷನ ಒಡೆಯನಾಗಿದ್ದ. ಆದರೆ ಅಧಿಕಾರಿಗಳು ಅದನ್ನು ಪ್ರತಿಪಾಳಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವಂತೆ ಶಾಸನದಲ್ಲಿ ಹೇಳಿಕೊಂಡಿದ್ದಾರೆ.''[೧೩]

ಕಲಚೂರಿಗಳು ಹಾಗೂ ಕಲ್ಯಾಣಚಾಲಕ್ಯರ ಸಾಮ್ರಾಜ್ಯಗಳ ಅಂತ್ಯದೊಂದಿಗೆ ಕರ್ನಾಟಕದಲ್ಲಿ ಸೇವುಣ ಮತ್ತು ಹೊಯ್ಸಳರು ಅಧಿಕಾರಕ್ಕೆ ಬಂದರು ತುಂಗಭದ್ರಾ ನದಿಯವರೆಗೆ ವಿಸ್ತಾರಗೊಂಡಿದ್ದ ಹೊಯ್ಸಳರ ಸಾಮ್ರಾಜ್ಯಕ್ಕೆ ಹಂಪಿಯೂ ಸೇರಿತ್ತು. ಹೊಯ್ಸಳ ಅರಸ ಸೋಮೇಶ್ವರ ಕ್ರಿ.ಶ. ೧೨೩೬ರಲ್ಲಿ ಪಂಪಾಕ್ಷೇತ್ರದ ವಿರೂಪಾಕ್ಷನ ಆರಾಧನೆಗಾಗಿ ಒಂದು ಹಳ್ಳಿಯನ್ನು ದಾನಕೊಟ್ಟಿದ್ದಾನೆ. ಇದೆ ಅರಸನ ಕಾಲದ ಕ್ರಿ.ಶ. ೧೨೩೮ರ ಹಾಸನ ಜಿಲ್ಲೆಯ ಯಲ್ಲೇಶ್ವರದ ಶಾಸನದಲ್ಲಿ ಬಿಮ್ಮಣ್ಣನೆಂಬುವವನನ್ನು ಹೇಮಕೂಟದ ವಿರೂಪಾಕ್ಷ ದೇವರ ಪಾದಪದ್ಮಾಧಾರಕನೆಂದು ಸುತ್ತಿಸಲಾಗಿದೆ. ಹೊಯ್ಸಳರಿಗೆ ಆದೀನರಾಗಿದ್ದು ಕುಮ್ಮಟ ದುರ್ಗದಲ್ಲಿ ಕುಮ್ಮಟದನಾಯಕರು ಆಡಳಿತ ಮಾಡಿದ್ದಾರೆ. ಈ ಮನೆತನದ ಮುಮ್ಮಡಿ ಸಿಂಗೆನಾಯಕ್ಕ ಮಗ ವೀರಕಂಪಿಲದೇವನು ಶಿವಾಲಯವನ್ನು ಕಟ್ಟಿಸಿ ಮೂರು ಲಿಂಗಗಳನ್ನು ಪ್ರತಿಷ್ಠಾಪಿಸಿ ಮಾಡಿದ ಉಲ್ಲೇಖ ಹೇಮಕೂಟದ ಕಂಪಿಲರಾಯ ದೇವಾಲಯದ ಕಂಬದ ಮೇಲಿರುವ ಶಾಸನ ಸಾಕ್ಷಿಯಾಗಿದೆ.

‘‘ಹೊಯ್ಸಳ ಅರಸರ ರಾಜ್ಯ ದೆಹಲಿ ಸುಲ್ತಾನರ ದಾಳಿಯಿಂದ ನಾಶವಾದ ಮೇಲೆ ಹಂಪಿಗೆ ಬಂದು ಆಶ್ರಯ ಪಡೆದುಕೊಳ್ಳುತ್ತಾರೆ. ಕ್ರಿ.ಶ. ೧೩೩೧ರಲ್ಲಿ ಮೂರನೆಯ ಬಲ್ಲಾಳನು ಹಂಪಿಯನ್ನು ವಿರೂಪಾಕ್ಷ ಹೊಸದುರ್ಗವೆಂದು ಕರೆದು ಆಳ್ವಿಕೆ ಮಾಡುತ್ತಿದುದ್ದನ್ನು ಗುಬ್ಬಿ ಶಾಸನ ಉಲ್ಲೇಖಿಸುತ್ತದೆ. ಇವನ ಮಗನ ಹೆಸರೂ ವಿರೂಪಾಕ್ಷ ಬಲ್ಲಾಳ, ಈತನ ಯುವರಾಜ ಪಟ್ಟಾಭಿಷೇಕವೂ ಹಂಪಿಯಲ್ಲಿ ನಡೆಯಿತು. ಆರಂಭದಲ್ಲಿ ಹೊಯ್ಸಳರ ಆಡಳಿತ ಕೇಂದ್ರವಾದ ಹಂಪ ೧೩೩೬ರಲ್ಲಿ ವಿಜಯನಗರ ಅರಸರ ರಾಜಧಾನಿಯಾಗಿ ಇಡೀ ದಕ್ಷಿಣ ಭಾರತದಲ್ಲಿಯೇ ಹೆಸರು ಪಡೆಯಿತು.

ಹೀಗೆ ಈ ಸಾಮ್ರಾಜ್ಯವು ೧೩೩೬ರಲ್ಲಿ ವಿದ್ಯಾರಣ್ಯರ ಸಹಾಯದಿಂದ ಹಕ್ಕಬುಕ್ಕರು ಸ್ಥಾಪನೆ ಮಾಡಿದ ವಿಜಯನಗರದ ಅರಸರು ೧೫೬೫ರ ವರೆಗೆ ನಾಲ್ಕು ಮನೆತನಗಳಿಂದ ಆಳ್ವಿಕೆಗೆ ಒಳಪಟ್ಟು ಸುಮಾರು ೨೩೬ ವರ್ಷಗಳ ಕಾಲ ದಕ್ಷಿಣ ಭಾರತದಲ್ಲಿ (ರಾಜ್ಯಬಾರ ಮಾಡಿದು ಇತಿಹಾಸದಿಂದ ತಿಳಿದುಬರುತ್ತದೆ.) ರಾಜ್ಯಾಳ್ವಿಕೆ ಮಾಡಿದ ಸಾಮ್ರಾಜ್ಯಗಳ ಪೈಕಿ ವಿಜಯನಗರವು ಒಂದು ಉತ್ತರ ಭಾರತವನ್ನು ತನ್ನ ಕಪಿಮುಷ್ಟಿಯಲ್ಲಿರಿಸಿಕೊಂಡ ಪರಕೀಯ ಸಂಸ್ಕೃತಿ ತನ್ನ ಕಬಂಧ ಬಾಹುಗಳನ್ನು ದಕ್ಷಿಣಭಾರತ ಚಾಚುತ್ತಿದ್ದಾಗ ಅದನ್ನು ತನ್ನ ಶಕ್ತಿ ಸಾಮರ್ಥ್ಯಗಳ ಮೂಲಕ ಸುಮಾರು ಎರಡುವರೆ ಶತಮಾನಗಳುದ್ದಕ್ಕೂ ತಡೆಗಟ್ಟಿ ಅಳಿದು ಹೋಗಬಹುದಾಗಿದ್ದ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ ಕೀರ್ತಿ ನಿಶ್ಚಯವಾಗಿಯೂ ವಿಜಯನಗರ ಸಾಮ್ರಾಜ್ಯಕ್ಕೆ ಸಲ್ಲುತ್ತದೆ. ದಕ್ಷಿಣವಾಗಿ ಓರಿಸ್ಸಾದಿಂದ ಕನ್ಯಾಕುಮಾರಿಯವರೆಗೆ ಇದು ತನ್ನ ಅಧಿಕಾರವನ್ನು ವಿಸ್ತರಿಸಿಕೊಂಡಿತ್ತು ಎಂದು ಇತಿಹಾಸದಿಂದ ತಿಳಿಯುತ್ತದೆ.

೨.೩. ಸಾಮಾಜಿಕ ಹಿನ್ನೆಲೆ

ಹಂಪೆ ಪರಿಸರದಲ್ಲಿ ಅನೇಕ ಜಾತಿ ಸಮುದಾಯಗಳು ಬಾಳಿ, ಬೆಳೆದು ನಿಂತಿರುವದು ಇತಿಹಾಸದಿಂದ ತಿಳಿದುಬರುತ್ತದೆ. ಪ್ರಸ್ತುತ ಹಂಪೆ ಪರಿಸರದಲ್ಲಿ ವಿರಶೈವರು, ಬ್ರಾಹ್ಮಣರು, ಮುಸ್ಲಿಂರು, ಕ್ರಿಶ್ಚಿಯನರು, ವಾಲ್ಮೀಕಿ ಬೇಡರು, ಉಪ್ಪಾರರು, ಕುರುಬರು, ಲಿಂಗಾಯತರು, ಬುಡಕಟ್ಟುಗಳು ಹಾಗೂ ಇತರ ಅಲೆಮಾರಿ ಸಮುದಾಯಗಳು ಇಲ್ಲಿ ಬಾಳಿ ಬದುಕುತ್ತಿರುವುದು ಪ್ರಸ್ತುತವಾಗಿ ಕಂಡುಬರುತ್ತದೆ. ಇಲ್ಲಿ ವಾಸಿಸುತ್ತಿರುವ ವಿವಿಧ ಜಾತಿಯ ಜನರು ಹುಟ್ಟಿನಿಂದ ಸಾಯುವವರೆಗೆ ಜೀವನದ ವಿವಿಧ ಹಂತಗಳಲ್ಲಿ ಬೇರೆ ಬೇರೆ ಆಚರಣೆಗಳು ನಡೆಸುವದನ್ನು ಕಾಣುತ್ತೇವೆ.

ವಾಲ್ಮೀಕಿ ಅಥವಾ ಬೇಡರು

ಹಂಪೆ ಪರಿಸರದಲ್ಲಿ ದೊಡ್ಡ ಸಂಖ್ಯೆಯಲ್ಲಿ ಬೇಡರು ವಾಸಿಸುತ್ತಿದ್ದಾರೆ. ಕೂಡ್ಲಿಗಿ, ಕಮಲಾಪುರ, ಕಂಪ್ಲಿ ಮತ್ತು ಬುಕ್ಕಸಾಗರದಲ್ಲಿ ಇವರದೇ ಪ್ರಾಬಲ್ಯವಿದೆ. ಬೇಡರ ಪ್ರಕಾರ ಆನೆಗೊಂದಿ

ಮೂಲತಃ ಅವರದ್ದೇ ಆಗಿದೆ. ಆನೆಗೊಂದಿಯಲ್ಲಿ ಮೊದಲು ಸಂಸ್ಥಾನ ಸ್ಥಾಪಿಸಿದ ಮುಮ್ಮಡಿ ಸಿಂಗೆಯನಾಗಲಿ, ಅವನ ಮಗನಾದ ಕಂಪಿಲ ಮತ್ತು ಮೊಮ್ಮಗನಾದ ಕುಮಾರ ರಾಮನು ಬೇಡನಾಗಿದ್ದನು ಎಂಬುದಕ್ಕೆ ಆತನು ಕುಲದ ಹಬ್ಬದಲ್ಲಿ ಭಾಗವಹಿಸುತ್ತಿದ್ದ ಎಂಬ ಉಲ್ಲೇಖವೇ ಆಧಾರವಾಗಿದೆ. ಬೇಡರು ವಾಸಿಸುತ್ತಿದ್ದ ಜಾಗಕ್ಕೆ ಕಂಪಣ ಅಥವ ಕಂಪಳಿ ಎಂಬ ಹೆಸರಿದೆ. ಈ ಕಾರಣದಿಂದಲೇ ''ಕಂಪಿಲಿ''ಯೂ ಬೇಡರದ್ದೆ ಆದ ವಾಸಸ್ಥಳವಾಗಿದೆ.

ವಿಜನಯನಗರ ಸಂಸ್ಥಾನದ ಸೈನ್ಯದಲ್ಲಿ ಬೇಡರದ್ದೇ ಆದ ದೊಡ್ಡ ಪಡೆ ಹೊಂದಿತ್ತು. ಎಂದು ಬೇಡರು ಇಂದಿಗೂ ನಂಬುತ್ತಾರೆ. ಬಹಳ ಶಕ್ತಿಶಾಲಿಗಳೂ, ಹೋರಾಟದಲ್ಲಿ ನಿಪೂಣರೂ ಆಗಿದ್ದ ಬೇಡರನ್ನು ಆ ಕಾಲದ ದೊರೆಗಳು ವಿಶೇಷವಾಗಿ ನಂಬುತ್ತಿದ್ದರಂತೆ, ಗರಡಿ ಮನೆಗಳಲ್ಲಿ ಯಾವಾಗಲೂ ಬೇಡರೇ ತುಂಬಿಕೊಂಡಿರುತ್ತಿದ್ದರಂತೆ ಹಂಪೆ ರಥೋತ್ಸವದಂದು ಬೇಡರೇ ಮೊದಲು ರಥ ಎಳೆಯುವ ಗೌರವವೂ ಅವರಿಗೆ ಲಭಿಸಿದೆ ಆ ಕಾರಣದಿಂದಲೇ ಲಭಿಸಿದ ತಿಳಿದುಬರುತ್ತದೆ.

ಕುರುಬರು

ಕುರುಬರು ಕೂಡಾ ಹಂಪೆಯ ಜೊತೆಗೆ ಸಂಬಂಧವನ್ನು ಇರಿಸಿಕೊಂಡಿದ್ದಾರೆ. ಬೇಡರು ಹೇಗೆ ಹಂಪೆ ತಮ್ಮದು ಎನ್ನುತ್ತಾರೋ ಹಾಗೆ ಕುರುಬರು ಕೂಡಾ ಹಂಪೆಯನ್ನು ತಮ್ಮದು ಹೇಳಲು ನೀಡುವ ಕಾರಣಗಳು ಹಲವು ಅವುಗಳಲ್ಲಿ ಹೀಗಿವೆ.

ಈಗಿನ ವಿರೂಪಾಕ್ಷ ದೇವಸ್ಥಾನದ ಪಕ್ಕದಲ್ಲಿ ಇರುವ ಮೂಲವಿರೂಪಾಕ್ಷನು ಮೂಲತಃ ಬೀರಪ್ಪ ಅಥವಾ ಬೀರೇ ದೇವರು. ಈ ಬೀರೇದೇವರು ಕುರುಬರ ದೈವ ಹಾಗಾಗಿ ದೇವಸ್ಥಾನದ ಒಡೆತನ ಮೂಲತಃ ಕುರುಬರಿಗೇ ಸೇರಿದೆ ಎಂಬ ಹೇಳಿಕೆ ಕೂಡ ಕೆಲವು ಐತಿಹ್ಯಗಳಿಂದ ತಿಳಿದುಬರುತ್ತಿವೆ. ಆದ್ದರಿಂದ ಹಂಪೆ ಸಂಸ್ಥಾನ ಕುರುಬರದ್ದು ಎನ್ನುವುದಕ್ಕೆ ಕುರುಬರು ಕೊಡುವ ಕೊನೆಯ ಆಧಾರವೆಂದರೆ ವಿಜಯನಗರ ವಾಸ್ತುವಿನಲ್ಲಿರುವ ಕುರುಬನ ಚಿತ್ರ ಕಂಬಳಿ ಹೊದ್ದುಕೊಂಡು ಕೈಯಲ್ಲಿ ದೊಣ್ಣೆ ಹಿಡಿದುಕೊಂಡು, ಕುರಿಕಾಯುವ ಕುರುಬನ ಚಿತ್ರ ವಿಜಯನಗರದ ಬಹುತೇಕ ಎಲ್ಲ ಗುಡಿಗಳಲ್ಲಿಯೂ ಕಾಣಸಿಗುತ್ತದೆ. ಈ ಕಾರಣದಿಂದ ಹಂಪೆಯು ಕುರುಬರಿಗೇ ಸೇರಿದೆ ಎಂದು ಅವರು ವಾದಿಸುತ್ತಾರೆ. ಈ ಬಗೆಯ ಕುಲದೈವ ಮೂಲ ಸಂಬಂಧ ಇರಿಸಿಕೊಂಡಿರುವ ಕುರುಬರು ಹಂಪೆಯಲ್ಲಿ ನಡೆಯುವ ಎಲ್ಲ ಉತ್ಸವಗಳಲ್ಲಿ ಉತ್ಸಾಹದಿಂದ ಭಾಗವಹಿಸುವುದನ್ನು ಕಾಣಬಹುದಾಗಿದೆ.

ಡೊಂಬರು

ಡಂಬ, ಡೊಮ್ಮ, ದೊಮ್ಮ ಡೊಮ್ಮರ ಇತ್ಯಾದಿ ಹೆಸರುಗಳಿಂದ ತಮ್ಮನ್ನು ಗುರುತಿಸಿಕೊಳ್ಳುತ್ತಿರುವ ಡೊಂಬರು ಕೂಡಾ ವಿಜಯನಗರದ ಮೌಖಿಕ ಇತಿಹಾಸದ ಅವಿಭಾಜ್ಯ

ಅಂಗವಾಗಿದ್ದಾರೆ. ತಮ್ಮ ವಂಶಜರು ವಿಜಯನಗರದ ದೊರೆಗಳ ಆಸ್ಥಾನದಲ್ಲಿ ಆಟ ಆಡುತ್ತಿದ್ದರೆಂದು ಬಲವಾಗಿ ಪ್ರತಿಪಾದಿಸುವ ಡೊಂಬರು ತಮ್ಮ ಇತಿಹಾಸದ ಭಾಗವಾಗಿ ಕೆಳಗಿನ ಅಂಶಗಳು ನಿರೂಪಿಸುತ್ತಾರೆ.

ಡೊಂಬ ನಿರೂಪಕರ ಪ್ರಕಾರ ಅವರಲ್ಲಿ ಒಂದು ಭಾಗವಾಗಿರುವ ಸೊಂಡೂರು ವಾಳುಳಿನ, ಜನರು ಮೂಲತಃ ಆನೆಗೊಂದಿ ಪರಿಸರದಲ್ಲಿ ಮತ್ತು ಹಂಪೆ ಪರಿಸರದಲ್ಲಿ ವಾಸಿಸುತ್ತಿದ್ದರು. ಅಂದು ವಿಜಯನಗರ ಸಾಮ್ರಾಜ್ಯದಲ್ಲಿ ತಮ್ಮದೇಯಾದ ಆಟವನ್ನು ತೋರಿಸುವಲ್ಲಿ ಜನಪ್ರಿಯರಾಗಿದ್ದುದನು ಅವರ ಬಂದು ಹಾಡನ್ನು ಇಲ್ಲಿ ಗಮನಿಸಬಹುದು.

ಆನೆಗೊಂದಿಯ ಮೇಲೆ ಹಾಡ್ಯಳೆ ಡೊಂಬತಿ,

ನೋಡಬಂದಣ್ಣ ಎಣ್ಣುವೊಲಕ್ಕಯ್ಯ . . . . .

ದೊಕ್ಕಲರು

ಭಿಕ್ಷೆಯೇ ಪ್ರಧಾನ ಕಸುಬಾಗಿರುವ ದೊಕ್ಕಲರೂ ಹಂಪೆಯೊಂದಿಗೆ ತಮ್ಮ ಸಂಬಂಧ ಬಹಳ ಪ್ರಾಚೀನ ಕಾಲದಿಂದಲೂ ಇತ್ತೆಂದು ನಿರೂಪಿಸುತ್ತಾರೆ. ಹಂಪೆ ಪರಿಸರದ ದೊಕ್ಕಲರು ತೆಲಗು ಮಾತಾಡುತ್ತಾ ತಾವು ಕೃಷ್ಣದೇವರಾಜನ ಕಾಲದಲ್ಲಿ ಹಂಪೆಗೆ ಬಂದವರೆಂದು ಹೇಳಿಕೊಳ್ಳುತ್ತಾರೆ. ದೊಕ್ಕಲರು ಹಂಪೆಯಲ್ಲಿನ ಶೆಟ್ರುಮಠ, ಮಾತಂಗಪರ್ವತ ಕೋಟಿಲಿಂಗದೊಂದಿಗೆ ತಮ್ಮ ಸಂಬಂಧ ಏನೆಂಬುದನ್ನು ನಿರೂಪಿಸಬಲ್ಲರು. ಹಂಪೆಯ ಶೆಟ್ರುಮಠ ಬಹಳ ಹಿಂದಿನಿಂದಲೂ ದೊಕ್ಕಲರ ನ್ಯಾಯಸ್ಥಾನವಾಗಿ ಕೆಲಸ ನಿರ್ವಹಿಸಿದೆ ಎಂದು ಅವರು ಹೆಳುತ್ತಾರೆ. ಮತ್ತು ಕೋಟಿಲಿಂಗವನ್ನು ದಕ್ಕಮುನಿಯು ಸೃಷ್ಟಿಸಿದನೆಂದು ದೊಕ್ಕಲರ ನಂಬಿಕೆ ಇದೆ. ದಕ್ಕಮುನಿಯು ದೊಕ್ಕಲರ ಆದಿಪುರುಷನಾದುದರಿಂದ ಸಹಜವಾಗಿಯೇ ಕೋಟಿಲಿಂಗವು ದೊಕ್ಕಲರಿಗೆ ಪವಿತ್ರವಾದ ಸ್ಥಳವಾಗಿದೆ ಎಂದು ಇಂದಿಗೂ ಅವರು ಹೇಳಿಕೆಯನ್ನು ನೀಡುತ್ತಾರೆ. ಅಂದಿನಿಂದ ಇಂದಿನವರೆಗೇ ಹಂಪೆ ಪರಿಸರದಲ್ಲಿ ಸಾಮಾಜಿಕವಾಗಿ ಹಲವು ಸಮುದಾಯಗಳು ಇಲ್ಲಿನ ಅನೇಕ ಆಚರಣೆಗಳಲ್ಲಿ ಪಾಲ್ಗೊಳ್ಳುವುದನ್ನು ಕಾಣಬಹುದಾಗಿದೆ.

ಹೆಳವರು

ವಿಜಯನಗರದ ದೊರೆಗಳ ಕಾಲದಲ್ಲಿ ಹಂಪೆಗೆ ಬಂದೆವು ಎಂದು ಹೇಳಿಕೊಳ್ಳುವ ಹೆಳವರು ತೆಲುಗು ಮಾತನಾಡುತ್ತಾರೆ. ಹಂಪೆಗೆ ಸಂಬಂಧಿಸಿದಂತೆ ಅವರು ಕತೆಗಳನ್ನು ಹೇಳುತ್ತಾರೆ. ಮೊದಲನೆಯ ಕತೆಯ ಪ್ರಕಾರ ಹೇಳವರ ಮೂಲಪುರುಷನಾದ ಮುದ್ದು ರಾಜೇಗೌಡನು ಹಂಪೆಯಲ್ಲಿದ್ದ ಅವನ ಕಾಲಕ್ಕೆ ಸುಲ್ತಾನನ ಉಪಟಳ ಹೆಚ್ಚಾಗಿ ಹಂಪೆಯನ್ನು ಬಿಡಬೇಕಾದ ಪ್ರಸಂಗ ಬಂತು. ಆದರೆ ಹಂಪೆ ಹೊಳೆ ಅಡ್ಡಬರುತ್ತಿತ್ತು ರಾಜೇಗೌಡ ಗಂಗಮ್ಮನಿಗೆ

ಕೈ ಮುಗಿದ ಗಂಗಮ್ಮದಾರಿ ಬಿಟ್ಟಳು ಅಟ್ಟಿಸಿಕೊಂಡು ಬಂದ ಸುಲ್ತಾನನು ಗಂಗೆಯಲ್ಲಿ ಕೊಚ್ಚಿಹೋದ ಹೀಗೆ ಹೆಳವರು ಹಂಪೆ ಬಿಟ್ಟು ಬೇರೆಡೆಗೆ ಹೋದರು.

ಇನ್ನೊಂದು ಕತೆಯ ಪ್ರಕಾರ ಹೆಳವರು ಹಂಪೆ ಹೊಳೆಯ ದಡದಲ್ಲಿ ನೂರು ಮನೆ ಮಾಡಿಕೊಂಡಿದ್ದರು ಆಗ ಉತ್ತರ ದಿಕ್ಕಿನಿಂದ ಧಾಳಿ ಬಂತು. ಹೆಳವರು ರಾತ್ರಿಯಿಡೀ ಗಂಗೆಯನ್ನು ಪ್ರಾರ್ಥಿಸಿದರು. ಬೆಳಿಗ್ಗೆ ಧಾಳಿಕಾರರು. ನೀರಿಗಿಳಿಯುತ್ತಿದ್ದಂತೆ, ಹೊಳೆ ಉಕ್ಕಿ ಹರಿದು ದಾಳಿ ಕಾರರನ್ನು ಕೊಚ್ಚಿಕೊಂಡ ಹೋಯಿತು. ಹೀಗೆ ಹೇಳವರು ಹಂಪೆಯೊಡನೆ ಸಾಧಿಸಿಕೊಂಡ ಸಂಬಂಧವು ಅವರ ವಲಸೆ ಮತ್ತು ವಿರೋಧಿಗಳ ಧಾಳಿಗೆ ಸಂಬಂಧಿಸಿದೆ ಎಂದು ಪುರಾಣಗಳಿಂದ ತಿಳಿಯುತ್ತದೆ.

ವೇಷಗಾರರು

ಹಂಪೆ ಪರಿಸರದ ಊರುಗಳಾದ ವೆಂಕಟಾಪುರ, ಗಂಗಾವತಿ, ಹೊಸಪೇಟೆ, ಕಂಪ್ಲಿ, ಕೊಪ್ಪಳಗಳಲ್ಲಿ 'ವೇಷಗಾರರು' ಸಮೂಹವಿದೆ. ಇವರನ್ನು 'ಬಹುರೂಪಿ'ಗಳೆಂದೂ ಕರೆಯುತ್ತಾರೆ. ವಿವಿಧ ವೇಷಗಳನ್ನು ಧರಿಸಿ, ಊರುಗಳಲ್ಲಿ, ಕೇರಿ ಕೇರಿಗಳಲ್ಲಿ ಪ್ರದರ್ಶನ ನೀಡಿ ಜನರಿಂದ ಹಣವನ್ನು ಪಡೆಯುತ್ತಾರೆ. ಬಂದ ಹಣದಿಂದ ತಮ್ಮ ಜೀವನ ನಿರ್ವಹಿಸುತ್ತಾರೆ. ಮತ್ತು ಹಂಪೆಯ ಬೇರೆ ಬೇರೆ ಕಡೆಗಳಲ್ಲಿರುವ ದೇವಸ್ಥಾನಗಳ ಅಂಗಳದಲ್ಲಿ ಇವರು ಸಾಮಾನ್ಯವಾಗಿ ಕಾಣಸಿಗುತ್ತಾರೆ. ಇವರು ಹಾಕುವ ವೇಷಗಳಲ್ಲಿ ಮೋಹಿನಿ, ಭಸ್ಮಾಸುರ, ವಶಿಷ್ಟ, ವಿಶ್ವಾಮಿತ್ರ, ಅಣ್ಣ ತಮ್ಮ ಜಟಾಸುರ, ನರಕಾಸುರ, ರಾಮಲಕ್ಷ್ಮಣ, ವಡ್ಡದಾಸ, ಇವು ಬಹಳ ಜನಪ್ರಿಯವಾಗಿವೆ.

ಇಂತಹ ಒಂದು ವ್ಯವಸ್ಥೆಯು ಈ ಪರಿಸರದಲ್ಲಿ ಅಂದಿನಿಂದ ಇಂದಿನವರೆಗೂ ಎಲ್ಲಾ ಜನವರ್ಗದವರು ನೆಲೆನಿಂತಿರುವುದು ಪ್ರಸ್ತುತವಾಗಿ ಕಂಡುಬರುತ್ತಾರೆ. ಇದು ಒಂದು ಕಾಲದಲ್ಲಿ ಹಂಪೆ ಧಾರ್ಮಿಕವಾಗಿ, ರಾಜಕೀಯವಾಗಿ ಅಥವಾ ಹಬ್ಬಗಳು ಹಾಗೂ ಯಾವುದೇ ಸಾಂಸ್ಕೃತಿಕ ಆಚರಣೆಗಳು ರಾಜರಿಂದ ನೆರವೇರುಸುತ್ತಿದ್ದರು. ಆದರೆ ಇಂದು ಸ್ಥಳೀಯ ಗಣ್ಯವ್ಯಕ್ತಿಗಳಿಂದ ರಾಜಕೀಯ ಮುಖಂಡರಿಂದ, ಊರಿನ ಮುಖಂಡರಿಂದ ಯಾವುದೇ ಹಬ್ಬಗಳು, ಆಚರಣೆಗಳು ಮತ್ತು ಇಲ್ಲಿನ ಸಾಂಸ್ಕೃತಿಕ ಆಚರಣೆಗಳು ನೆರವೇರುತ್ತವೆ ಆದರೆ. ಈ ಆಚರಣೆಯಲ್ಲಿ ಸುತ್ತಲಿನ ಎಲ್ಲ ಜನ ಸಮುದಾಯಗಳು ಪಾಲ್ಗೊಳ್ಳುತ್ತಾರೆ. ಅವರು ತಮ್ಮದೇಯಾದ ವಿಶಿಷ್ಟ ಪದ್ಧತಿಯನ್ನು ವಿರೂಪಾಕ್ಷ ದೇವಸ್ಥಾನಕ್ಕೆ ಅರ್ಪಿಸುತ್ತಾರೆ. ಇಂತಹ ಒಂದು ಸಾಮಾಜಿಕ ಸ್ಥಾನಮಾನವನ್ನು ತಿಳಿಯವುದಾದರೆ ಇಂದು ಆಚರಿಸುವ ಪೂಜೆ, ಉತ್ಸವ ಅಂದರೆ ಫಲಪೂಜೆ, ಹಂಪಿ ಉತ್ಸವ, ಇತರ ಕೆಲವು ಅಮವಾಸ್ಯೆಗಳಲ್ಲಿ ಇಲ್ಲಿ ಜನ ಸೇರುತ್ತಾರೆ.

೨.೪. ವಿಶ್ವಪರಂಪರೆ ಮಾನ್ಯತೆ ಹಿನ್ನೆಲೆ

ವಿಶ್ವಪರಂಪರೆ ಎಂದರೆ ದೇಶದ ಸಾಂಸ್ಕೃತಿಕ ಅಥವಾ ಮಾನವನ ಆಳಿದಂತಹ ಜೀವನ ಶೈಲಿಯನ್ನು ಹಾಗೂ ಕುರುಹುಗಳನ್ನು ಮುಂದಿನ ಸಮಾಜಕ್ಕೆ ತಿಳಿಸುವಂತಹ ಸಂಸ್ಥೆಯೆಂದು ಹೇಳಿದರೆ ತಪ್ಪಾಗಲಾರದು. ಯಾಕೆಂದರೆ ಇದು ಇಲ್ಲಿವರೆಗೂ ಗುರುತಿಸಿರುವ ಪ್ರತಿಯೊಂದು ಕುರುಹುಗಳು ಅಥವಾ ಉದ್ಯಾನಗಳು, ಅಂದಿನ ನೆಲೆಸಿರುವ ಜನಜೀವನದ ಪಾರಂಪರಿಕ ಲಕ್ಷಣಗಳನ್ನು ಕುಂಡುಕೊಂಡಿದೆ. ಅದರಂತೆ ಈ ಪರಿಸರದಲ್ಲಿ ಕಂಡುಬರುವ ಹಂಪೆ ಪರಿಸರ ಅಂದಿನ ಸಾಮ್ರಾಜ್ಯದ ವಿಜಯನಗರದ ಅರಸರ ಜೀವನಪದ್ಧತಿ ರಾಜರ ಹಾಗೂ ಜನಸಾಮಾನ್ಯರ ನಿರ್ಮಿಸಿರುವ ಗುಹೆಗಳು ದೇವಾಲಯಗಳು, ಮಾರುಕಟ್ಟೆಗಳು ಮಣ್ಣಿನ ಪಾತ್ರೆಗಳು, ವಿವಿಧ ಶಾಸನಗಳನ್ನು ಕಾಪಾಡುತ್ತಿದೆ ಎಂದು ಹೇಳಬಹುದು. ಇಂತಹ ಒಂದು ವಿಶ್ವಪರಂಪರೆಯ ಪಟ್ಟಿಯಲ್ಲಿ ಸೇರಿಸುವ ಹಂಪೆ ಈ ಕೆಳಗಿನಂತೆ ಚರ್ಚಿಸಲಾಗಿದೆ.

ಯುನಿಸ್ಕೋ ೧೯೭೨ರ ಅಧಿವೇಶನದಲ್ಲಿ ವಿಶ್ವದ ಅನೇಕ ಸಾಂಸ್ಕೃತಿಕ ಪ್ರಾಕೃತಿಕ ಸ್ಥಳಗಳನ್ನು ವಿಶ್ವದ ಆಸ್ತಿಯೆಂದು ಗುರುತಿಸಲು ನಿರ್ಣಯಿಸಿತು. ಯುನೆಸ್ಕೋಗೆ ಸೇರಿದ ವಿವಿಧ ದೇಶಗಳಲ್ಲಿ ಹರಡಿದ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಸ್ಥಳಗಳನ್ನು ಪಟ್ಟಿಮಾಡಿ ವಿಶಿಷ್ಟ ಹಾಗೂ ವಿಶ್ವಮಾನ್ಯವಾದ ಸ್ಮಾರಕಗಳನ್ನು ಗುರುತಿಸಿ ಅವುಗಳ ರಕ್ಷಣೆ ಇಡಿ ಮನುಕುಲಕ್ಕೆ ಸೇರಿದ್ದು ಎಂದು ಸಾರಿತು ಅಲ್ಲದೆ ಪರಸ್ಪರ ಸೌಹಾರ್ದಯುತ ಪರಿಸರದಲ್ಲಿ ಅವುಗಳ ರಕ್ಷಣೆ, ಸಂರಕ್ಷಣೆ ಮಾಡುವುದರ ಜೊತೆಗೆ ಇಂತಹ ಸಂಪತ್ತನ್ನು ಯಥಾಸ್ಥಿತಿಯಲ್ಲಿ ಮುಂದಿನ ಜನಾಂಗಕ್ಕೆ ಕೊಡುಗೆಯಾಗಿ ನೀಡಬೇಕಾಗಿದೆ ಅಲ್ಲದೆ ಅವುಗಳನ್ನು ವಿಶ್ವಪರಂಪರೆ ಸ್ಥಳಗಳೆಂದು ಘೋಷಿಸಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತು. ಈ ಹಿನ್ನೆಲೆಯಲ್ಲಿ ಹಂಪಿಯು ವಿಶ್ವಪರಂಪರೆಯಲ್ಲಿ ಸೇರ್ಪಡೆಯಾಗಿದೆ. ''ಇದು ಸೇರ್ಪಡೆಯಾಗಿದ್ದು ೧೯೮೬ರಲ್ಲಿ ಹಂಪಿಯಲ್ಲಿ ಯಾವುದೇ ರೀತಿಯ ಕಟ್ಟಡಗಳು, ಸ್ಥಳಗಳ ಒತ್ತುವರಿ, ಸ್ಮಾರಕಗಳಿಗೆ ಧಕ್ಕೆ ಎಲ್ಲೆಂದರಲ್ಲಿ ಅಗಿಯುವ ಪ್ರವೃತ್ತಿ, ಚಾರಿತ್ರಿಕ ಸ್ಥಳಗಳ ದುರ್ಬಳಕೆಗಳನ್ನು ತಡೆಯಲು ಶಾಸನದ ಮೂಲಕ ಕ್ರಮಕೈಗೊಂಡು ಸುರಕ್ಷಿತ ಪ್ರದೇಶವೆಂದು ಘೋಷಿಸಲಾಯಿತು. ಈ ಘೋಷಣೆಯಿಂದ ಹಂಪಿಯ ಸುತ್ತಮುತ್ತಲಿನ ಗ್ರಾಮಗಳು, ಪ್ರದೇಶಗಳು ಇದರ ವ್ಯಾಪ್ತಿಗೆ ಬಂದವು. ಮತ್ತು ಇದರ ಪೂರಕವಾಗಿ ''ಆರ್ಕಿಯಾಲಜಿಕಲ್ ಮಾನ್ಯೂಮೆಂಟ್ಸ್ ಅಂಡ್ ಸೈಟ್ಸ್ ಆ್ಯಕ್ಟ್ ೧೯೫೮'' ಸಹ ಪರಿಣಾಮಕಾರಿಯಾಗಿ ಸ್ಮಾರಕಗಳ ಹಾಗೂ ಪುರಾತತ್ವ ನಿವೇಶನಗಳ ರಕ್ಷಣೆಗೆ ಸಹಕಾರಿಯಾಗಿದೆ.''[೧೪]

ಹಿಗೆ ಹಂಪಿಯಲ್ಲಿ ಪ್ರತಿಯೊಂದು ಕುರುಹುಗಳು ನಿವೇಶನಗಳು ಸೇತುವೆಗಳು, ಹಾಗೂ ಸ್ಮಾರಕಗಳಿಗೆ ಧಕ್ಕೆಯಾಗುತ್ತಿರುವುದನ್ನು ಕಂಡು ಅಥವಾ ಅಪಾಯದಂಚಿನಲ್ಲಿವೆ ಎಂದು

ಅರಿತು ಕ್ರಿ.ಶ.೧೯೯೯ರಲ್ಲಿ ವಿಶ್ವಪರಂಪರೆ ಸ್ಥಳಗಳ ಪಟ್ಟಿಗೆ ಹಂಪಿಯನ್ನು ಸೇರಿಸಲಾಯಿತು. ಆದ್ದರಿಂದ ''ಹಂಪಿಯಲ್ಲಿರುವ ಸಮಸ್ಯೆಗಳ ಸ್ಥಳ ಪರಿಶೀಲನೆಗೆಂದು ಬಂದ ಯುನೆಸ್ಕೊ ಸಮಿತಿ ಸೇಸುವೆಗಳಲ್ಲದೆ ಇನ್ನೂ ಹಲವಾರು ನೂನ್ಯತೆಗಳಿವೆ ಎಂಬುದನ್ನು ಮನಗಂಡು ಜಾಗೃತವಾಗಿ, ಭಾರತ ಸರಕಾರಕ್ಕೆ ಅನೇಕ ಮಾಹಿತಿ ಹಾಗೂ ಸಲಹೆಗಳನ್ನು ನೀಡಿತು. ಯುನಿಸ್ಕೊ ಸಮಿತಿ ಮೂರುಭಾರಿ ಭೇಟಿಮಾಡಿ ಸಮಸ್ಯೆಗಳ ಅಧ್ಯಯನ ನಡೆಸಿ ಅವುಗಳಲ್ಲಿ ಮುಖ್ಯವಾದುದು ಸೇತುವೆಗಳು ಹಾಗೂ ಬಳಸು ದಾರಿಗಳು.ಯೋಜನೆಗೆ ಬದ್ಧವಾಗಿ ಕಟ್ಟಡ ನಿರ್ಮಾಣವಾಗುವ ಬಗೆಗೆ ಹಾಗೂ ಪ್ರವಾಸಿ ಸೌಲಭ್ಯ ಮತ್ತು ಮೂಲಭೂತ ಸೌಕರ್ಯಗಳು, ಹಂಪಿ ಗ್ರಾಮ ಹಾಗೂ ಪರಿಸರದ ಪಟ್ಟಣ, ಗ್ರಾಮಗಳನ್ನು ಅಭಿವೃದ್ಧಿ ಪಡಿಸುವ ಬಗೆಗೆ ತೀವ್ರವಾಗಿ ಯೋಜನೆ ರೂಪಿಸಬೇಕೆಂದು ನಿರ್ಧರಿಸಲಾಯಿತು.''[೧೫]

ಅಡಿ ಟಿಪ್ಪಣಿಗಳು

೧. ಪುರುಷೋತ್ತಮ ಬಿಳಿಮಲೆ, ಚೆಲುವರಾಜು, ಹಂಪಿ ಜನಪದ ಪ್ರಸಾರಾಂಗ ಕನ್ನಡ ವಿ.ವಿ.ಹಂಪಿ ೧೯೯೩ ಪು.೬೬

೨. ಅದೇ,ಪು.೭೦

೩. ಅದೇ, ಪು.೭೪

೪. ಅದೇ, ಪು.೭೫

೫. ಅದೇ, ಪು.೭೬

೬. ಅದೇ, ಪು.೮೧

೭. ಚಿನ್ನಸ್ವಾಮಿ ಸೋಸಲೆ ಎನ್, ಮಹದೇವ ಸಿ.: ಹಂಪಿ ಅಂದು-ಇಂದು, ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ ೨೦೦೬ ಪು.೧

೮. ಚಿನ್ನಸ್ವಾಮಿ ಸೋಸಲೆ ಎನ್, ಮಹದೇವ ಸಿ.: ಹಂಪಿ ಅಂದು-ಇಂದು, ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ ೨೦೦೬ ಪು.೬

೯. ಅದೇ, ಪು.೭

೧೦. ಅದೇ, ಪು.೮

೧೧. ಅದೇ, ಪು.೮

೧೨. ಅದೇ, ಪು.೮

೧೩. ಅದೇ, ಪು.೨

೧೪. ಚಿನ್ನಸ್ವಾಮಿ ಸೋಸಲೆ ಎನ್., ಮಹದೇವ ಸಿ, ಹಂಪಿ ಅಂದು ಇಂದು, ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ, ೨೦೦೬, ಪು.೬೫

೧೫. ಅದೇ, ಪು.೬೬

* * *

ಅಧ್ಯಾಯ ಮೂರು

ಹಂಪಿ ಪರಿಸರದಲ್ಲಿರುವ ಬುಡಕಟ್ಟು ಸಮುದಾಯಗಳು

೩.೧. ಬೇಡಬುಡಕಟ್ಟು (ಊರು ಬೇಡ ಮತ್ತು ಮ್ಯಾಸಬೇಡ)

೩..೨. ಹಕ್ಕಿಪಿಕ್ಕಿ ಸಮುದಾಯ

೩.೩. ಲಂಬಾಣಿ ಸಮುದಾಯ

೩.೪. ದುರಗ ಮುರಗಿ ಸಮುದಾಯ

೩.೫. ಇತರ ಅಲೆಮಾರಿ ಬುಡಕಟ್ಟು ಸಮುದಾಯಗಳು

ಹಂಪಿಯು ಈಗಿನ ಹೊಸಪೇಟೆ ತಾಲೂಕಿನ ಕಮಲಾಪುರ ಹೋಬಳಿಗೆ ಬರುವ ಒಂದು ಪುಟ್ಟ ಗ್ರಾಮವಾಗಿದೆ. ಇದು ಅಂದಿನ ರಾಮಾಯಣದಲ್ಲಿ ವಿವರಣೆ ಹೊಂದಿರುವ ಕಿಷ್ಕಿಂಧೆಯು ಇಲ್ಲಿಯೇ ಇದೆ ಎಂದು ಪ್ರಚಲಿತವಿರವ ಜನವಾಡಿಕೆ ಮತ್ತು ಕೆಲವು ಪುರಾಣಗಳು ತಿಳಿಸುತ್ತವೆ. ಆದರೆ ಇಲ್ಲಿನ ಸುತ್ತಲಿನ ಕೆಲವು ಹಳ್ಳಿಗಳಲ್ಲಿ ಅಂದಿನ ಜನಸಾಮಾನ್ಯರ ಬದುಕು ಕೂಡ ಈ ಪ್ರದೇಶದಲ್ಲಿ ನೆಲೆನಿಂತಿತ್ತು. ಮುಂದೆ ವಿಜಯನಗರ ಸಾಮ್ರಾಜ್ಯ ಉದಯಿಸಿದ ನಂತರ ಹಂಪಿಯಲ್ಲಿ ಒಂದು ಅರಸ ಮನೆತನಕ್ಕೆ ಈ ಪ್ರದೇಶ ಒಳಪಟ್ಟು ಸುತ್ತಲಿನ ಜನಸಾಮಾನ್ಯರು ಇವರ ಅಧೀನಕ್ಕೆ ಒಳಗಾಗಿ ಜೀವನ ನಡೆಸುತ್ತಿದ್ದರು. ಅವರಲ್ಲಿ ಬೇಡ ಸಮುದಾಯವು ಸಾಮ್ರಾಜ್ಯದಲ್ಲಿ ಮಂತ್ರಿಯಾಗಿ, ಸೈನಿಕರಾಗಿ, ಮತ್ತು ವಿವಿಧ ಹುದ್ದೆಗಳಲ್ಲಿ ತೊಡಗಿಸಿಕೊಂಡಿದ್ದಿದು ಇತಿಹಾಸದಿಂದ ತಿಳಿದುಬರುತ್ತದೆ. ಹಾಗೆಯೇ ಮೇದರು, ಹಕ್ಕಿಪಿಕ್ಕಿ, ಸುಡುಗಾಡು ಸಿದ್ದರು, ಅಡವಿಚೆಂಚರು, ಹಾಗೂ ಹಗಲುವೇಷಗಾರರು, ದುರಗ-ಮುರುಗಿ, ಗೋಸಾಯಿಗಳು, ಕೊರಚರು, ಕೊರಮ, ಗೊಂದಲಿಗರು, ಹೆಳವರು, ಮೋಡಿಕಾರರು, ಲಂಬಾಣಿಯವರು, ಕಲಾಯಿಗಳು, ದೊಂಬ ಸಮುದಾಯಗಳು ಸಹಾ ಈ ಸಮ್ರಾಜ್ಯದಲ್ಲಿದ್ದವು. ಆದ್ದರಿಂದ ಈ ಪರಿಕರದಲ್ಲಿ (ಹಂಪಿಪರಿಸರ, ಕಮಲಾಪುರ) ಕಂಡುಬರುವ ಬೇಡ ಸಮುದಾಯದ (ಮ್ಯಾಸಬೇಡ, ಊರುಬೇಡ) ಇವರು ಇಂದಿಗೂ ಅವರು ಆಚರಿಸುವ ಹಬ್ಬಗಳಲ್ಲಿ (ಯುಗಾದಿ ಹಬ್ಬ) ಆಯುಧಗಳಿಗೆ ಪೂಜೆ ಮಾಡುತ್ತಾರೆ. ಈ ಹಬ್ಬಗಳಲ್ಲಿ ಊರು ನಾಯಕರ ಮತ್ತು ಮ್ಯಾಸನಾಯಕರಲ್ಲಿ ಆಚರಣೆ ಪದ್ಧತಿಗಳು ವ್ಯತ್ಯಾಸ ಕಂಡುಬರುತ್ತದೆ. ಮ್ಯಾಸನಾಯಕರು, ಅವತ್ತಿನ (ಹಬ್ಬದ ಮೂರನೇ ದಿವಸ) ಇಡಿ ಕೇರಿಗಳು (ಕಮಲಾಪುರದ ಏಳುಕೇರಿಗಳು) ಬೇಟೆಯಾಡಿದ ಪ್ರಾಣಿಗಳನ್ನು ತೆಗೆದುಕೊಂಡು ಮ್ಯಾಸನಾಯಕರ ಏಳು ಕೇರಿಗಳಲ್ಲಿ ಕುಣಿದು ಕುಪ್ಪಳಿಸುತ್ತಾರೆ. ಆದರೆ ಊರು ನಾಯಕರು ಬೇಟೆ ಆಡಿ ಅವರ ಕೇರಿಗೆ ಹೋಗಿ ಆಂಜನೆಯ ದೇವಾಲಯದಲ್ಲಿ ಎಲ್ಲರು ಸೇರಿ ಬೇಟೆ ಆಡಿದ ಪ್ರಾಣಿಗಳನ್ನು ಸಮನಾಗಿ ಹಂಚಿಕೊಳ್ಳುತ್ತಾರೆ. ಈ ಪದ್ಧತಿಯನ್ನು

ಇನ್ನೂ ಕೆಲವು ಈ ಪರಿಸರದಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳು ಭಿನ್ನರೀತಿಯಲ್ಲಿ ಆಚರಿಸುವುದು ಕಂಡುಬರುತ್ತದೆ. ಅಂತಹ ಸಮುದಾಯಗಳಲ್ಲಿ ಮೇದರು, ಹಕ್ಕಿಪಿಕ್ಕಿ, ಸುಡುಗಾಡು ಸಿದ್ಧರು, ಅಡವಿಚೆಂಚರು ಹಾಗೂ ಹಗಲು ವೇಷಗಾರರು, ದುರುಗ-ಮುರುಗಿ, ಗೋಸಂಗಿಗಳು, ಕೊರಚರು, ಕೊರಮ, ಗೊಂದಲಿಗರು, ಹೇಳುವರು, ಮೋಡಿಗಾರರು, ಲಂಬಾಣಿಯವರು ಈ ಪ್ರದೇಶದಲ್ಲಿ ನೆಲೆನಿಂತಿವೆ. ಪ್ರಸ್ತುತವಾಗಿ ಈ ಸಮುದಾಯಗಳು ಜಾಗತೀಕರಣ ಪ್ರಭಾವದಿಂದಾಗಿ ಬೇರೆ ಬೇರೆ ವೃತ್ತಿ, ಆಚರಣೆ, ಸಂಪ್ರದಾಯಗಳಿಗೆ ಮೊರೆ ಹೋಗಿನಿಂತಿವೆ. ಇಂತಹ ಒಂದು ಪರ್ಯಾಯ ಬದುಕಿನ ಸ್ಥಿತಿಗತಿಯನ್ನು ಈ ಕೆಳಗಿನಂತೆ ಪರಿಚಯಿಸಲು ಪ್ರಯತ್ನಿಸಲಾಗಿದೆ.

೩.೧. ಬೇಡಬುಡಕಟ್ಟು (ಊರು ಬೇಡ ಮತ್ತು ಮ್ಯಾಸಬೇಡ)

ಭಾರತ ಅನೇಕ ಬುಡಕಟ್ಟುಗಳಿಂದ ಕೂಡಿರುವ ದೇಶ ಸಾವಿರಾರು ಬುಡಕಟ್ಟುಗಳು ಇಲ್ಲಿ ವಾಸಿಸುತ್ತಿದ್ದು. ಕರ್ನಾಟಕದಲ್ಲಿ ಸುಮಾರು ೫೦ ಬುಡಕಟ್ಟುಗಳು ನೆಲೆನಿಂತು, ತಮ್ಮದೇ ಆದ ವೈಶಿಷ್ಟ್ಯಗಳಿಂದ ಕೂಡಿರುತ್ತವೆ. ಅಂಥವುಗಳಲ್ಲಿ ಈ 'ಬೇಡ' ಬುಡಕಟ್ಟು ಒಂದಾಗಿದೆ. ಇವರ ವೃತ್ತಿ ''ಬೇಟೆ'' ಯಾಡುವುದು ಗೆಡ್ಡೆ ಗೆಣಸುಗಳನ್ನು ಅಗೆಯುವುದು ಇವೇ ಅವರ ಆಹಾರದ ಮೂಲಗಳಾಗಿದ್ದವು. ಆದರೆ ಇಂದು ನಾಗರಿಕ ಜಗತ್ತಿಗೆ ಹೊಂದಿಕೊಂಡಿದ್ದಾರೆ. ಕಾರಣ ಇಂದಿನ ಆಧುನಿಕ ಬದುಕಿಗೆ ಮೊರೆ ಹೋಗುವುದು ಅನಿವಾರ್ಯ. ಆದ್ದರಿಂದ ಈ ಪರಿಸರದಲ್ಲಿ ಕಂಡುಬರುವ ಈ ಸಮುದಾಯವು (ಊರುನಾಯಕ, ಮ್ಯಾಸನಾಯಕ) ಪ್ರಸ್ತುತ ದಿನಮಾನಗಳಲ್ಲಿ ಕೆಲವು ಕುಟುಂಬಗಳಿಗೆ ಭೂಮಿ ಇದೆ. ಇನ್ನು ಕೆಲವು ಕುಟುಂಬಗಳಿಗೆ ಭೂಮಿ ಇಲ್ಲದೆ ಇರುವುದು ಕಂಡುಬರುತ್ತದೆ. ಆದ್ದರಿಂದ ಈ ಬುಡಕಟ್ಟುಗಳು ಸಣ್ಣ ಪುಟ್ಟ ವ್ಯಾಪಾರ, ಭೂಮಾಲೀಕರಲ್ಲಿ, ಕೃಷಿ ಕೆಲಸ ಹಾಗೂ ಇಲ್ಲಿನ (ಹೊಸಪೇಟೆ ತಾಲೂಕಿನ ಜಿಂದಾಲ ಎಂ.ಎಸ್.ಪಿ.ಎಲ್) ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ಹೀಗೆ ಅನೇಕ ರೀತಿಯಲ್ಲಿ ಬದುಕನ್ನು ಕಟ್ಟಿಕೊಂಡಿರುತ್ತಾರೆ.

ಈ ಬುಡಕಟ್ಟು ಬೇಡ ಸಮುದಾಯ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮಾತ್ರ ಎರಡು ಪಂಗಡಗಳು ಕಂಡುಬರುತ್ತಾರೆ. ಇವರಿಗೆ ಈ ಪ್ರದೇಶದಲ್ಲಿ ಒಂದು ಮ್ಯಾಸಬೇಡ, ಇನ್ನೊಂದು ಊರು ಬೇಡ ಎಂದು ಕರೆಯುತ್ತಾರೆ. ಊರೊಳಗೆ ಬಂದು ನೆಲೆಸಿದವರನ್ನು ಊರುಬೇಡರೆಂದು ಕರೆಯುತ್ತಾರೆ. ಊರು ಹೊರಗೆ ವಾಸಿಸುವ ಜನರನ್ನು ಮ್ಯಾಸನಾಯಕ, ಮ್ಯಾಸಬೇಡರೆಂದು ಕರೆಯುತ್ತಾರೆ. ಆದರೆ ಈ ಸಮುದಾಯಗಳು ಆಧುನಿಕ ಜಗತ್ತಿಗೆ ಒಳಗಾಗಿ ಎಲ್ಲರು ಊರೊಳಗೆ ವಾಸಿಸುವುದು ಸಾಮಾನ್ಯವಾಗಿದೆ. ಆದರೂ ಸಹ ಇನ್ನೂ ಇವರಲ್ಲಿ ಊರು ನಾಯಕ, ಈ ಮ್ಯಾಸನಾಯಕ ಎಂದು ಕರೆಯುವುದು ರೂಢಿಯಲ್ಲಿದೆ. ಕಾರಣ ಇವರಲ್ಲಿ ಧಾರ್ಮಿಕ ಆಚರಣೆ,

ರೂಢಿ ಸಂಪ್ರಾದಯಗಳು, ಸಾಂಸ್ಕೃತಿಕ ಆಚರಣೆಗಳು ಅವರವರು ಬೇರೆ ಬೇರೆ ರೀತಿಯಲ್ಲಿ ಮೈಗೂಡಿಸಿಕೊಂಡಿವೆ.

ಹೀಗೆ ಈ ಸಮುದಾಯಗಳಲ್ಲಿ ಈ ಪರಿಸರದಲ್ಲಿ ಕಂಡುಬರುವ ಹಾಗೇ ಊರು ನಾಯಕರು ವೃತ್ತಿ ಜೀವನ ಬೇರೆ ಇದೆ. ಇದೇ ಊರು ನಾಯಕರು, ವ್ಯಾಪಾರದ್ದೆ ಕೆಲಸ, ವಾಹನಗಳು ಬಾಡಿಗೆಯಾಗಿ ತೆಗೆದುಕೊಂಡು ಜೀವನ ನಡೆಸುತ್ತಿದ್ದಾರೆ. ಹೀಗೆ ಅನೇಕ ಪರ್ಯಾಯ ವೃತ್ತಿಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ಹಾಗೇ ಮ್ಯಾಸನಾಯಕರು ಮೂಲತಃ ಅವರ ಕಸುಬು, ಕೆಲಸ ಅಂದರೆ ಜೀವನ ವೃತ್ತಿ ದನಕರಗಳು, ಮೇಕೆಗಳು, ಕುರಿಗಳನ್ನು ಮೇಯಿಸಿಕೊಂಡು ಕಾಡುಗೊಲ್ಲರಂತೆಯೇ ಕೆಲವೊಂದು ಕಾಲದಲ್ಲಿ ಅಲೆಮಾರಿಯಾಗಿದ್ದವರು, ನಂತರದಲ್ಲಿ ಒಂದು ಕಡೆ ನೆಲೆನಿಂತು ಹಟ್ಟಿಗಳನ್ನು ನಿರ್ಮಿಸಿಕೊಂಡು ವಾಸಿಸತೊಡಗಿದರು. ಈ ರೀತಿ ಇದ್ದ ಬದುಕು ಪ್ರಸ್ತುತವಾಗಿ ಅಂದರೆ ಆಧುನಿಕ ಬದುಕಿನ ಕಡೆಗೆ ಮುಖಮಾಡಿ ನಿಂತು ಇವರು ಕೂಡ ಈ ಪರಿಸರದಲ್ಲಿ ಭೂರಹಿತರಲ್ಲಿ, ಕೃಷಿ ಕೆಲಸ, ವ್ಯಾಪಾರ, ಕೈಗಾರಿಕಾ ಕಾರ್ಮಿಕರಾಗಿ, ಆಧುನಿಕ ವೃತ್ತಿಗಳಿಗೆ ಮೊರೆ ಹೋಗಿ ಎಲ್ಲಿ ಆಧುನಿಕ ವೃತ್ತಿ ಕೆಲಸಗಳನ್ನು ಮಾಡುವುದು. ಇವರು ರೂಢಿಸಿಕೊಂಡು ಬದುಕುತ್ತಿದ್ದಾರೆ.

ಈ ಪರಿಸರದಲ್ಲಿ ಬೇಡ ಸಮುದಾಯವು ಮ್ಯಾಸಬೇಡ, ಊರು ಬೇಡ ಅನೇಕ ರೀತಿಯಲ್ಲಿ ಅಥವಾ ರಂಗಗಳಲ್ಲಿ ಈಜುತ್ತಿರುವುದು ಅನಿವಾರ್ಯದ ಸಂಗತಿಯಾಗಿದೆ. ಆದ್ದರಿಂದ ಸಾಮಾಜಿಕ ಸ್ಥಿತಿಗತಿಯ ಅರಿಯಲ್ಲಿ ಇಲ್ಲಿನ ಈ ಸಮುದಾಯಗಳ ಬದುಕೇ ಸಾಕ್ಷಿಯಾಗಿದೆ. ಬೇಡ ಬುಡಕಟ್ಟಿನಲ್ಲಿ ಎರಡು ಪಂಗಡಗಳು ಕಂಡುಬರುತ್ತವೆ. ಒಂದು ಮ್ಯಾಸಬೇಡರು ಇನ್ನೊಂದು ಊರು ಬೇಡರು, ಊರೊಳಗೆ ಬಂದ ನೆಲೆಸಿದವರನ್ನು ಊರುಬೇಡರೆಂದು ಕರೆದಿದ್ದಾರೆ. ಆದರೆ ಇಂದು ಮ್ಯಾಸನಾಯಕರೂ ಸಹ ನಾಗರೀಕತೆಯಲ್ಲಿ ಸೇರಿಹೋಗಿದ್ದು ಇಂದೂ ಎರಡೂ ಪಂಗಡಗಳೂ ಊರೊಳಗೆ ವಾಸಿಸುತ್ತವೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಮ್ಯಾಸರ ಹಟ್ಟಿಗಳು ಪ್ರತ್ಯೇಕವಿದ್ದು ತಮ್ಮತನವನ್ನು ಇನ್ನು ಉಳಿಸಿಕೊಂಡಿವೆ.

ಬೇಡರ ಉಪಪಂಗಡಗಳು

೧. ಊರನಾಯಕರು ಚಿನ್ನಬೋಯಿ, ೨. ಮ್ಯಾಸಬೇಡರು ಪೆದ್ದಬೋಯಿ, ೩. ಗುಡ್ಲಬೇಡ ಗುಡಿಸಲು ಬೇಡ, ೪. ಮತ್ತಮ್ಮ ಅಥವಾ ಉರಸಿಬೇಡ ಮತ್ತು ಸಾದರಬೇಡ, ೫. ಹಾಲುಬೇಡ, ೬. ಮೊಂಡಬೇಡ ಎಂಬ ಪ್ರಮುಖ ಉಪಪಂಗಡಗಳನ್ನು ಕಾಣಬಹುದು.

೩.೨. ಹಕ್ಕಿಪಿಕ್ಕಿ ಸಮುದಾಯ

ಮೂಲತಃ ಮಾನವ ಅಲೆಮಾರಿ ಆದರೆ ಆತನ ಬೌದ್ಧಿಕ ಬೆಳವಣಿಗೆಯಿಂದ ಇಂದು ತಾನು ಬಯಸಿದಂತೆ ಐಷಾರಾಮಿ ಬದುಕನ್ನು ಹೊಂದಿದ್ದನಾದರೂ ಅದು ಎಲ್ಲರಿಗೂ

ಲಭ್ಯವಿಲ್ಲ. ಶೇಕಡಾ ೩೦ ಕ್ಕಿಂತ ಹೆಚ್ಚಿನ ಜನರು ನೆಲೆಯಿಲ್ಲದೆ ಬದುಕುತ್ತಿರುವುದೂ ಅವರಲ್ಲಿ ಕೆಲವು ಬುಡಕಟ್ಟು ಸಮುದಾಯಗಳು ಅಲೆಮಾರಿಗಳಾಗಿ ಸದಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುತ್ತಿದ್ದಾರೆ.

ಬ್ರಿಟಿಷರ ಸರ್ಕಾರ ಬ್ರಿಟಿಷರ ದಬ್ಬಾಳಿಕೆ ತಾಳಲಾರದೆ ಯಾರ ಹೊಟ್ಟೆಪಾಡಿಗಾಗಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಅಲೆಮಾರಿಗಳಾಗಿ ಜೀವನ ನಡೆಸುತ್ತಾ ಕರ್ನಾಟಕಕ್ಕೆ ಬಂದು ಕೆಲವು ಜಿಲ್ಲೆಗಳಲ್ಲಿ ನೆಲೆಸಿದ್ದು ಕಂಡುಬರುತ್ತದೆ. ಇವುಗಳಲ್ಲಿ ಬಳ್ಳಾರಿ ಜಿಲ್ಲೆಗೆ ಬಂದು ಈ ಒಂದು ಪರಿಸರದಲ್ಲಿ ತಮ್ಮ ಜೀವನ ಆಯಾ ಕಾಲಮಾನಕ್ಕೆ ತಕ್ಕಂತೆ ನೆಲೆನಿಂತು ಮುಂದೆ ಇಲ್ಲಿನ ಸುತ್ತಲಿನ ಪ್ರದೇಶಗಳಲ್ಲಿ ಅಲೆದಾಡುತ್ತ ಕಂಪ್ಲಿಯ ಕಡೆ ಧಾವಿಸಿದರು. ಕಾರಣ ಇಲ್ಲಿನ ಒಂದು ಧಾರ್ಮಿಕ, ರಾಜಕೀಯ ಸಾಂಸ್ಕೃತಿಕ ಮೈದುಂಬಿಸಿಕೊಂಡ ಹಂಪಿ ಕ್ಷೇತ್ರವು ಜನರಿಗೆ ಆಶ್ರಯ ತಾಣವಾಗಿ ನಿಂತಿತ್ತು. ಕಾಲಗತಿಸಿದ್ದಂತೆ ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯ ಉದಯಿಸಿತು. ಇಂತ ಒಂದು ರಾಜ ವೈಭವದ ಸಾಮ್ರಾಜ್ಯವು ಇವರಿಗೆ ಸಣ್ಣಪುಟ್ಟ ಕೆಲಸಗಳು ದೊರಕಿಸಿಕೊಟ್ಟು ನೆಲೆನಿಲ್ಲಲಿಕ್ಕೆ ಅವಕಾಶವೂ ಮಾಡಿಕೊಟ್ಟಿದೆ ಎಂದರೆ ತಪ್ಪಾಗಲಾರದು. ಇವರಲ್ಲಿ ಕೆಲವು ಸೈನಿಕರಾಗಿ ಸೇವೆಮಾಡಿ ಜೀವನ ನಡೆಸಿವೆ ಎಂದು ಇವರಲ್ಲಿ ಕೆಲವರ ಅಭಿಪ್ರಾಯ ಆದರೂ ಸಂಶೋಧನಾ ಹಿನ್ನೆಲೆಯಲ್ಲಿ ಹೇಳುವುದಾದರೆ ಅನೇಕ ಭಿನ್ನಾಭಿಪ್ರಾಯ ಉಂಟು. ಒಟ್ಟಾರೆಯಾಗಿ ಕಂಡುಬರುವುದಾದರೆ ಇವರು ಈ ಪ್ರದೇಶದಲ್ಲಿ ಸುಮಾರು ೩ ನೂರು ವರ್ಷಗಳ ಕಾಲ ಇಲ್ಲಿ ನೆಲೆನಿಂತಿದ್ದು ಈ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

ಇಂತಹ ಅಲೆಮಾರಿ ಸಮುದಾಯಗಳಿಗೆ ಪ್ರತಿಯೊಂದು ರಾಜ್ಯದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಉದಾಹರಣೆಗಾಗಿ ಅಲೆಮಾರಿ ಎಂಬ ಪದಕ್ಕೆ ತಮಿಳಿನಲ್ಲಿ ಪೊಕ್ಕನ್, ತುಳುವಿನಲ್ಲಿ ತೆಂಡುಳಿ, ತೆಲುಗಿನಲ್ಲಿ ತಿರುಗುಬೋತು, ಮಲೆಮಾಳಂನಲ್ಲಿ ತೆಂಟಿ, ಮರಾಠಿಯಲ್ಲಿ ಭಟಕ್ಯಾ, ಹಿಂದಿಯಲ್ಲಿ ಸಂಚಾರಿ ಘಮಂತು, ಗ್ರೀಕ್‌ನಲ್ಲಿ ನೇಮಿನ್, ಲ್ಯಾಟಿನ್‌ನಲ್ಲಿ ನೋಮಾಸ್, ಇಂಗ್ಲಿಷಿನಲ್ಲಿ ನೋಮ್ಯಾಡ್ ಜೊತೆಗೆ ಪರದೇಶಿ, ನೆಲೆಯಿಲ್ಲದವರು, ದೇಶ ಸಂಚಾರಿಗಳು, ಪರಸ್ಥಳದವರು, ಹೊರಗಡೆಯವರು, ವಲಸಿಗರು, ಗಿರಿಜನರು, ಸನ್ಯಾಸಿಗಳು ಎಂಬ ಇತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ. ಭಿಕ್ಷಾ ವೃತ್ತಿಯ ಹಿನ್ನೆಲೆಯಲ್ಲಿ ಇವರನ್ನು ತಮಿಳಿನಲ್ಲಿ ಪಿಚ್ಚೆಕರಾ, ಹಿಂದಿಯಲ್ಲಿ ಭಿಕಾರಿ, ಕನ್ನಡದಲ್ಲಿ ಭಿಕ್ಷುಕರೆಂತಲೂ ಕರೆಯುತ್ತಾರೆ.[೧]

ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಹಕ್ಕಿಪಿಕ್ಕಿ ಸಮುದಾಯವು ಒಂದು. ಇದು ಮೂಲತಃ ಗುಜರಾತ ರಾಜ್ಯದಿಂದ ಮಹಾರಾಷ್ಟ್ರ ರಾಜ್ಯದ ಮೂಲಕ ಕರ್ನಾಟಕ್ಕೆ ವಲಸೆ ಬಂದು ಈ ಪರಿಸರದಲ್ಲಿ ಹಂಪಿಯಲ್ಲಿ ಸಮಾರು ೩೦೦ ರಿಂದ ೪೦೦ ವರ್ಷಗಳ ಕಾಲ ಇಲ್ಲಿ ಬುದುಕು ಸಾಗಿಸುತ್ತಿವೆ. ಇರು ಬೇಟೆಯನ್ನು ತಮ್ಮ ಮೂಲ ಕಸುಬನ್ನಾಗಿ ಮಾಡಿಕೊಂಡು,

ಕಾಲ ಕಳೆದಂತೆ ಪರ್ಯಾಯ ಕಸುಬುಗಳನ್ನು ಕಲಿತು ಜೀವನ ಸಾಗಿಸುತ್ತಿದ್ದಾರೆ. ಮೂಲತ ಇವರು ವಿಜಯನಗರ ಸಾಮ್ರಾಜ್ಯದಲ್ಲಿ ಕೆಲವು ಉದ್ಯೋಗಗಳಲ್ಲಿ ಕೂಡ ಕಾರ್ಯನಿರ್ವಹಿಸಿಕೊಂಡು ಹಾಗೂ ಬೇಟೆಯನ್ನು ಆಡಿಕೊಂಡು ಅಂದಿನಿಂದ ಇಂದಿನವರೆಗೂ ಸಮಾಜದ ಏರುಪೇರುಗಳಿಂದ ತೊಳಲಾಡುತ್ತ ಬದುಕುತ್ತಿದ್ದಾರೆ. ಆದರೆ ಇಂದು ಅವರ ಮೂಲ ಕಸುಬು ಕಳೆದುಕೊಂಡು ಅದರ ಜೊತೆಗೆ ಆಧುನಿಕ ವೃತ್ತಿ ಜೀವನಕ್ಕೆ ಒಳಗಾಗಿವೆ. ಉದಾ. ಬೇಸಾಯ, ಕೃಷಿ ಕೂಲಿ, ಕೈಗಾರಿಕೆ ಕಾರ್ಮಿಕ, ಸಣ್ಣ ಪುಟ್ಟ ವಸ್ತುಗಳ ಮಾರಾಟ, ದುರಸ್ತಿಕಾರ್ಯ ಮತ್ತು ಹಳೆ ಪ್ಲಾಸ್ಟಿಕ್ ಆಯ್ದು ಮಾರಾಟ ಮಾಡುವುದರಲ್ಲಿಯೂ ನಿರತರಾಗಿದ್ದಾರೆ.

೩.೩.ಲಂಬಾಣಿ ಸಮುದಾಯ

ಲಂಬಾಣಿ ಸಮುದಾಯವು ಬಾಹ್ಯ, ಚಹರೆಗಳ ಮೂಲಕ ನಮ್ಮ ಗಮನವನ್ನು ಸೆಳೆಯುತ್ತಾರೆ. ಸ್ತ್ರೀಯರ ಅತ್ಯಾಕರ್ಷಕ ವೇಷಭೂಷಣ ಆಭರಣಗಳಿಂದ ಇವರನ್ನು ಲಂಬಾಣಿಗರೆಂದು ಬೇಗ ಗುರುತಿಸಬಹುದು. ತಮ್ಮ ವಿಶಿಷ್ಟ ಸಾಂಸ್ಕೃತಿಕ ಚಹರೆಯನ್ನು ಕಾಪಾಡಿಕೊಂಡು ಊರಿಂದ ಊರಿಗೆ, ಸ್ಥಳದಿಂದ ಸ್ಥಳಕ್ಕೆ ಊರು ಹೊರಗಿನ ಪ್ರದೇಶವನ್ನು ಪ್ರತ್ಯೇಕ ತಾಂಡಗಳನ್ನು ಕಟ್ಟಿಕೊಂಡು ತಮ್ಮ ಕುಟುಂಬಗಳ ಮತ್ತು ರಕ್ತ ಸಂಬಂಧಿಗಳ ಜೊತೆ ತಮ್ಮದೇ ಆದ ಆಚಾರ ವಿಚಾರ, ಸಂಪ್ರದಾಯ, ವಿಧಿ, ನಿಷೇಧ, ಕುಲದೈವ, ಭಾಷೆ, ಕುಲ ಪಂಚಾಯಿತಿ, ವೇಷಭೂಷಣಗಳಿಂದ ಇತರೆ ಸಮುದಾಯಗಳಿಗಿಂತ ಭಿನ್ನವಾಗಿಯೇ ಜೀವಿಸುತ್ತಿದ್ದಾರೆ. ಇವರನ್ನು ಲಂಬಾಣಿ, ಬಣಜಾರ, ಬಂಜಾರಾ, ಸುಕಾಲಿ, ನಾಯ್ಕ ಮುಂತಾದ ಹಲವಾರು ಹೆಸರುಗಳಿಂದ ಗುರುತಿಸುತ್ತಾರೆ. ಭಾರತದಾದ್ಯಂತ ಹರಡಿರುವ ಲಂಬಾಣಿಗಳು ಒಂದೇ ಜಾತಿಯವರಾದರೂ, ತಾವು ಅನುಸರಿಸುವ ಕಸುಬುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ಹೆಸರುಗಳು ಬಂದಿವೆ ಲಂಬಾಣಿ ಎನ್ನುವ ಪದ ಸಂಸ್ಕೃತದ ಲವಣ ಎಂಬ ಶಬ್ದದಿಂದ ಬಂದಿದೆ. ಲವಣ ಎಂದರೆ ಉಪ್ಪು. ಇದು ಇವರ ವ್ಯಾಪಾರದ ಒಂದು ಮೂಲಭೂತ ಸರಕಾಗಿತ್ತು. ಬಂಜಾರ ಎಂಬ ಇನ್ನೊಂದು ಹೆಸರು ಕೂಡ ಸಂಸ್ಕೃತದ ವನಜಾರಾ (ಕಾಡಿನಲ್ಲಿ ಅಲೆದಾಡು) ಎಂಬ ಪದದಿಂದ ಬಂದಿದೆ. ಲಂಬಾಣಿಗಳು ಅಲೆಮಾರಿ ಸಮುದಾಯವಾಗಿದ್ದು ಪ್ರಾಚೀನ ಕಾಲದಿಂದಲೂ ಜೀವನೋಪಾಯಕ್ಕಾಗಿ ಆಹಾರ ಧಾನ್ಯಗಳನ್ನು, ಹತ್ತಿ, ತುಪ್ಪಟ ಹಾಗೂ ಅತ್ಯವಶ್ಯಕ ಜೀವನೋಪಾಯ ಸಾಮಗ್ರಿಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಎತ್ತಿನ ಬಂಡಿಯ ಮೂಲಕ ಸಾಗಿಸುತ್ತಿದ್ದು ವ್ಯಾಪಾರಿ ಸಮುದಾಯವಾಗಿತ್ತು.

ಬ್ರಿಟಿಷರು ಉಪ್ಪಿನ ಮೇಲೆ ತೆರಿಗೆಯನ್ನು ಹೇರಿದ ಹಿನ್ನೆಲೆಯಲ್ಲಿ ಅವರ ವ್ಯಾಪಾರಕ್ಕೆ ಧಕ್ಕೆ ಉಂಟಾಗಿ ಉತ್ತರ ಭಾರತದಿಂದ ಆಂಧ್ರ ಪ್ರದೇಶದ ಮಾರ್ಗವಾಗಿ ದಕ್ಷಿಣ ಭಾರತಕ್ಕೆ ವಲಸೆ

ಬಂದರು. ಅನಂತರದಲ್ಲಿ ದಕ್ಷಿಣ ಇತರೆ ರಾಜ್ಯದ ಎಲ್ಲಾ ಭಾಗದಲ್ಲೂ ತಮ್ಮ ವ್ಯಾಪಾರವನ್ನು ಕಂಡುಕೊಂಡರು. ಹಾಗೆಯೇ ಬಳ್ಳಾರಿ ಜಿಲ್ಲೆಯಲ್ಲಿ ಅವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಹೋಸಪೇಟೆ ತಾಲ್ಲೂಕಿನಲ್ಲಿ ಬರುವ ಹಂಪಿ ಸುತ್ತಲಿನ ಪರಿಸರದಲ್ಲಿ ಲಂಬಾಣಿ ತಾಂಡಗಳು ಕಾಣಸಿಗುತ್ತವೆ. ಅವುಗಳಲ್ಲಿ ಕಮಲಾಪುರದ ಕೆರೆತಾಂಡಗಳು ಪ್ರಮುಖವಾದದು. ಇತ್ತೀಚೆಗೆ ಶಿಕ್ಷಣವನ್ನು ಪಡೆದ ಕೆಲವು ಕುಟುಂಬಗಳು ಸರ್ಕಾರಿ ಉದ್ಯೋಗವನ್ನು ಪಡೆದು ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಲ್ಲಿ ಆರ್ಥಿಕ ಸುಧಾರಣೆ ಆಗಿರುವುದನ್ನು ಕಾಣಬಹುದಾಗಿದೆ. ಉಳಿದ ನೂರಾರು ಜನರು ಕಟ್ಟಿಗೆಯನ್ನು ಸಂಗ್ರಹಿಸಿ ಮಾರಾಟ ಮಾಡುವುದು ಕೃಷಿ ಕೂಲಿ ಮಾಡುವುದು ಕಂಡುಬರುತ್ತದೆ. ಇಲ್ಲಿಸಿಗುವ ಕೂಲಿಯಿಂದ ಜೀವನ ಸಾಗಿಸಲು ಸಾಧ್ಯವಾಗದ ಕಾರಣ ಗೋವ, ಪುಣೆ, ಬೊಂಬಾಯಿ, ಬೆಂಗಳೂರಿನಂತ ನಗರಗಳಿಗೆ ವಲಸೆಹೋಗಿ ಬೇರೆ ಬೇರೆ ಕೆಲಸದಲ್ಲಿ ತೊಡಗಿಸಿಕೊಂಡು ಬದುಕುಸಾಗಿಸುತ್ತಿದ್ದಾರೆ. ಇವರು ಮೂಲತಃ ಉತ್ತರ ಭಾರತದವರೇ ಆದಕಾರಣ ಭಾಷಾ ಸಮಸ್ಯೆ ಎದುರಾಗುವುದಿಲ್ಲ.

೩.೪. ದುರಗಮುರಗ ಸಮುದಾಯ

ಈ ಹಂಪಿ ಪ್ರದೇಶವು ಸುತ್ತ ಮುತ್ತು ಗುಡ್ಡಗಾಡು ನದಿ ಬೆಟ್ಟಗಳಿಂದ ಕೂಡಿದ ಪ್ರದೇಶವಾಗಿದೆ. ಆದ್ದರಿಂದ ಅಲೆಮಾರಿಗಳಿಗೆ ನೆಲಸಲಿಕ್ಕೆ ಆಶ್ರಯ ತಾಣವಾಗಿದೆ. ಆದರಿಂದ ಈ ಸಮುದಾಯವು ಸುಮಾರು ೩೦೦-೪೦೦ ವರ್ಷಗಳ ಕಾಲ ಇಲ್ಲಿ ಜೀವನ ಸಾಗಿಸಿಕೊಂಡು ಬಂದಿದ್ದಾರೆ.

ಈ ಸಮುದಾಯವು ಮೂಲತಃ ತಮಿಳು ನಾಡಿನವರು, ಆಂಧ್ರದ ಮೂಲಕ ಕರ್ನಾಟಕಕ್ಕೆ ವಲಸೆಬಂದು ಸುಮಾರು ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿ ನೆಲೆ ನಿಂತಿವೆ. ಅದರಂತೆ ಬಳ್ಳಾರಿ ಜಿಲ್ಲೆಗೆ ಬಂದು ಹಂಪಿಯಲ್ಲಿ ನೆಲೆ ನಿಂತಿವೆ. ಕಾರಣ ಈ ಪ್ರದೇಶವು ಧಾರ್ಮಿಕವಾಗಿ ಹೆಸರು ಪಡೆದುಕೊಂಡು ಇಲ್ಲಿನ ಅನೇಕ ಅಲೆಮಾರಿ ಸಮುದಾಯಗಳಿಗೆ ಆಶ್ರಯ ತಾಣವಾಗಿದೆ. ಆದ್ದರಿಂದ ಈ ಸಮಾದಾಯವು ಕೂಡ ಈ ಪ್ರದೇಶಕ್ಕೆ ವಲಸೆಬಂದು ಬದುಕುತ್ತಿದ್ದಾರೆ. ಇಲ್ಲಿ ಇವರು ಮೂಲಕಸುಬಿನಿಂದ ಇತರೆ ಪರ್ಯಾಯ ಕಸುಬುಗಳಿಂದ ಜೀವಿಸುತ್ತಿದ್ದಾರೆ. ಪ್ರಸ್ತುತ ಈ ಸಮುದಾಯದ ಹಿರಿಯರು ಮೂಲ ಕಸುಬು ದೇವರನ್ನು ತಲೆಯಮೇಲೆ ಒತ್ತುಕೊಂಡು (ಮಹಿಳೆಯರು) ಜಾತ್ರೆ, ಸಂತೆ ವಿವಿಧ ಹಬ್ಬದ ದಿನಗಳಂದು (ಗಂಡಸರು) ಭಿಕ್ಷಾಟನೆ ಮಾಡುತ್ತಾರೆ. ಈ ಸಂದರ್ಭದಲ್ಲಿ ತನ್ನ ಮೈಯಿಗೆ ಚಾಟಿಯಿಂದ ಹೊಡೆದುಕೊಳ್ಳುತ್ತ ಕೈಯಿಗೆ ಬ್ಲೇಡಿನಿಂದ ಕುಯ್ದುಕೊಂಡು ರಕ್ತಸುರಿಸಿ ಜನರಲ್ಲಿ ಭಿಕ್ಷೆಬೇಡುವ ಪದ್ಧತಿ ಇವರಲ್ಲಿ ಕಂಡುಬರುತ್ತದೆ. ಮಹಿಳೆಯು ಡೋಲು ಬಾರಿಸುತ್ತ ದೇವತೆಯನ್ನು ಒತ್ತುಕೊಂಡಿರುತ್ತಾಳೆ. ಈ ಸಮುದಾಯದ ಮಧ್ಯ ವಯಸ್ಸಿನವರು, ಅಥವಾ ಚಿಕ್ಕ ವಯಸ್ಸಿನವರು ಇತ್ತೀಚಿನ ದಿನಗಳಲ್ಲಿ ತಮ್ಮ ಮೂಲ ಕಸುಬನ್ನು ಬಿಟ್ಟು ಪರ್ಯಾಯ ಕಸುಬುಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ.

ಉದಾ.ಪ್ಲಾಸ್ಟಿಕ್‌ಕೊಡ ವ್ಯಾರಾಟ, ಮೀನುಗಾರಿಕೆ ಮತ್ತು ಇತರ ಕಸುಬುಗಳಲ್ಲಿ ತೊಡಗಿಕೊಂಡಿರುವುದು ಕಂಡುಬರುತ್ತದೆ.

ಸಿಂಧೊಳ್ಳು ಸಮುದಾಯದವರು ಕರ್ನಾಟಕದ ಉದ್ದಗಲಕ್ಕೂ ಧಾರ್ಮಿಕ ಭಿಕ್ಷೆಮಾಡಿಕೆಂಡು ಅಲೆಮಾರಿ ಜೀವನ ನಡೆಸುವಂಥವರು. ಇತ್ತೀಚೆಗೆ ಹಲವೆಡೆ ನೆಲೆನಿಂತು ಜೀವನ ಸಾಗಿಸುತ್ತಿದ್ದಾರೆ. ಇವರು ಕರ್ನಾಟಕದ ೨೧ ಜಿಲ್ಲೆಗಳಲ್ಲಿ ಕಂಡುಬರುತ್ತಿದ್ದು ಅವರನ್ನು ಆಯಾ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ಗುರುತಿಸಲಾಗುತ್ತದೆ. ಆದರೆ, ಈ ಎಲ್ಲಾ ಹೆಸರುಗಳು ದೇವರನ್ನು ಹೊತ್ತುಕೊಂಡು ಅವರು ನಡೆಸುವ ಭಿಕ್ಷಾಟನಾ ವೃತ್ತಿಯನ್ನು ಸೂಚಿಸುವಂಥವುಗಳಾಗಿವೆ. ಇವರನ್ನು ಹೀಗೆ ಕರೆಯುವವರು. ದುರುಗಮುರಗಿ, ಬುರ್ರಬುರ್ರಚಾ, ಬುರ್ರ ಮಾರಿಯರ್ ಬುರ್ರ ಬುರ್ರ ಪೋಚಮ್ಮ, ಬುರ್ರ ಬುರ್ರ ಸುಂಕಲಮ್ಮ, ಊರಮಾರಿಯರ್ ಅಥವಾ ಉರುಮಿಯೋರು, ಬುಟ್ಟಿಕೊಗಮ್ಮ, ಕೊಗಮ್ಮನ ಆಡಿಸುವರು, ಮರಗವ್ವನ ಆಡಿಸುವವರು, ದುರುಗಮ್ಮನ ಆಡಿಸುವವರು, ಊರಮ್ಮನ ಆಡಿಸುವವರು, ಬಂಡಿಗಾಲಿನ ಪೋತರಾಜ, ಪೋತರಾಜ, ಪೋತಪ್ಪ, ಪೋತ್ಯಾ, ಪೋತರಾಜ್, ಪೆಟ್ಟಿಗೆ ಪೂಜಾರಿ, ಪೂಜಾರರು, ದ್ಯಾವರು ಪೂಜಾರರು, ಭಿಕ್ಷುಕರು ಎಂಬ ಇತ್ಯಾದಿ ಹೆಸರುಗಳಿಂದ ಕರೆಯುವುದುಂಟು.

೩.೫. ಇತರ ಅಲೆಮಾರಿ ಬುಡಕಟ್ಟು ಸಮುದಾಯಗಳು

ಹಂಪಿ ಪರಿಸರದಲ್ಲಿ ಕಂಡುಬರುವ ಇತರ ಅಲೆಮಾರಿ ಸಮುದಾಯಗಳು ಅವರದೇ ಆದ ಬದಕನ್ನು ಕಟ್ಟಿಕೊಂಡು ಬದುಕುತ್ತಿರುವುದು ಪ್ರಸ್ತುತ ಅಧ್ಯಯನದಿಂದ ಕಂಡುಬರುವಂತ ಸಮುದಾಯಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಲಾಗಿದೆ. ಅಂತಹ ಸಮುದಾಯಗಳಲ್ಲಿ ಮೇಲೆ ತಿಳಿಸಿರುವಂತೆ ವೆಂಕಟಾಪೂರದಲ್ಲಿ ಬುಡ್ಗಜಂಗಮ, ಬುಕ್ಕಸಾಗರದಲ್ಲಿ ಗೊಸಂಗಿ, ಕಮಲಾಪುರದಲ್ಲಿ ಮೋಡಿಕಾರರು ಬುಡ್ಗಜಂಗಮರು ಹೆಳವರು, ಹಂಪಿಯಲ್ಲಿ ಸಿಳ್ಳೇಕ್ಯಾತರು, ಕಂಪ್ಲಿಯಲ್ಲಿ ಸುಡಗಾಡುಸಿದ್ದರು, ಮತ್ತು ಇತರ ಅಲೆಮಾರಿ ಸಮುದಾಯಗಳು ಇಲ್ಲಿ ನೆಲೆನಿಂತುಕೊಂಡಿವೆ. ಇವರು ಸುಮಾರು ೩೦೦ ರಿಂದ ೪೦೦ ವರ್ಷಗಳ ಕಾಲ ಈ ಪ್ರದೇಶದಲ್ಲಿ ವಾಸಿಸಿದ್ದಾರೆ ಎಂದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಇವರು ಮೂಲತಃ ಬೇರೆ ನೆರೆರಾಜ್ಯಗಳಿಂದ ವಲಸೆಬಂದವರಾಗಿದ್ದಾರೆ. ಬಂದು ಇಲ್ಲಿ ಅವರವರ ಮೂಲ ಕಸುಬಿನಿಂದ ಜೀವಿಸುತ್ತಿದ್ದಾರೆ. ಅದರ ಜೊತೆಗೆ ಇತ್ತೀಚಿನ ದಿನಗಳಲ್ಲಿ ಪೂರಕವಾದ ಅಥವಾ ಪರ್ಯಾಯ ಕಸುಬುಗಳಿಂದ ಜೀವನ ಸಾಗಿಸುತ್ತಿದ್ದಾರೆ. ಮೂಲ ಕೆಲವು ಅಲೆಮಾರಿ ಸಮುದಾಯಗಳ ಕಸುಬುಗಳಾದ ಬುಡ್ಗಜಂಗಮರು ಭವಿಷವನ್ನು ಹೇಳುವುದು ಗಿಳಿಶಾಸ್ತ್ರ, ಸುಡುಗಾಡುಸಿದ್ದರು ಮಾಟಮಂತ್ರ ಮಾಡುವುದು, ದುರುಗ ಮುರುಗ ಸಮುದಾಯ ಭಿಕ್ಷಾಟನೆ ಮಾಡುವುದು, ಗೋಸಂಗಿ ಬೇಟೆಯನ್ನು ಆಡುವುದು ಅನೇಕ ಅಲೆಮಾರಿ ಸಮುದಾಯ ಅವರದೇ ಆದ ವೃತ್ತಿ ಪದ್ಧತಿಯಲ್ಲಿ

ಬದುಕುತ್ತಿದ್ದಾರೆ. ಆದರೆ ಇಂದು ಈ ಎಲ್ಲಾ ಅಲೆಮಾರಿ ಸಮುದಾಯಗಳು ಈ ಪರಿಸರದಲ್ಲಿ ಆಧುನಿಕ ವೃತ್ತಿಗೆ ಒಳಗಾಗಿ ಅನೇಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡು ಬದುಕುತ್ತಿದ್ದಾರೆ. ಉದಾ.ಇಲ್ಲಿನ ಅಲೆಮಾರಿ ಸಮುದಾಯಗಳು ಕೂಲಿ ಕೆಲಸ, ಸಣ್ಣ ಪುಟ್ಟ ವ್ಯಾಪಾರಿಗಳಾಗಿ, ಪ್ಲಾಸ್ಟಿಕ್‌ಕೊಡ ಹಾಗೂ ಇತರೆ ಪ್ಲಾಸ್ಟಿಕ್ ಸಾಮಗ್ರಿ ಪ್ಯಾಪಾರದಲ್ಲಿ ತೊಡಗಿದ್ದಾರೆ.

ಬುಡ್ಗಜಂಗಮ, ಚೆನ್ನದಾಸರ, ಶಿಳ್ಳೆಕ್ಯಾತ, ಗೋಸಂಗಿ, ಸುಡಗಾಡುಸಿದ್ಧರು, ಹೆಳವರು, ವೇಷಗಾರರು, ಹಾವಾಡಿಗರು ಅಥವಾ ಮೋಡಿಕಾರರು, ಮುಂತಾದ ಅಲೆಮಾರಿ ಸಮುದಾಯಗಳಿಗೆ ಅವರದೇ ಆದ ಭೂಮಿ, ಊರು, ಕೇರಿ ಎಂಬುದು ಇಲ್ಲ ಎಷ್ಟೋ ಅಲೆಮಾರಿ ಸಮುದಾಯಗಳಿಗೆ ನಿರ್ದಿಷ್ಟವಾದ ಹೆಸರೂ ಇಲ್ಲ. ಒಂದೇ ಅಲೆಮಾರಿ ಸಮುದಾಯಕ್ಕೆ ಹಲವಾರು ಹೆಸರುಗಳಿಂದ ಕರೆಯುವುದು ಕಂಡುಬರುತ್ತದೆ. ಈ ಸಮುದಾಯಗಳು ಹಂಪಿ ಪರಿಸರದ ಸುತ್ತಲಿನ ಪ್ರದೇಶಗಳಲ್ಲಿ ಅಥವಾ ಕೆಲವು ಹಳ್ಳಿಗಳಲ್ಲಿ ನೆಲೆನಿಂತಿರುವುದು ಕಂಡುಬರುತ್ತದೆ. ಈ ಕೆಳಗಿನಂತೆ ಕೆಲವು ಅಲೆಮಾರಿ ಸಮುದಾಯಗಳನ್ನು ವಿವರಿಸಲಾಗಿದೆ.

ಬುಡ್ಗಜಂಗಮರು : ಆದಿಯಲ್ಲಿ ಆಂಧ್ರಪ್ರದೇಶದ ಶ್ರೀಶೈಲ ಅರಣ್ಯದ ಭಾಗಗಳಲ್ಲಿ ಬೇಟೆಯನ್ನೇ ಪ್ರಧಾನವಾಗಿ ಇಟ್ಟುಕೊಂಡು ನೆಲೆಸಿರುವ ಬುಡ್ಗಜಂಗಮರು ತಂದ ಮಾಂಸಾಹಾರದ ಸ್ವಲ್ಪ ಭಾಗವನ್ನೂ ಶಿವನಿಗೆ ಭಕ್ತಿಯಿಂದ ಸಮರ್ಪಿಸಿ ತಾವು ಊಟ ಮಾಡುವುದು ಸಂಪ್ರದಾಯ ಇತ್ತು ಎಂದು ತಿಳಿದುಬರುತ್ತದೆ. ಆದಕಾರಣ ಅವರು ಆಹಾರದ ಸಲುವಾಗಿ ಬೇಟೆಯನ್ನು ಆಧಾರವಾಗಿಟ್ಟುಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದಾಗಿತ್ತು. ಅಂದಿನಿಂದ ಇಂದಿನವರೆಗೆ ಅದನ್ನೇ ಮುಂದುವರಿಸಿದ್ದಾರೆ.

ಹಗಲುವೇಷಗಾರರು

ಇವರು ಹಗಲಿನ ವೇಳೆಯಲ್ಲಿ ಪುರುಷರು ರಾಮಾಯಣ, ಮಹಾಭಾರತ, ಪುರಾಣದ ಕಥೆಗಳು ಇತರ ಕೆಲವು ಆಯಾಪ್ರದೇಶಕ್ಕೆ ತಕ್ಕಂತೆ, ಆಯಾ ಕಾಲಮಾನಕ್ಕೆ ಅನುಗುಣವಾಗಿ, ವೇಷಗಳನ್ನು ಧರಿಸಿ ಮತ್ತು ಸಾಮಾಜಿಕ ವೇಷಗಳನ್ನು ಹಾಕಿಕೊಂಡು ಊರಿನ ಮಧ್ಯ ಮತ್ತು ಊರಿನ ಪ್ರತಿಯೊಂದು ಮನೆಯ ಮುಂದೆ ಹೋಗಿ ದಿನಕ್ಕೊಂದು ವೇಷ ಹಾಕಿ ಬೀದಿನಾಟಕದ ಮುಖಾಂತರ ಜನರಿಗೆ ಮನೋರಂಜನೆ ನೀಡುವರು. ಕೊನೆಯ ದಿನದಲ್ಲಿ ಕೂಡ ದಾಸರವೇಷ ಅಡಗದಾಲ (ಪಟ್ಟಿ ಎತ್ತುವ) ವೇಷ ಹಾಕಿ ಊರ ಗೌಡ, ದೇಸಾಯಿ ಇಲ್ಲವೆ ಪ್ರಮುಖರ ಮನೆಗೆ ತೆರಳಿ ಶರಣ ತತ್ವಪದಗಳನ್ನು ಹಾಡಿ ಕಾಡಿ ಬೇಡಿ ರೊಕ್ಕ ರೂಪಾಯಿ ಧವಸ ಧಾನ್ಯ, ಬಟ್ಟೆ, ದನ, ಕುರಿ, ಕೋಳಿಗಳನ್ನು ಧಾನವಾಗಿ ಪಡೆದು ಭಿಕ್ಷಾಟನೆ ಮಾಡುತ್ತ ಜೀವನ ನಡೆಸುತ್ತಿದ್ದರು. ಇತ್ತೀಚೆಗೆ ಹಗಲುವೇಷ ಹಾಕಿ ಒಬ್ಬೊಬ್ಬರಾಗಿ ಭಿಕ್ಷಾಟನೆ

ಮಾಡುತ್ತಿದ್ದಾರೆ. ಹನುಮಂತನ ವೇಷಹಾಕಿ ಪಟ್ಟಣಗಳಲ್ಲಿ ರಸ್ತೆ ಬಸ್ ನಿಲ್ದಾಣಗಳ ರೈಲ್ವೆ ನಿಲ್ದಾಣದಲ್ಲಿ ಭಿಕ್ಷಾಟನೆ ಮಾಡುತ್ತಿದ್ದರು. ಆದ್ದರಿಂದ ಹಂಪಿ ಪರಿಸರದಲ್ಲಿ ನೆಲೆಸಿರುವುದು ಕಾರಣ ಅಥವಾ ಕ್ಷೇತ್ರವು ಅನೇಕ ರಾಜ್ಯಗಳಿಂದ ದೇಶ-ವಿದೇಶಗಳಿಂದ ಬರುವಂತ ಒಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ, ಕೇಂದ್ರವಾಗಿರುವುದರಿಂದ ಅತ್ತಿ ಹೆಚ್ಚು ಜನಸಂಪರ್ಕ ಇಲ್ಲಿ ಪ್ರತಿದಿನ ಜನಸಾಗರ ಹರಿಯುತ್ತದೆ. ಇವರಿಗೆ ಬದುಕಲಿಕ್ಕೆ ಪೂರಕವಾದ ಆಸ್ತಿ ಎಂದರೆ ಜನಗಳು ಎಂದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಆದರೆ ಆಧುನಿಕ ಯುಗದಿಂದ ಮತ್ತು ಪ್ರಸ್ತುತ ಸಂದರ್ಭದಲ್ಲಿ ಟಿವಿಗಳಿಂದ ಮಾಧ್ಯಮಗಳಿಂದ ಚಲನಚಿತ್ರಗಳಿಂದ ಇವರ ಕಸುಬುಗೆ ತೊಡಕುಂಟಾಗಿ ಪರ್ಯಾಯ ಕಸುಬುಗಳು ಅನಿವಾರ್ಯವಾಗಿದೆ. ಆದ್ದರಿಂದ ಪ್ರಸ್ತುತವಾಗಿ ಅತಂತರ ಸ್ಥಿತಿಗೆ ಒಳಗಾಗಿ ಬದುಕು ನೋವಿನ ಅಲೆಯಲ್ಲಿ ತೇಲಾಡುತ್ತಿವೆ. ಈ ಸಮುದಾಯಗಳಿಗೆ ಸರ್ಕಾರ ಕೂಡ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಇವರಿಗೆ ಯಾವುದೇ ಭೂಮಿ, ಸ್ವಂತ ಜಾಗ ನೆಲೆ ಮೂಲಭೂತ ಸೌಕರ್ಯಗಳಿಂದ ವಂಚಿತದಿಂದ ತೊಳಲಾಡುತ್ತ ಬದುಕುತ್ತಿರುವುದು ಇಂದಿನ ಕಾಲದ ದುರಂತದ ಸಂಗಾತಿ ಎಂದು ಹೇಳಬಹುದು. ಆದರಿಂದ ಇವರು ಕಾಲಕ್ಕನುಗುಣವಾಗಿ ಜೀವನ ಶೈಲಿ ಬದಲಾವಣೆಗಳು ಕಂಡುಕೊಳ್ಳುತ್ತ ಈ ಪ್ರದೇಶದಲ್ಲಿ ನೆಲೆ ನಿಂತಿರುವುದು ಕಂಡುಬರುತ್ತದೆ.

ಸಿಳ್ಳೇಕ್ಯಾತ

ಜನಪದ ಸಂಸ್ಕೃತಿಯ ಜೀವನಾಡಿ ಜನಪದ ಕಲೆ ಅಂತಹ ಕಲೆಗಳನ್ನು ಗರ್ಭೀಕರಿಸಿಕೊಂಡು ಮುನ್ನಡೆದ ನಾಡು ಕನ್ನಡನಾಡು. ಇಲ್ಲಿ ಬದುಕಿದ ಜನಪದ ಸಮುದಾಯಗಳೂ ಅನೇಕ, ಅವು ಅತೀ ಪ್ರಾಚೀನ ಕಾಲದಿಂದಲೂ ವಿಶಿಷ್ಟ ರೀತಿಯಲ್ಲಿ ತಮ್ಮ ಬದುಕಿನೊಂದಿಗೆ ಹಲವಾರು ಕಲೆಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದುಂಟು. ಕೆಲವು ಕಲೆಗಳು ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದಿದ್ದರೆ ಇನ್ನು ಕೆಲವು ಲೌಕಿಕ ವೃತ್ತಿಗಳ ಹಿನ್ನೆಲೆಯಲ್ಲಿ ಬೆಳೆದು ಬಂದಿರುವುದು ಕಂಡುಬರುತ್ತದೆ. ಅಂತಹ ಸಮುದಾಯಗಳಲ್ಲಿ ವೇಷಗಾರರು, ಬುರ್‍ರಕಥೆಯವರು ಸಿದ್ಧರು, ಹೆಳವರು, ಮೋಡಿಕಾರರು, ಬುಡಬುಡಿಕೆಯವರು, ಕೊರವಂಜಿಯವರು ದೊಂಬರು ಇತ್ಯಾದಿ ಸಮುದಾಯಗಳು ಜೀವನ ನಿರ್ವಹಣೆಗಾಗಿ ಲೌಕಿಕ ವೃತ್ತಿಗಳ ಹಿನ್ನೆಲೆಯಲ್ಲಿ ಮೂಡಿಬಂದ ಜನಪದರ ಬದುಕು ಹಲವು ವಿಧ. ಇವರಂತೆಯೇ ಸಿಳ್ಳೇಕ್ಯಾತ ಸಮುದಾಯವು ಒಂದಾಗಿದೆ.

ಇವರು ತಮ್ಮ ಪರಂಪರಾಗತವಾದ ಕಲೆಯನ್ನು ಅವಲಂಬಿಸಿ ಬದುಕಿದವರು. ಹಾಗೆಯೇ ಅದನ್ನು ಪಿತ್ರಾರ್ಜಿತ ಆಸ್ತಿಯಂತೆ ತಲೆ ತಲಾಂತರದಿಂದ ಕಾಯ್ದುಕೊಂಡು ಬಂದಿದ್ದಾರೆ.

ಇಂದು ಅತಿವೇಗದ ಆಧುನಿಕ ನಾಗರಿಕತೆಯ ಬಿರುಗಾಳಿಯಂತೆ ಇರುವ ಪ್ರಸಾರ ಮಾಧ್ಯಮಗಳು, ಸಂಪರ್ಕ ಮಾಧ್ಯಮಗಳು, ವಿದೇಶಿಯರ ಸಂಪರ್ಕ ಪ್ರಭಾವ, ನಗರೀಕರಣ, ಜಾಗತೀಕರಣ, ಕೈಗಾರೀಕರಣ ವಲಸೆ ಹೋಗುವಿಕೆ, ದೈನಂದಿನ ಬದುಕಿನಲ್ಲಾದ ಪಲ್ಲಾಟ,

ಅತಿ ವೇಗದ ವೈಜ್ಞಾನಿಕ ಬೆಳವಣಿಗೆ, ಯಾಂತ್ರಿಕ ಬದುಕಿನ ಸಾಮಾಜಿಕ ರಚನೆಯಲ್ಲಾದ ಬದಲಾವಣೆವಲ್ಲದೆ ಒಟ್ಟು ಭಾವನೆ ವಿಚಾರ ದೃಷ್ಟಿಯಲ್ಲಾದ ಬದಲಾವಣೆ ಎಲ್ಲಾ ಅಂಶಗಳು ನಮ್ಮ ಜನ ಸಮುದಾಯ ಸಂಸ್ಕೃತಿ ಸಮಾಜಗಳ ಮೇಲೆ ಗಾಢ ಪರಿಣಾಮ ಬೀರಿರುವುದುಂಟು. ಜನಪದ ಕಲೆ ಅವುಗಳನ್ನು ಆಶ್ರಯಿಸಿ ಬದುಕಿದ ಸಮುದಾಯಗಳು ತಮ್ಮ ಮೂಲ ಬುಡಕಟ್ಟು ಸಂಸ್ಕೃತಿಯನ್ನು ಅದರ ಆಂತರ್ಯವನ್ನು ಕಳೆದುಕೊಳ್ಳುವ ಹಂತಕ್ಕೆ ತಲುಪಿವೆ. ಈ ಆಧುನಿಕತೆಯ ಅಲೆಗೆ ಅಥವಾ ಭಷ್ಟಾಚಾರದ ರಾಜಕೀಯ ಅಲೆಗೆ ಸಿಕ್ಕಿ ಘಾಸಿಯಾಗಿ ಈ ಅಲೆಮಾರಿ ಸಮುದಾಯಗಳು ತಮ್ಮ ಮೂಲ ಬದುಕಿನ ಸ್ವರೂಪವನ್ನು ಕಳೆದುಕೊಳ್ಳುತ್ತಿರುವುದು ಅನಿವಾರ್ಯವೇ ಸರಿ. ಈ ದೃಷ್ಟಿಯಿಂದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಹಾಗೂ ಮಾನವಿಕ ಬದುಕಿನಲ್ಲಿ ಸಮಾನತೆ ತರುವ ನಿಟ್ಟಿನಲ್ಲಿ ಇವುಗಳ ಮೂಲ ಸ್ವರೂಪವನ್ನು ಅಧ್ಯಯನಿಸಿ ಬುಡಕಟ್ಟು ಸಮುದಾಯದ ಚಾರಿತ್ರಿಕ ಪ್ರಜ್ಞೆಯನ್ನು ಆಕರಗೊಳಿಸಿವುದು ಒಂದು ಮಹತ್ವದ ಧ್ಯೇಯವಾಗಿದೆ.[3]

ಈ ಸಮುದಾಯವು ಹಂಪಿ ಪರಿಸರದಲ್ಲಿ ಅಂದಿನಿಂದ ಇಂದಿನವರೆಗೂ ಬದುಕಿನ ಹೊಸ ಹೊಸ ಆಯಾಮಗಳನ್ನು ತೆರೆದು ತೋರಿಸುತ್ತದೆ. ಸಮಾಜದಲ್ಲಿ ಈ ಸಮುದಾಯಕ್ಕೆ ಸಿಗಬೇಕಾದ ಸ್ಥಾನಮಾನ ಹಾಗೂ ಅದರ ಮಹತ್ವದ ಪಾತ್ರವನ್ನು ಗುರುತಿಸಲು ಹಂಪಿಯ ಸುತ್ತಮುತ್ತಲಿನ ಪರಿಸರದಲ್ಲಿ ನೆಲೆ ನಿಂತಿರುವ ಕುಟುಂಬಗಳನ್ನು ಪರಿಶೀಲಿಸಿದರೆ ಸಾಕು ಅವರ ಸಾಮಾಜಿಕ ಸ್ಥಿತಿಗತಿ ಬಗ್ಗೆ ತಿಳಿದುಬರುತ್ತದೆ. ಇಂತ ಒಂದು ಪರಿಸ್ಥಿತಿಯನ್ನು ತಿಳಿಯಲು ಕ್ಷೇತ್ರ ಕಾರ್ಯ ಪ್ರಮುಖವಾಗುತ್ತದೆ. ಈ ಸಮುದಾಯಗಳು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ವಿಭಿನ್ನ ಪರಂಪರೆಗಳ ಸಮುಚ್ಚಯಗಳಾಗಿವೆ. ಆದರೆ ಪ್ರಸ್ತುತ ಸಂದರ್ಭದ ಪರಿಸ್ಥಿತಿಯಲ್ಲಿ ಈ ಪ್ರದೇಶದ ಅನೇಕ ಅಲೆಮಾರಿಗಳು ಹಾಗೂ ಸಿಳ್ಳೇಕ್ಯಾತ ಸಮುದಾಯ ಸಾಮಾಜಿಕ ಸಮಸ್ಯೆಗಳಿಗೆ ಸಿಲುಕಿ ಸ್ಥಳೀಯ ಪರ್ಯಾಯ ಕಸುಬುಗಳನ್ನು ಮೈಗೂಡಿಸಿಕೊಂಡು ಅಲ್ಲಲ್ಲಿ ಬದುಕುತ್ತಿರುವುದು ಕ್ಷೇತ್ರ ಕಾರ್ಯದಿಂದ ತಿಳಿದುಬರುತ್ತದೆ.

ಚೆನ್ನದಾಸರು

ಪರಿಶಿಷ್ಟ ಜಾತಿಗೆ ಸೇರಿರುವ ಚೆನ್ನದಾಸರ ಸಮುದಾಯವು ಅಲೆಮಾರಿ, ಅರೆಅಲೆಮಾರಿ ಸಮುದಾಯಗಳಲ್ಲೇ ತೀರಾ ನಿರ್ಲಕ್ಷಕ್ಕೆ ಒಳಗಾಗಿರುವ ಒಂದು ಪ್ರಮುಖ ಸಮುದಾಯವಾಗಿದೆ. ಇವರ ಮೂಲ ಆಂಧ್ರದವರು ಎಂದು ಕೆಲವು ಸಂಶೋಧನಕಾರರಿಂದ ತಿಳಿದುಬರುತ್ತದೆ ಹಾಗೂ ಅಧ್ಯಯನಗಳಿಂದ ಕಂಡುಬರುತ್ತದೆ. ಇವರು ಭಿಕ್ಷೆ ಬೇಡುತ್ತ ಕರ್ನಾಟಕಕ್ಕೆ ವಲಸೆ ಬಂದು ನೆಲೆನಿಂತಿವೆ. ಈ ಸಮುದಾಯವು ಪ್ರಾದೇಶಿಕವಾಗಿ ಕರ್ನಾಟಕದಲ್ಲಿ ಬೇರೆ, ಬೇರೆ ಉಪನಾಮಗಳಿದ್ದರೂ, ಈ ಸಮುದಾಯ ತನ್ನನ್ನು ಚೆನ್ನದಾಸರು ಎಂದೇ ಗುರುತಿಸಿಕೊಂಡಿದೆ. ಇವರಿಗೆ ಪರ್ಯಾಯ ನಾಮಗಳಿಂದ ದಂಡಿಗೆ ದಾಸರ, ಜಂಬೂದಾಸರ, ಚಕ್ರವಾಧ್ಯದಾಸರ,

ಹರಿದಾಸರ, ಶಂಖದಾಸರ, ಗೋಪಾಳಬುಡ್ಡಿ ದಾಸರ, ನಾಮದ ದಾಸರ, ಹೊಲೆಯ ದಾಸರ/ದಾಸರಿ, ಮಾಲದಾಸರ/ದಾಸರಿ, ಆಟದ ದಾಸರಿ, ನಾಮದ ದಾಸರ/ದಾಸರಿ ಇತ್ಯಾದಿ ಇದ್ದರೂ 'ಚೆನ್ನದಾಸರ' ಎಂದೇ ಕರ್ನಾಟಕದಾದ್ಯಂತ ಈ ಸಮುದಾಯ ತನ್ನನ್ನು ಗುರುತಿಸಿಕೊಳ್ಳುತ್ತ ಬಂದಿದೆ. ಇವರು ಊರು ಹೊರಗೆ ಬಯಲು ಪ್ರದೇಶ ನೀರಿರುವಂತ ಸ್ಥಳವನ್ನು ಕುಟುಂಬದ ಹಿರಿಯರ ಹೇಳಿಕೆಯಂತೆ ನೆಲೆನಿಲ್ಲುತ್ತದೆ. ಆದ್ದರಿಂದ ಹಂಪಿಯು ಬಯಲಾದ ಹಾಗೂ ಕೆರೆ, ನದಿಗಳಿಂದ ಕೂಡಿದ ಪ್ರದೇಶವಾಗಿದ್ದರಿಂದ ಇಲ್ಲಿ ಚೆನ್ನದಾಸರು ನೆಲೆಸಿರುವುದು ಎಂದು ಕ್ಷೇತ್ರ ಕಾರ್ಯದಿಂದ ತಿಳಿದುಬರುತ್ತದೆ. ಇವರ ಕಸುಬು ದೇವರ ಹೆಸರನ್ನು ಹೇಳಿಕೊಂಡು ಊರೂರು, ಕೇರಿ-ಕೇರಿ, ಮನೆ-ಮನೆಗಳಿಗೆ ತಿರುಗುತ್ತ, ಭಿಕ್ಷೆ ಬೇಡುವ ಸಂಪ್ರದಾಯ ಕಂಡುಬರುತ್ತದೆ. ಆದರೂ ಕೆಲವು ಜನರು ಪರ್ಯಾಯ ಕಸುಬುಗಳಿಂದ ಜೀವನ ಸಾಗಿಸುತ್ತಿದ್ದು ಕೂಡ ತಿಳಿದುಬರುತ್ತದೆ. ಈ ದಾಸರ ಸಮುದಾಯಗಳಲ್ಲಿ ಇನ್ನೂ ಕೆಲವು ಪಂಗಡಗಳು ಅವುಗಳು ಕೂಡ ತನ್ನದೆಯಾದ ನೆಲೆಯಲ್ಲಿ ಬದುಕನ್ನು ಹಾಗೂ ಜೀವನ ರೂಪಿಸಿಕೊಂಡು ಅಂದಿನಿಂದ ಇಂದಿನವರೆಗೂ ಈ ಪ್ರದೇಶದಲ್ಲಿ ನೆಲೆನಿಂತಿರುವುದು ಕೆಲವು ಅಧ್ಯಯನಗಳಿಂದ ತಿಳಿದುಬರುತ್ತದೆ. ದಾಸರು ಮುಖ್ಯವಾದ ಕಸುಬು ಶಂಖ, ಹಂಟೆ, ಗಂಟೆ, ಜಾಗಟೆ ಮೊದಲಾದವನ್ನು ನುಡಿಸಿ ಮನೆಮನೆಗೆ ಹೋಗಿ ಭಿಕ್ಷೆಯನ್ನು ಬೇಡುವುದಾಗಿದೆ. ದಾಸರಲ್ಲಿ ಕೆಲವರು ದನಗಳ ವ್ಯಾಪಾರವನ್ನು ಮಾಡುವರು. ಕೆಲವರು ಗಿಡ ಮೂಲಿಕೆ ಔಷಧಗಳನ್ನು ಕೊಡುವರು. ಹುಲ್ಲಿನಿಂದ ಚಾಪೆ, ಕೋಡುಗಳಿಂದ ಹಣಿಗೆ ಮೊದಲಾದವುಗಳನ್ನು ಮಾಡಿ ಮಾರುವುದುಂಟು. ಕೆಲವರು ಇತ್ತೀಚೆಗೆ ಒಕ್ಕಲುತನಕ್ಕೂ ತೊಡಗಿರುವುದು ಕಂಡುಬರುತ್ತದೆ. ದಾಸರಾಟವನ್ನು ಮಾಡುವುದು, ಬಗರೀ ಆಟ, ಜಾದೂ ಆಟಗಳನ್ನು ಮಾಡುವರು. ತುಟಿಯ ಮೇಲೆ ಮೂಗಿನ ಮೇಲೆ ಬಗರೀ ಆಡಿಸುವ ಅವರ ಹವ್ಯಾಸ ಸೋಜಿಗವನ್ನುಂಟು ಮಾಡುತ್ತದೆ. ದಾಸರ ಹೆಣ್ಣು ಮಕ್ಕಳು ಕೂಲಿ ಮಾಡುವರು. ಕೆಲವರು ಕೌದಿಯನ್ನು ಹೊಲಿಯುವರು. ಕೆಲವರು ಆಗಾಗ ಬರುವ ಆಮಂತ್ರಣಗಳನ್ನು ಸ್ವೀಕರಿಸಿ ಆಟಗಳಲ್ಲಿ ಪಾತ್ರವಹಿಸಿ ಬರುವರು ಎಂದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

ಅಡಿ ಟಿಪ್ಪಣಿಗಳು

೧. ಕುಮುದಾ ಬಿ., ಸುಶೀಲಪ್ಪ ಹಕ್ಕಿ ಪಿಕ್ಕಿ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೬ ಪ್ರಸ್ತಾವನೆ -ix

೨. ಅದೇ ಪು.-xxxii

* * *

ಅಧ್ಯಾಯ ೪

ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಾನಮಾನ

೪.೧. ಸಾಮಾಜಿಕ

೪.೨. ಆರ್ಥಿಕ

೪.೩. ಶೈಕ್ಷಣಿಕ

೪.೪. ರಾಜಕೀಯ

೪.೫. ಧಾರ್ಮಿಕ

೪.೬. ಔದ್ಯೋಗಿಕ (ಗಣಿಗಾರಿಕೆ)

ಇಂದು ನಮ್ಮ ಭಾರತ ದೇಶದಲ್ಲಿ ಕೋಟ್ಯಾಂತರ ಜನರು ತಮ್ಮ ಉಪಜೀವನಕ್ಕಾಗಿ ಪರಿದಾಡುತ್ತಿದ್ದಾರೆ. ಪ್ರತಿಯೊಂದು ಸಮುದಾಯದ ಜನವರ್ಗಗಳ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ, ಧಾರ್ಮಿಕ ಇತರ ಅಂಶಗಳು ಗಮನಿಸಿದಾಗ ಅವರ ಬದುಕಿನ ಸ್ಥಾನಮಾನ ತಿಳಿಯುತ್ತದೆ. ಇವು ಆಯಾ ಕಾಲಮಾನಕ್ಕೆ ತಕ್ಕಂತೆ ಬದಲಾವಣೆಗೆ ಒಳಗಾಗುತ್ತಾ ಬಂದಿವೆ. ಇಂತಹ ಒಂದು ಅಂಶಗಳನ್ನು ಗಮನಿಸಿದಾಗ ಈ ದೇಶದ ಬುಡಕಟ್ಟು, ಅಲೆಮಾರಿ ಅರೆ ಅಲೆಮಾರಿ ಸಮುದಾಯಗಳ ಬದುಕು ಕೂಡ ಯಾವ ಕಾಲಕ್ಕೆ ಯಾವ ರೀತಿಯಲ್ಲಿ ಬದುಕನ್ನು ಕಟ್ಟಿಕೊಂಡಿವೆ. ಸಾಮಾಜಿಕ ಸ್ಥಾನಮಾನ ಹೇಗೆ ಇದ್ದವು? ಎಂಬುದು ಗಮನಿಸಿದ್ದೇ ಆದರೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯಲ್ಲಿ ನೆಲೆಸಿರುವ ಬುಡಕಟ್ಟು ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಸ್ಥಿತ್ಯಂತರವನ್ನು ಗಮನಿಸುವ ಅಗತ್ಯವಿದೆ. ಈ ಬುಡಕಟ್ಟುಗಳು ಶತ ಶತಮಾನಗಳಿಂದಲೂ ತಮ್ಮ ಸಾಮಾಜಿಕ ಸ್ಥಾನಮಾನಗಳು ಹಾಗೂ ಅವರ ಅನನ್ಯತೆಯನ್ನು ಉಳಿಸಿಕೊಂಡು ನಾಗರಿಕ ಸಮಾಜದಿಂದ ತಮ್ಮತನವನ್ನು ಕಾಪಾಡಿಕೊಂಡು ಬಂದಿರುವ ನಮ್ಮ ಪ್ರಾಚೀನತೆಯ ಕುರುಹುಗಳಾಗಿವೆ. ಇಂತಹ ಒಂದು ಸಾಮಾಜಿಕ ಸ್ಥಾನಮಾನವನ್ನು ಹರಿಯುವುದಾದರೆ ಈ ಪರಿಸರದ ಬುಡಕಟ್ಟುಗಳಾದ, ಬೇಡ, ದುರುಗ ಮುರುಗ, ಲಂಬಾಣಿ ಹಕ್ಕಿಪಿಕ್ಕಿ ಇತರ ಅಲೆಮಾರಿ ಸಮುದಾಯಗಳ ಪ್ರಸ್ತುತ ಜೀವನಶೈಲಿ ಹಾಗೂ ಸಾಮಾಜಿಕ ಸ್ಥಿತಿಗತಿ, ಆರ್ಥಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಔದ್ಯೋಗಿಕ, ಇತರ ಅಂಶಗಳು ಪ್ರಮುಖ ಈ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಇವು ಒಂದೊಂದು ಬುಡಕಟ್ಟು ಸಮುದಾಯಗಳು, ಇತರ ಅಲೆಮಾರಿ ಸಮುದಾಯಗಳ ಸಾಮಾಜಿಕ ಸ್ಥಾನಮಾನದ ಮೇಲಿನ ಅಂಶಗಳನ್ನು ಸಂಕ್ಷಿಪ್ತವಾಗಿ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ತಿಳಿಸಲು ಪ್ರಯತ್ನಿಸಲಾಗಿದೆ.

೪.೧. ಸಾಮಾಜಿಕ

''ಮಾನವ ಜಾತಿಯು ಸಾವಿರಾರು ವರ್ಷಗಳು ಬಾಳಿಕೊಂಡು ಬರುತ್ತಿರುವುದು ಒಂದು ಅನುಭವ. ಆಲೋಚನಾ ಫಲ, ನಂಬಿಕೆಗಳು, ನಡವಳಿಕೆಗಳು, ಇವುಗಳನ್ನೇ ನಾವು ಸಂಸ್ಕೃತಿಯ

ಮೂಲ ಅಂಶವೆಂದು ಪರಿಗಣಿಸಬಹುದಾಗಿದೆ. ಇಲ್ಲಿ ಸಂಸ್ಕೃತಿ ಎಂಬ ಪದವು ಕೇವಲ ಮಾತಿಗೆ ನಿಲುಕಿದೆ. ಜನರು ಅನುಭವಿಸುವ, ಆಚರಿಸುವ ರೀತಿ ನೀತಿಗಳಿಂದ ಹಾಗೂ ಅದರಿಂದ ಪಡೆಯುವ ಅನುಭವಕ್ಕೆ ಕಂಡುಬರುವ ವಿಷಯ ಎಂದು ಹೇಳಬಹುದು. ಈ ಸಂಸ್ಕೃತಿಯು ಒಂದು ದಿನಕ್ಕಾಗಿಯೇ ವ್ಯಕ್ತಿಗಾಗಲಿ ಅಥವಾ ಸಮಾಜಕ್ಕಾಗಲಿ ಬರತಕ್ಕದಲ್ಲ. ಗದ್ದೆಯಲ್ಲಿ ನೆಟ್ಟು ಕಬ್ಬಿನ ತುಂಡು ರುಚಿಕರವಾದ ಕಬ್ಬಿನ ಬೆಲ್ಲವನ್ನು ನೀಡಲು ಹಲವಾರು ದಿನಗಳ ಕಾಲಾವಕಾಶ ಬೇಕು ಅದೇ ರೀತಿಯಲ್ಲಿ ಜನತೆಯ ಸಾವಿರಾರು ವರ್ಷಗಳ ನಡವಳಿಕೆ, ತಿಳುವಳಿಕೆಗಳ ಫಲವಾಗಿಯೇ ಸಮಾಜಕ್ಕೆ ಕೂಡಿಬರುವ ಸಂಸ್ಕಾರವನ್ನು ನಾವು ಸಂಸ್ಕೃತಿ ಎಂದು ಕರೆದಿರುವುದು. ಯಾವುದೇ ಸಮಾಜವಿರಲಿ ಅದಕ್ಕೆ ತನ್ನದೇ ಆದ ಸಂಸ್ಕೃತಿ ಇದ್ದೇ ಇರುತ್ತದೆ. ಸಂಸ್ಕೃತಿ ಎಂಬುವುದು ಒಂದು ರೀತಿಯಲ್ಲಿ ಸಮಾಜಕ್ಕೆ ಸ್ಫೂರ್ತಿಯನ್ನು ಕೊಡುವಂತದ್ದು ಎನ್ನಬಹುದು. ಪ್ರಾಚೀನ ಕಾಲದಿಂದಲೂ ನಮ್ಮ ಇತಿಹಾಸವನ್ನು ಗಮನಿಸಿದರೆ ಭಾರತದಲ್ಲಿ ವಾಸಿಸಿಕೊಂಡು ಬಂದಿರುವ ಜನಜೀವನದ ಸ್ವರೂಪಕ್ಕೆ ಧರ್ಮವೇ ಪ್ರಬಲ ಶಕ್ತಿಯಾಗಿ ಅಂತಿಮ ಹಂತದಲ್ಲಿ ರೂಪಗೊಂಡಿತ್ತೆನ್ನಬಹುದು. ಇದರಿಂದಾಗಿ ಇಂದಿಗೂ ಜೀವನದ ಎಲ್ಲಾ ರಂಗಗಳಲ್ಲಿಯೂ ಧರ್ಮವೇ ಹಾಸುಹೊಕ್ಕಾಗಿ ಪರಿಣಮಿಸುವಂತಾಗಿದೆ. ಒಂದರ್ಥದಲ್ಲಿ ಇದರಿಂದ ಒಳ್ಳೆಯದಾಯಿತೆನ್ನಬಹುದಾದರೂ ಸಹ ಮತ್ತೊಂದು ರೀತಿಯಲ್ಲಿ ಸಾಮಾಜಿಕ ಜೀವನವೂಸಹ ಕಲುಷಿತವಾಗಿತ್ತೆನ್ನಬಹುದು. ಈ ಎರಡರ ಮಧ್ಯೆ, ವಿಜಯನಗರದ ಅರಸರ ಕಾಲದಲ್ಲಿ ಅನೇಕ ತತ್ವಜ್ಞಾನಿಗಳು, ದಾಸರುಗಳು ತಮ್ಮ ತತ್ವ ಹಾಗೂ ದಾಸಪದಗಳಿಂದ ವಿಜಯನಗರದ ಸಾಮಾಜಿಕ ಅನಿಷ್ಟಗಳನ್ನು ಪ್ರತಿಭಟಿಸಿ ಧರ್ಮದ ನಿಜಸ್ವರೂಪದ ಬೆಳಕಿನಲ್ಲಿ ಸಾಮಾಜಿಕ ಜೀವನವನ್ನು ಹಸನು ಗೊಳಿಸುವ ಪ್ರಯತ್ನಗಳೂ ನಡೆಯುತ್ತಾ ಬಂದುವೆನ್ನಬಹುದು. ಅಂದಿನ ಕಾಲದ ಸಾಮಾಜಿಕ ಜೀವನವನ್ನು ಅನೇಕ ಸ್ತರಗಳಲ್ಲಿ ಅಧ್ಯಯನ ಮಾಡಬಹುದಾಗಿದೆ. ಒಂದರ್ಥದಲ್ಲಿ ವಿಜಯನಗರ ಅರಸರುಗಳು ಸಾಮಾಜಿಕ ಜೀವನವನ್ನು ಸಮಾನತೆಯ ಆಧಾರದ ಮೇಲೆ ಕಟ್ಟಲು, ಕಟ್ಟುವ ಪ್ರಯತ್ನದಲ್ಲಿ ಅಷ್ಟು ಇಷ್ಟು ಪ್ರಭಾವ ಶಾಲಿಯಾಗಿದ್ದ ಪ್ರಯತ್ನಗಳನ್ನು ನಡೆಸಿದರು. ಇದಕ್ಕೆ ಅಂದು ಸೃಷ್ಟಿಯಾಗಿರುವ ದಾಸ ಪದಗಳೆ ಸಾಕ್ಷಿಯಾಗಿವೆ. ಸ್ವಲ್ಪ ಪ್ರಮಾಣದಲ್ಲಿ ಶಾಸನಗಳು ವೀರಗಲ್ಲುಗಳು ಅಧ್ಯಯನಕ್ಕೆ ಸಹಕಾರಿಯಾಗಿವೆ."[೧]

ಈ ಸ್ಥಳದಲ್ಲಿ ಅಂದರೆ ಹಂಪಿಯ ಪರಿಸರದಲ್ಲಿ ನೆಲೆಸಿರುವ ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳು ಕಾಲದಿಂದ ಕಾಲಕ್ಕೆ ಭಿನ್ನರೀತಿಯಲ್ಲಿ ಬದುಕಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಇಂತಹ ಕಾಲಮಾನಗಳಲ್ಲಿ ಬುಡಕಟ್ಟುಗಳು ಕೆಲವು ಸಮುದಾಯವು ವಿಜಯನಗರ ಕಾಲಕ್ಕಿಂತ ಪೂರ್ವದಲ್ಲಿ ಇರುವವು. ಕೆಲವು ಸಾಮ್ರಾಜ್ಯ ಅಳಿದ ಹೋದ ನಂತರ ಬಂದಿರುವ ಸಮುದಾಯಗಳು ಕೆಲವು ಬಂದಿರುವವು. ಇವರ ಸಾಮಾಜಿಕ

ಸ್ಥಾನಮಾನಗಳು ಬೇರೆ ಬೇರೆ ರೀತಿಯಲ್ಲಿ ಕಂಡುಬಂದರು ಅವರ ಸಾಂಸ್ಕೃತಿಕ ನೆಲೆಯಲ್ಲಿ ಉಳಿದುಕೊಂಡು ಬಂದಿವೆ ಎಂದು ಹೇಳಬಹುದು. ಬುಡಕಟ್ಟುಗಳ ಒಂದು ಸ್ಥಳದಲ್ಲಿ ಸ್ಥಿರವಾಗಿ ನಿಂತು ತಮ್ಮ ಜೀವನವನ್ನು ನಡೆಸುವ ಜನಾಂಗದವರೆಲ್ಲಾ ಇವರು ಕೇವಲ ಬೆಟ್ಟ-ಗುಡ್ಡಗಳಲ್ಲಿ ವಾಸವಾಗಿದ್ದು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಮಾಡುತ್ತಿದ್ದರು. ಬೇಟೆ ಮತ್ತು ಆಹಾರ ಸಂಗ್ರಹಣೆ ಅವರ ಪ್ರಮುಖ ಕಾರ್ಯವಾಗಿತ್ತು. ಇಂತಹ ಪರ್ಯಾಯ ಬದಕನ್ನು ನಡೆಸುತ್ತಾದರೂ ಬೇಡ ಬುಡಕಟ್ಟು ವಿಜಯನಗರ ಸಾಮ್ರಾಜ್ಯದಲ್ಲಿ ಕೆಲವು ಕುಟುಂಬಗಳು ಅಧಿಕಾರ ಪಡೆದುಕೊಂಡು ಕಾರ್ಯನಿರ್ವಹಿಸಿದವು. ಕೆಲವು ಅಲೆಮಾರಿತನದ ಬದುಕು ಕೂಡ ಇತ್ತು. ಇನ್ನೂ ಕೆಲವು ಅಧ್ಯಯನಕ್ಕೆ ತೆಗೆದುಕೊಂಡ ಅಲೆಮಾರಿ ಬುಡಕಟ್ಟು ಸಮುದಾಯಗಳ ಸಾಮ್ರಾಜ್ಯ ಅಳಿದು ಹೋದ ನಂತರ ಈ ಪರಿಸರಕ್ಕೆ ಬಂದು ನೆಲೆಸಿರುವ ಸಮುದಾಯಗಳು ತಮ್ಮದೆಯಾದ ಜೀವನ ಶೈಲಿಯಲ್ಲಿ ವಾಸಿಸುತ್ತಿರುವುದು ಕಂಡುಬರುತ್ತವೆ. ಅವು ದುರುಗಮುರುಗಿ, ಹಕ್ಕಿಪಿಕ್ಕಿ, ಲಂಬಾಣಿ, ಇತರ ಅಲೆಮಾರಿ ಸಮುದಾಯಗಳಾದ, ಕೊರಮ, ಸಿಳ್ಳೇಕ್ಯಾತ್, ಚೆನ್ನದಾಸರು ಹಗಲುವೇಷಗಾರರು, ಮೋಡಿಕಾರರು, ಬುಡ್ಗಜಂಗಮರು, ಇನ್ನೂ ಕೆಲವು ಅಲೆಮಾರಿ, ಸಮುದಾಯಗಳು ಕೂಡ ಅವರವರ ಬದುಕಿನ ಹಿನ್ನೆಲೆಯಲ್ಲಿ ಇಲ್ಲಿ ನೆಲೆಸುತ್ತಿವೆ ಎಂದು ಹೇಳಬಹುದು. ಇವು ಕೆಲವು ಭೂಮಿ ಹೊಂದಿವೆ. ಕೆಲವು ಯಾವುದೇ ಆಸ್ತಿ, ಸ್ವಂತ ಜಾಗ ಇನ್ನೂ ಕೂಡ ದೊರಕದ ಅತಂತ್ರಸ್ಥಿತಿಯಲ್ಲಿ ಬದುಕುತ್ತಿವೆ. ಈ ಸಮುದಾಯಗಳು ಕಮಲಾಪುರದಲ್ಲಿ ಬೇಡಬುಡಕಟ್ಟು, ದುರುಗಮುರಗಿ,ಲಂಬಾಣಿ ಸಮುದಾಯ ಕೆರೆತಾಂಡದಲ್ಲಿ ಹಕ್ಕಿಪಿಕ್ಕಿ ಸಮುದಾಯ ಕಂಪ್ಲಿಯಲ್ಲಿ, ಹಾಗೇ ಬುಕ್ಕಸಾಗರ, ವೆಂಕಟಾಪುರ, ಹಾಗೂ ಈ ಪರಿಸರದಲ್ಲಿ ಬರುವಂತ ಕೆಲವು ಪ್ರದೇಶಗಳನ್ನು ಅಧ್ಯಯನದಲ್ಲಿ ತೊಡಗಿಸಿಕೊಂಡು ಚರ್ಚಿಸಲಾಗಿದೆ.

ಬುಡಕಟ್ಟುಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುವುದು ಮತ್ತು ಅಲೆಮಾರಿಗಳಾಗಿ ಜೀವನ ಸಾಗಿಸುವುದು ಇವುಗಳ ಸಹಜ ಗುಣವಾಗಿದೆ. ಹಲವಾರು ಬುಡಕಟ್ಟುಗಳು ಬೇರೆ ಪ್ರದೇಶಗಳಿಂದ ಕರ್ನಾಟಕ್ಕೆ ಬಂದು ಈ ಪರಿಸರದಲ್ಲಿ ನೆಲೆಸಿವೆ. ಅಂಥವುಗಳಲ್ಲಿ ರಾಜಸ್ಥಾನ, ಗುಜರಾತ, ಮಹರಾಷ್ಟ್ರ, ಗೋವಾ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ಕಡೆಗಳಿಂದ ವಲಸೆಗೊಂಡು ಬಂದವುಗಳಾಗಿವೆ. ಈ ಬುಡಕಟ್ಟುಗಳ ವಲಸೆಯ ಕಾಲಾವದಿ ಹಾಗೂ ಕಾರಣಗಳು ಬುಡಕಟ್ಟಿನಿಂದ ಬುಡಕಟ್ಟಿಗೆ ಭಿನ್ನವಾಗಿವೆ. ಇಂದಿನ ಆಧುನಿಕ ಸಂದರ್ಭದಲ್ಲಿ ಹಲವಾರು ಬುಡಕಟ್ಟುಗಳನ್ನು ತಮ್ಮ ಮೂಲ ನೆಲೆಯಾದ, ಕಾಡುಗಳನ್ನು ಬಿಟ್ಟು ನಗರ ಪ್ರದೇಶಗಳಲ್ಲಿ ವಾಸವಾಗಿರುವುದು ಕಂಡುಬರುತ್ತದೆ. ಭಾರತ ದೇಶವು ವಿದೇಶಿ ಬಂಡವಾಳವನ್ನು ಆಶ್ರಯಿಸಿರುವುದರಿಂದ ಕಾಡುಗಳನ್ನು ಕೈಗಾರಿಕೆಗಳ ತಾಣಗಳಾಗಿ

ಮಾರ್ಪಾಡಾಗಿರುವುದರಿಂದ ಅಲ್ಲಿ ವಾಸಿಸುತ್ತಿದ್ದ ಹಲವಾರು ಬುಡಕಟ್ಟು ಸಮುದಾಯಗಳು ಬದಲಾವಣೆಯ ಆದಿಯಲ್ಲಿ ಇದರ ಸ್ಥಿತಂತರಕ್ಕೆ ಒಳಗಾಗಿರುವದು ಕಾಣಬಹುದು ಇವುಗಳ ಸಾಮಾಜಿಕ ಸ್ಥಿತಿಗತಿಯ ಬದುಕನ್ನು ಇಲ್ಲಿ ಚರ್ಚಿಸಲಾಗಿದೆ.

ಕುಟುಂಬ

ಪ್ರಾಚೀನ ಭಾರತದ ಇತಿಹಾಸದಿಂದಲೂ ಕಂಡುಬರುವ ಹಾಗೆ ಸಾಮಾಜಿಕ ಸಂಸ್ಥೆಗಳಲ್ಲಿ ಕುಟುಂಬವು ಒಂದು ಇದು ವಿವಾಹದ ನಂತರ ಎರಡನೆ ಘಟವೆಂದರೆ ಕುಟುಂಬ ಎಂದು ಹೇಳಬಹುದು ಪ್ರತಿಯೊಬ್ಬ ವ್ಯಕ್ತಿಯು ಒಂದಲ್ಲಾ ಒಂದು ಕುಟುಂಬ ವರ್ಗಕ್ಕೆ ಸೇರಿರುತ್ತಾನೆ. ಎಂಬುದು ಸಮಾಜದ ಸಹಜಗುಣ, ಅದರಂತೆ ''ವಿಜಯನಗರದ ಕಾಲದಲ್ಲಿ ಅನೇಕ ಜನವರ್ಗಗಳು ನೆಲೆಸಿರುವುದು ಒಂದು ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. ಆದರಿಂದ ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿಯೂ ಕುಟುಂಬವು ಸಮಾಜದ ಮೂಲಭೂತ ಸ್ಥಿತಿಯದ್ದಾಗಿತ್ತು. ಅಂದು ಇದು ಚಿಕ್ಕ ಹಾಗೂ ವಿಶಾಲ ಸಮಾಜದ ಶಕ್ತಿಶಾಲಿ ಘಟಕವಾಗಿ ಬೆಳೆದು ನಿಂತಿತ್ತೆನ್ನಬಹುದು.[೧]

ಕೆಲವು ಇತಿಹಾಸಗಾರರು ಅಂದಿನ ಕುಟುಂಬವನ್ನು ಮಾನವ ಸಮಾಜದ ಪ್ರಾಥಮಿಕ ಸಂಸ್ಥೆಯಾಗಿತ್ತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮತ್ತೆ ಕೆಲವು ಇತಿಹಾಸಗಾರರು ಕುಟುಂಬವನ್ನು ಅಂದಿನ ಸಮಾಜದ ಕೇಂದ್ರ ಬಿಂದುವಾಗಿತ್ತೆಂದು ಹೇಳಿಕೆ ನೀಡಿದ್ದಾರೆ. ಕುಟುಂಬವು ವ್ಯಕ್ತಿಯ ಸಂಪರ್ಕ ಪಡೆಯುವ ಮೊದಲನೆಯ ಸಮೂಹ ಮತ್ತು ಅವನ ಭವಿಷ್ಯದ ಬದುಕಿಗೆ ತಳಪಾಯವನ್ನು ಹಾಕಿಕೊಡುವ ಸಂಸ್ಥೆಯಾಗಿತ್ತೆನ್ನಬಹುದು ಆದುದರಿಂದಲೇ ವಿಜಯನಗರದ ಅರಸರ ಆಳ್ವಿಕೆಯಕಾಲದ ಸಂಸ್ಕೃತಿಯನ್ನು ಚರ್ಚಿಸುತ್ತಿರುವ ಈ ಸಮಯದಲ್ಲಿ ಯಾವುದೇ ಸಮಾಜದ ಸಾಮಾಜಿಕ ಜೀವನದ, ಯಾವುದೇ ವಿಶ್ಲೇಷಣೆಯಲ್ಲಿ ಕುಟುಂಬವನ್ನು ಅಧ್ಯಯನದ ಮೊದಲ ಘಟಕವಾಗಿ ಪರಿಗಣಿಸಬೇಕಾಗಿದೆ. ಸಾಮಾನ್ಯವಾಗಿ ಕುಟುಂಬವು ನಿರಂತರವಾಗಿ ಬದಲಾಗುತ್ತಿರುವ ಒಂದು ರೀತಿಯಲ್ಲಿ ಚಲನಾತ್ಮಕ ಸಂಸ್ಥೆ ಎನ್ನುವರು.[೨]

''ವಿಜಯನಗರ ಕಾಲದ ಕುಟುಂಬ ವ್ಯವಸ್ಥೆಯಲ್ಲಿ ಅನೇಕ ವಿಧಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಏಕಪತಿ ಹಾಗೂ ಏಕಸತಿಯನ್ನು ಒಳಗೊಂಡ ಏಕಸಂಗಾತಿ ಕುಟುಂಬ ವ್ಯವಸ್ಥೆ ಹಾಗೂ ಒಬ್ಬ ಗಂಡಸು ಅನೇಕ ಪತ್ನಿಯರನ್ನು ಹೊಂದಿರುವ ಬಹುಪತ್ನಿತ್ವದ ಕುಟುಂಬ ಮತ್ತು ಒಬ್ಬ ಹೆಂಗಸು ಅನೇಕ ಪತಿಯರನ್ನು ಹೊಂದಿದ್ದ ಬಹುಪತ್ನಿತ್ವ ಕುಟುಂಬ ಹಾಗೂ ಒಂದು ಗುಂಪಿನ ಪುರುಷರು ಒಟ್ಟಿಗೆ ಇನ್ನೊಂದು ಗುಂಪಿನ ಸ್ತ್ರೀಯರನ್ನು ಮದುವೆಯಾಗುವ ಸಮೂಹ ವಿವಾಹದ ಆಧಾರದ ಮೇಲಿನ ಕುಟುಂಬ, ಈ ರೀತಿಯ ವಿವಿಧ ಕುಟುಂಬಗಳು ಅನೇಕ ಆಧಾರಗಳಿಂದ ಕಂಡುಬರುತ್ತವೆ.[೩] ಆದರೆ ಬುಡಕಟ್ಟು

ಸಮುದಾಯಗಳಲ್ಲಿ ಅಥವಾ ಅಲೆಮಾರಿ ಸಮುದಾಯಗಳಲ್ಲಿ ಈ ರೀತಿಯಾದ ಕುಟುಂಬವರ್ಗದ ಪದ್ಧತಿಯನ್ನೂ ಆಕಾಲದಲ್ಲಿ ಇತ್ತು. ಆದರೆ ಇಂದು ಈ ಪದ್ಧತಿ ಈ ಸಮುದಾಯಗಳಲ್ಲಿ ಕೆಲವು ಕುಟುಂಬ ವರ್ಗಗಳು ಆಧುನಿಕತೆಯ ಪ್ರಭಾವಕ್ಕೆ ಒಳ್ಳಗಾಗಿ ನಡೆಯುತ್ತಿವೆ. ಎಂದು ಕ್ಷೇತ್ರಕಾರ್ಯದಿಂದ ತಿಳಿದು ಬರುತ್ತದೆ. ಇವುಗಳಲ್ಲಿ ಬೇಡ ಬುಡಕಟ್ಟು, ಲಂಬಾಣಿ ಸಮುದಾಯ ಹಕ್ಕಿಪಿಕ್ಕಿ ಎಂದು ಹೇಳಬಹುದು.

ಕುಟುಂಬಗಳ ಪ್ರಮುಖ ಕರ್ತವ್ಯ ಹಾಗೂ ಮೂಲಭೂತ ಕಾರ್ಯಾಗಳೆಂದರೆ ಮಕ್ಕಳನ್ನು ಪಡೆಯುವುದು, ಮಕ್ಕಳ ಪಾಲನೆ ಹಾಗೂ ಪೋಷಣೆ, ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಬದುಕುವ ಸಾಮಾಜಿಕ ಪ್ರಜ್ಞಾನವನ್ನು ಮೂಡಿಸುವುದು, ಹಾಗೂ ಕುಟುಂಬದ ವೃದ್ಧ ಮತ್ತು ಅಶಕ್ತ ರಕ್ತ ಸಂಬಂಧಿಗಳನ್ನು ನೋಡಿಕೊಳ್ಳುವ ಕಾರ್ಯದಲ್ಲಿ ತೊಡಗುತ್ತಿತ್ತೆನ್ನಬಹುದು. ಒಂದರ್ಥದಲ್ಲಿ ಹೇಳುವುದಾದರೆ ಇವರಿಗೆ ತಮ್ಮದೇ ಆದಂತಹ ಸ್ಥಿರವಾದ ಕುಟುಂಬ ಹೆಚ್ಚುಕಾಲ ಇರುತ್ತಿರಲಿಲ್ಲ ಎನ್ನಬಹುದು. ಇದಕ್ಕೆ ಇಂದಿಗೂ ಜೀವಂತವಿರುವ ಅನೇಕ ಸಾಮಾಜಿಕ ಕಟ್ಟುಪಾಡುಗಳೇ ಸಾಕ್ಷಿಯಾಗಿವೆ.

''ಹಾಗೇ ನೋಡಿದರೆ ಹಂಪಿಯ ಸುತ್ತಲಿನ ಪ್ರದೇಶಗಳಲ್ಲಿ ಬುಡಕಟ್ಟುಗಳ ಬದುಕನ್ನು ಗಮನಿಸಿದಾಗ ಅವಿಭಕ್ತ ಕುಟುಂಬ ಕೂಡ ವಿರಳವಾಗಿ ಕಂಡುಬರುತ್ತದೆ. ಇದು ಭಾರತದ ಒಂದು ಅತ್ಯಂತ ಪ್ರಾಚೀನವಾದ ಮತ್ತು ಸಾರ್ವತ್ರಿಕವಾದ ಸಂಸ್ಥೆಯಾಗಿದೆ ಎಂದು ಹೇಳಬಹುದು. ಒಂದು ರೀತಿಯಲ್ಲಿ ಭಾರತದಲ್ಲಿ ಜಾತಿಪದ್ಧತಿಯಷ್ಟೇ ಪುರಾತನವಾದದ್ದೆನ್ನಬಹುದು. ಇದು ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಹಾಸುಹೊಕ್ಕಾಗಿ ತನ್ನ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡು ಬಂದಿದೆ. ಈ ರೀತಿಯ ಕುಟುಂಬವನ್ನು ರಕ್ತ ಸಂಬಂಧದ ಜನರ ಗುಂಪನ್ನು ಹೊಂದಿರುವ ಒಂದು ಜನ ಸಮೂಹ ಎಂದು ಕರೆಯಬಹುದು. ಏಕೆಂದರೆ ಈ ಕುಟುಂಬದಲ್ಲಿ ತಂದೆ ತಾಯಿ ಸೋದರರು ಮತ್ತು ಅವರ ಹೆಂಡತಿ ಮಕ್ಕಳನ್ನು ಒಳಗೊಂಡಿರುವ ಒಂದು ದೊಡ್ಡ ಕುಟುಂಬ ವ್ಯವಸ್ಥೆ ರೂಪಿತವಾಗಿರುತ್ತದೆ. ಸಾಮಾನ್ಯವಾಗಿ ಇಂತಹ ಕುಟುಂಬದ ಒಡೆತನವು ಹಿರಿಯ ಪುರುಷ ಸದಸ್ಯನ ಆಧೀನದಲ್ಲಿದ್ದಿತೆಂದು ಆಧಾರಗಳಿಂದ ತಿಳಿದುಬರುತ್ತದೆ. ಕುಟುಂಬದ ಸದಸ್ಯರೆಲ್ಲರಿಗೂ ಒಂದೇ ಅಡುಗೆ ಮನೆಯನ್ನೊಂದಿದ್ದು ಹಣಕಾಸಿನ ವಿಷಯದಲ್ಲಿ ಒಂದೇ ತೀರ್ಮಾನವನ್ನು ಹೊಂದಿರುತ್ತಿದ್ದರೆಂದು ತಿಳಿದುಬರುತ್ತದೆ. ಈ ಕುಟುಂಬದ ಗಾತ್ರಕ್ಕೆ ಮಿತಿಯಿರುತ್ತಿರಲಿಲ್ಲ. ವಿಜಯನಗರ ಸಾಮ್ರಾಜ್ಯದಲ್ಲಿ ಇಂತಹ ಕುಟುಂಬಗಳು ಆರರಿಂದ ನಾಲ್ಕು ತಲೆಮಾರಿನವರನ್ನು ಒಳಗೊಂಡಿದ್ದಕ್ಕೆ ನಿದರ್ಶನಗಳು ಸಿಗುತ್ತವೆ.[೪] ಈ ಕುಟುಂಬದ ಚಿತ್ರಣವು ಸಾಂಪ್ರದಾಯಿಕ ಹಿಂದೂ ಧರ್ಮದಿಂದ ಪ್ರತಿಪಾದಿಸಲ್ಪಟ್ಟಿತ್ತು. ಆದರೆ ಅದರ ನಿಯಮ ಮತ್ತು ಆಚರಣೆಗಳು ಅನೇಕ ರೀತಿಯಲ್ಲಿ ವ್ಯತ್ಯಾಸ ಹೊಂದಿದ್ದವೆಂದು, ಕಂಡು

ಬರುತ್ತದೆ. ವಿಜಯನಗರ ಅರಸರ ಕಾಲದ ಗ್ರಾಮೀಣ ಪ್ರದೇಶಗಳಲ್ಲಿ ಉನ್ನತ ಜಾತಿಗಳು ಈ ಆದರ್ಶಗಳಲ್ಲಿ ನಂಬಿಕೆ ಇಡುವುದರ ಜೊತೆಗೆ ಗತ್ತು ಗಾಂಭೀರ್ಯದಿಂದ ಕಟ್ಟುನಿಟ್ಟಾಗಿ ಅನುಸರಿಸಲು ಮುಂದಾಗುತ್ತಿದ್ದವು. ಮಧ್ಯಮ ವರ್ಗದ ಜನರು ಈ ತತ್ವಗಳಿಗೆ ಹೆಚ್ಚಾಗಿ ಅಂಟಿಕೊಳ್ಳಲಿಲ್ಲವೆಂದೇ ಹೇಳಬಹುದು. ಆದರೆ ಜಾತಿ, ವರ್ಣಶ್ರೇಣಿಯ ಮಧ್ಯ ಪ್ರವೇಶವು ಹೆಚ್ಚಾಗಿ ಈ ಆದರ್ಶಗಳನ್ನು ತಳ್ಳಿಹಾಕಿದವು. ಹಾಗೂ ಕೆಳ ವರ್ಗದಲ್ಲಿ ಅವುಗಳ ಸುಳಿವೇ ಮರೆಯಾದವು. ಸಾಮಾನ್ಯವಾಗಿ ಅಂದು ಕೆಲವು ಪ್ರದೇಶಗಳನ್ನು ಹೊರತುಪಡಿಸಿದರೆ ಎಲ್ಲಾ ಭಾಗಗಳಲ್ಲಿಯೂ ಪಿತೃವಂಶೀಯ ಮತ್ತು ಪಿತೃಸ್ಥಳೀಯ ವಿಭಕ್ತ ಮತ್ತು ಅವಿಭಕ್ತ ಕುಟುಂಬ ಪದ್ಧತಿಯೂ ಕಂಡುಬರುತ್ತಿತ್ತು.[೫] "ವಾಸ್ತವವಾಗಿ ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬಗಳು ಅಲ್ಲಲ್ಲಿ ಕಂಡು ಬಂದರೂ ಅವು ಚಿಕ್ಕ ಘಟಕಗಳಾಗಿ ತಂದೆ ತಾಯಿ ಅವರ ಮದುವೆಯಾದ ಗಂಡು ಮಕ್ಕಳು ಮತ್ತು ಅವರ ಮಕ್ಕಳು, ಸೋದರರು ಹಾಗೂ ಅವರ ಪತ್ನಿಯರನ್ನು ಒಳಗೊಂಡಿರುತ್ತಿತ್ತು. ಏಕೆಂದರೆ ಸಾಮಾನ್ಯವಾಗಿ ಗಂಡು ಮಕ್ಕಳು ಮದುವೆಯಾದ ಕೆಲವೇ ಕೆಲವು ವರ್ಷಗಳಲ್ಲಿ ತಂದೆ ತಾಯಿಯವರಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದುದಕ್ಕೆ ಅಂದಿನ ಜನಪದೀಯ ಆಕರಗಳು ಹೆಚ್ಚಾಗಿ ಬೆಳಕು ಚೆಲ್ಲುತ್ತವೆ. ಆದರಿಂದ ಇಂದಿಗೂ ಸಹ ಅವಿಭಕ್ತ ಕುಟುಂಬದಲ್ಲಿನ ಬದಲಾವಣೆಗಳ ಬಗ್ಗೆ ವಿವಿಧ ಭಿನ್ನಾಭಿಪ್ರಾಯಗಳಿವೆ. ಎಂದು ಹೇಳಬಹುದು.[೬]

ವಿವಾಹ

"ಅಂದಿನಿಂದ ಇಂದಿನವರೆವಿಗೂ ನಮ್ಮ ಸಾಮಾಜಿಕ ಜೀವನದ ಮುಖ್ಯವಾದ ಘಟ್ಟವೆಂದರೆ, ಮದುವೆ ಒಂದು ದೃಷ್ಟಿಯಲ್ಲಿ ವಿವಾಹವು ಮಾನವನಲ್ಲಿ ಮೃದುತ್ವವನ್ನು ಸಂಸ್ಕಾರಗೊಳಿಸಿ ಸಂಯಮದಿಂದ ಉದಾತ್ತವಾದುದರ ಕಡೆಗೆ ಬದಲಾಯಿಸುವ ಒಂದು ಪವಿತ್ರ ಸಾಧನವೆಂದು ಭಾವಿಸಲಾಗಿದೆ. ಒಂದರ್ಥದಲ್ಲಿ ಇದು ಸತ್ಯವೂ ಕೂಡ ಆಗಿದೆ. ಎಲ್ಲಿಯೂ ಹುಟ್ಟಿ ಬೆಳೆದು ಹೆಣ್ಣು, ಎಂದೂ ಕಂಡರಿಯದ ಪುರುಷನೊಬ್ಬನ ಕೈಹಿಡಿದು ವಿವಾಹವಾಗಿ ಸಂಸಾರವೆಂಬ ಸಾಗರದಲ್ಲಿ ಈಜಲು ಬದ್ಧಳಾಗುತ್ತಾಳೆ. ಅಂದಿನಿಂದ ಅವಳ ಗಂಡನೇ ಅವಳ ಜೀವನದ ಸರ್ವಸ್ವನಾಗುತ್ತಾನೆ. ಅವಳು ಅವನ ಮನ, ಮನೆಯ ಒಡತಿಯಾಗುತ್ತಾಳೆ. ಘಟ್ಟ ಗೃಹಕಾಯಾಗುತ್ತಾಳೆ. ಗಂಡು ಹೆಣ್ಣುಗಳ ಜೀವನದಲ್ಲಿ ಅದೊಂದು ಪರಿವರ್ತನೆಯ ಪವಿತ್ರ ಘಟ್ಟ.[೭]

ವಿಜಯನಗರದ ಅರಸರ ಕಾಲದಲ್ಲಿ ನಡೆಯುತ್ತಿದ್ದ ವಿವಾಹದ ವರ್ಣನೆಯು ಅಷ್ಟಾದಶ ವರ್ಣನೆಯಲ್ಲಿ ಒಂದು ಭಾಗವಾಗಿ ವರ್ಣಿತವಾಗಿರುವುದು ಕಂಡುಬರುತ್ತದೆ. ಕಾವ್ಯಗಳಲ್ಲಿ ಹಾಗೂ ದಾಸ ಪದಗಳಲ್ಲಿಯೂ ಇವುಗಳ ವರ್ಣನೆಯು ಕಂಡುಬರುತ್ತದೆ. ಅಂದು ಯಾವುದೇ ಸಮುದಾಯದಲ್ಲಿ ವಿವಾಹಗಳು ಮನೆಯ ಅಂದರೆ ಕುಟುಂಬದ ಹಿರಿಯರಿಂದ ಕನ್ಯೆಯನ್ನು

ನೋಡಿ ಬಂದ ನಂತರ ಯುವಕರನ್ನು ತೋರಿಸಿ ಹಾಗೂ ಯುತಿಯರ ಕುಟುಂಬದವರು ಪುರುಷರನ್ನು ನೋಡಿದ ನಂತರ ಇವರ ಇಬ್ಬರ ಒಪ್ಪಿಗೆಯಂತೆ ವಿವಾಹಗಳು ನಡೆಯುತ್ತಿದ್ದವು. ಅದರಂತೆಯೇ ಬುಡಕಟ್ಟು ಸಮುದಾಯಗಳಲ್ಲಿಯು ಕೂಡ ಈ ಸಂಪ್ರದಾಯ ರೂಡಿಯಲ್ಲಿತ್ತು. ಆದರೆ ಅರಸರು ಅಥವಾ ಮೇಲ್ವರ್ಗದ ಜನರಲ್ಲಿ ಬೇರೆ ಬೇರೆ ಕುಟುಂಬಗಳಿಂದ ಅಂದರೆ ಅವರ ಸಮುದಾಯದಲ್ಲಿಯೇ ಬೇರೆ ಊರಿನಿಂದ ಸಂಬಂಧಗಳು ನಡೆಯುತ್ತಿದ್ದವು ಆದರೆ ಬುಡಕಟ್ಟು ಸಮುದಾಯಗಳಲ್ಲಿ ಒಳಬಾಂದವ್ಯ ಅಥವಾ ರಕ್ತ ಸಂಬಂಧಗಳಲ್ಲಿ ವಿವಾಹಗಳು ನಡೆಸುತ್ತಿದ್ದವು ಇಂದು ಕೂಡ ಬುಡಕಟ್ಟು ಸಮುದಾಯಗಳ ಒಳಬಾಂಧವ್ಯ ವಿವಾಹಗಳು ಪದ್ಧತಿ ರೂಡಿಯಲ್ಲಿವೆ. ಆದರೆ ಆಧುನಿಕ ಜಗತ್ತಿನಲ್ಲಿ ಅಂದರೆ ಜಾಗತೀಕರಣ, ಪಾಶ್ಚತೀಕರಣ, ನಾಗರೀಕರಣದ ಪ್ರಭಾವದಿಂದ ಇಂದು ವಿವಾಹ ಪದ್ಧತಿ ಬದಲಾವಣೆಗಳು ಕಂಡುಕೊಂಡಿವೆ. ಇಲ್ಲಿ ಮದುವೆಯಾಗುವ ಯುವಕನು ಸ್ವತ ತಾನೇ, ಕನ್ಯಯನ್ನು ನೋಡಿ ಒಪ್ಪಿಗೆ ಸೂಚ್ಯಿಸಿದ ನಂತರ ಕುಟುಂಬದ ಹಿರಿಯರು ಹಾಗೂ ಯುವತಿಯ ಕುಟುಂಬಂದ ಹಿರಿಯರು ಕೂಡಿ ಒಪ್ಪಂದದಿಂದ ವಿವಾಹ ಪದ್ಧತಿ ಪ್ರಸ್ತುತ ರೂಢಿಯಲ್ಲಿದೆ. ಇದು ಎಲ್ಲಾ ಜನ ಸಮುದಾಯಗಳಲ್ಲಿ ಕಂಡುಬರುತ್ತದೆ. ಅದರ ಜೊತೆಗೆ ಪ್ರೇಮ ವಿವಾಹ ಕೂಡ ಪ್ರಸ್ತುತ ಸಂಧರ್ಭಗಳಲ್ಲಿ ಸ್ವಲ್ಪ ಬೆರಳೆನ್ನಿಕೆಯಷ್ಟು ವಿವಾಹ ಪದ್ಧತಿ ಕಂಡು ಬರುತ್ತದೆ. ಆದರೆ ಬುಡಕಟ್ಟ ಸಮುದಾಯಗಳಲ್ಲಿ ಬಹಳ ವಿರಳವೆಂದು ಹೇಳಬಹುದು.

''ಮದುವೆಯೆಂಬುದು ಗಂಡಿನ ದೃಷ್ಟಿಯಿಂದ ಕೇವಲ ಏನನ್ನೂ ಪಡೆಯುವ ಕ್ರಿಯೆ ಆಗಿತ್ತೆನ್ನಬುದು. ತನ್ನ ಪತ್ನಿಯನ್ನು ಕರೆ ತಂದು ತನ್ನ ಮನೆಯನ್ನು ಸಂತೋಷದಿಂದ ತುಂಬಿಕೊಳ್ಳುತ್ತಾನೆ. ಹೆಣ್ಣಿಗೂ ಅದು ಪಡೆಯುವಿಕೆಯಾಗಿರುತ್ತದೆ ಎನ್ನಬಹುದು. ಏಕೆಂದರೆ ತನ್ನ ಬಾಳ ಸಂಗಾತಿಯನ್ನು ಅವಳು ಪಡೆದುಕೊಂಡಿರುತ್ತಾಳೆ. ಆದರೆ ತನ್ನನ್ನು ಹೆತ್ತು ಹೊತ್ತು ಸಾಕಿ ಸಲಹಿದ ತಂದೆ ತಾಯಿಗಳನ್ನು ಒಡನಾಡಿ ಬೆಳೆದ ಅಣ್ಣ ತಮ್ಮಂದಿರನ್ನು ಅಕ್ಕ ತಂಗಿಯರನ್ನು ಬಿಟ್ಟು ಬರಬೇಕಾಗುತ್ತದೆ. ಈ ಸನ್ನಿವೇಶವು ಅಂದಿನ ಕಾಲದ ಜನಪದರಲ್ಲಿ ಸೃಷ್ಟಿಯಾದ ಅನೇಕ ಮೌಖಿಕ ಸಾಹಿತ್ಯಕ್ಕೆ ಪ್ರಚೋದನೆ ನೀಡಿತ್ತೆನ್ನಬಹುದು. ಇದನ್ನೇ ನಾವು "ಜನಪದ ಸಾಹಿತ್ಯ" ಎಂದು ಕರೆಯುವುದು. ಉದಾಹರಣೆಗೆ ಈ ಸಂದರ್ಭದ ನಮ್ಮ ಜನರ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಈ ಕೆಳಗಿನ ಅನೇಕ ಸನ್ನಿವೇಶದಲ್ಲಿ, ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿಸಲಾಗಿರುವ ಜನಪದ ಗೀತೆಗಳಲ್ಲಿ ಕಾಣಬಹುದಾಗಿದೆ.[೮]

''ಮದುವೆಯಾದ ನವ ವದುವನ್ನು ಗಂಡನ ಮನೆಗೆ ಕಳುಹಿಸುವಾಗ ತಂದೆ ಮಗಳಿಗೆ ಹೇಳಿರುವ ಮಾತು ತುಂಬ ಅರ್ಥಪೂರ್ಣವಾಗಿದೆ.

ಹೆಣ್ಣು ಮಕ್ಕಳ ಕಲುವಿನ ಕಣ್ಣೀಗಿ ನೀರ್ತಂದು
ಸಣ್ಣ ಸಲ್ಲೆದಲೆ ಮುಸುಗ್ಹಾಕಿ| ಹಡೆದವ್ವ
ಹೆಣ್ಣು ಸಾಕೆಂದ ಜಲುಮಾಕೆ||

ತಂದೆಯ ದುಃಖ ವೇ ಒಂದು ರೀತಿಯ ಸ್ವರೂಪದ್ದಾಗಿದ್ದರೆ ಇನ್ನೂ ತಾಯಿಯ ದುಃಖಕ್ಕೆ ಎದೆಯೇ ಇರುವುದಿಲ್ಲವೆನ್ನಬಹುದು. ತಾಯಿಯ ಈ ಸಮಯದಲ್ಲಿ

ಒಂಬ್ಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರಗೇನ
ಹಂಬಲಿಸಿ ನಿನ್ನ ಹಡೆದೇನು| ಚಿತ್ತಾರದ
ಗೊಂಬಿ ನಿನನೊಪ್ಪಿಸಿ ಕೊಡಲ್ ಹ್ಯಾಂಗ್||

ಹರಿಯಾಗೆದ್ ನನ್ಮಗಳು ಹಾಲುಬಾನುಣ್ಣವಳು
ತೂಗು ಮಂಚದಾಗ ಮಲಗುವಳು|
ನಗುನಗುತ ಮನೆ ಬೆಳಗುವಳು||

ಎಂದು ಮಗಳು ತಮ್ಮ ಮನೆಯಲ್ಲಿ ಬೆಳೆದ ರೀತಿ ನೀತಿಯನ್ನು ವರ್ಣೀಕರಿಸಿಕೊಂಡು ತನ್ನದುಃಖವನ್ನೂ ವ್ಯಕ್ತಪಡಿಸುವ ಪರಿ. ಇಂಥ ತಂದೆ ತಾಯಿಯರ ದುಃಖದ ಸಮಯದಲ್ಲಿ ಮಗಳೇ ಅವರನ್ನು ಸಂತೈಸಿಬೇಕಾಗುವ ಪ್ರಸಂಗವೂ ಬಂದೊದಗಿ ಬಿಡುತ್ತದೆನ್ನಬಹುದು. ಉದಾಹರಣೆಗೆ,

ತಾವರಿಯ ಗಿಡಹುಟ್ಟಿ ದೇವರಿಗೆ ನೆರಳಾದೊ |
ನಾಹುಟ್ಟಿ ಮನೆಗೆ ಎರವಾದೆ| ಹಡೆದವ್ವ
ನೀಕೊಟ್ಟ ಮನೆಗೆ ಹೆಸರಾದೆ||

ಮೇಲಿನ ಈ ಪದಗಳು ನಮ್ಮ ಭವ್ಯ ಸರಸ್ಕೃತಿಯ ಸಂಕೇತಗಳಾಗಿವೆ ಎನ್ನಬಹುದು. ನೀಕೊಟ್ಟ ಮನೆಗೆ ಹೆಸರಾಗುವಂತೆ ಬಾಳುತ್ತೇನೆ. ನನ್ನನ್ನು ನಗುನಗುತ್ತಾ ಕಳುಹಿಸು ಎಂತಲೂ ಹೇಳುವುದರ ಜೊತೆಗೆ ಅಂದು ನಮ್ಮ ಜನಪದರು ಕಂಡು ಕೊಂಡಿದ್ದ ಆದರ್ಶದ ಬದುಕು ಇಂದಿಗೂ ಆದರ್ಶಪ್ರಾಯವಾಗಿದೆ.'

''ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳು ವಿವಾಹದ ಪದ್ಧತಿಯು ತಮ್ಮದೇ ಆದಂತಹ ವಿಶಿಷ್ಟವಾದಂತಹ ಮತ್ತು ಸರಳವಾದಂತಹ ವಿವಾಹ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಈ ಒಂದು ಪದ್ಧತಿಯು ಈಗೇ ನೋಡಬಹುದು ಹುಡುಗಿಯನ್ನು ತಮ್ಮದಾಗಿಸಿಕೊಳ್ಳುವುದು ವಿಚಿತ್ರ ದೇಶಾಟನೆಗೆ ಹೋದಾಗ, ಮೇಳ ಕಟ್ಟಿದಾಗ, ಬೇಟೆಗೆ

ಹೋದಾಗ, ಸರಾಯಿಬೇಕೆಂದು ನಿರ್ಣಯ ತೆಗೆದುಕೊಳ್ಳುತ್ತಾರೆ. ಇದು ಇಳೇಯು ಇದಕ್ಕೆ ಮೊದಲು ತೆಗೆದುಕೊಂಡು ನಿರ್ಣಯ, ವರನಕಡೆಯವರು, ವಧುವಿನ ಮನೆಗೆ ಬಂದು ವಧುವನ್ನು ನೋಡಿ ನಿಶ್ಚಯಿಸಿ ತಾಂಬುಲ ಉದೋಯಿಸಿಕೊಳ್ಳುವರು ಮತ್ತು ಆ ಹುಡುಗಿಯ ತಂದೆ ತಾಯಿಗಳನ್ನು ಹೆಂಡದ ಅಂಗಡಿಗೆ ಕರೆದುಕೊಂಡು ಹೋಗಿ, ಅವರಿಗೆ ಹೆಂಡ ಕೊಟ್ಟು ನಿಮ್ಮ ಮಗಳನ್ನು ನಮ್ಮ ಮಗನಿಗೆ ಮದುವೆ ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಆ ಹುಡುಗಿಯ ತಂದೆ ತಾಯಿಗಳನ್ನು ಇಷ್ಟಪಟ್ಟರೆ ಹೆಂಡ ಕುಡಿಯುತ್ತಾರೆ. ಇದಕ್ಕೆ ವರನ ತಂದೆ ತಾಯಿಗಳು ಒಬ್ಬ ಕುಲಸ್ಥನನ್ನು ಕರೆದುಕೊಂಡು ಹೋಗಿ ಹೆಂಡ ಕುಡಿ ತಮ್ಮ ಸಂಬಂಧ ಬಾಯಂ ಖಾಯಂ ಮಾಡುವರು ಇವರಲ್ಲಿ ಬಾಲ್ಯ ವಿವಾಹ ಹೆಚ್ಚು ಆದುದರಿಂದ ಹುಡುಗಿ ಮೈನೆರೆತ ಮೇಲೆ ಆ ಹುಡುಗಿಯ ತಂದೆ ತಾಯಿಗಳು ಅವಳ ಗಂಡನ ಊರಿಗೆ ಹೋಗಿ ನಮ್ಮ ಹುಡುಗಿ ದೊಡ್ಡವಳಾಗಿ ತಿಂಡಿ ತಿನ್ನು ಹಾಗೆ ಆಗಿದ್ದಾಳೆ. ಬಟ್ಟೆ ಕಟ್ಟುವಳು ಆಗಿದ್ದಾಳೆ. ಎಂದು ಹೇಳಿಬರುತ್ತಾರೆ. ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಮಧ್ಯರಾತ್ರಿಯಲ್ಲಿ ವಿವಾಹ, ನಡೆಯುತ್ತವೆ (ಲಂಬಾಣಿ ಸಮುದಾಯ ಮತ್ತು ಇತರ ಬುಡಕಟ್ಟು ಸಮುದಾಯ ಹಾಗೂ ಅಲೆಮಾರಿಗಳಲ್ಲಿ) ಇವರು ಅಂದರೆ ಕೆಲವು ಬುಡಕಟ್ಟುಗಳಲ್ಲಿ ಮದುವೆಗೆ ಒಳ್ಳೆಯ ಕೆಟ್ಟ ದಿನಗಳನ್ನು ನೋಡುವುದಿಲ್ಲ. ಸಾಮಾನ್ಯವಾಗಿ ವಧುವಿನ ಮನೆಯ ಮುಂದೆಯೇ ವರನು ಬಂದು ಬಿಡಾರ ಹಾಕಿಕೊಂಡು ಮದುವೆ ನಡೆಸುತ್ತಾರೆ. ಮತ್ತು ಬೆಡಗಿನವರೊಂದಿಗೆ ವಿವಾಹ ಸಂಬಂಧ ನಿಷೇಧಿಸುವ ಭಿನ್ನಬೆಡಗಿನ ವಿವಾಹ ಪ್ರಗತಿಯನ್ನು ಅನುಸರಿಸುತ್ತಾರೆ. ಭಾರತದಲ್ಲಿ ಭಿನ್ನ ಬೆಡಗು ವಿವಾಹ ಸಂಬಂಧಗಳನ್ನು ರಕ್ತ ಸಂಬಂಧ ದೇವತೆ ಪ್ರಾದೇಶಿಕ ಗುಂಪು ಮತ್ತು ಗೋತ್ರ ಎಂಬ ಪದಗಳಿಂದ ವಿವರಿಸಲಾಗಿದೆ. ಈಗೇ ಅನೇಕ ತರಹದ ವಿವಾಹ ಪದ್ಧತಿಗಳು ಭಾರತದಲ್ಲಿ ಭಿನ್ನ ರೀತಿಯಲ್ಲಿ ಪ್ರತಿಯೊಂದು ಸಮುದಾಯಗಳಲ್ಲಿ ಅವರದೇಯಾದ ರೀತಿಯಲ್ಲಿ ನಡೆಯುತ್ತವೆ. ಅದರ ಜೊತೆಗೆ ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳು ಕೂಡ ಒಂದೊಂದು ಸಮುದಾಯ ಒಂದೊಂದು ರೀತಿಯಲ್ಲಿ ವಿವಾಹ ಪದ್ಧತಿಯು ಬೇರೆ ಬೇರೆ ರೀತಿಯಲ್ಲಿ ನಡೆಯತ್ತದೆ ಎಂದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.[೧೦]

ಜಾತಿ ವ್ಯವಸ್ಥೆ

"ಭಾರತದಂತಹ ವಿಶಾಲವಾದ, ಸಂಕೀರ್ಣ ಭೌಗೋಳಿಕ ರಚನೆಯು, ಬಹು ಸಂಸ್ಕೃತಿಗಳ, ಜಾತಿ, ಭಾಷೆಗಳ ಸಂಗಮವಾದ ನಾಡಾಗಿದೆ. ಜಾತಿ ಎಂಬುದು ಭಾರತೀಯರೆಲ್ಲರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಹಾಗೂ ಅದರ ಎಲ್ಲಾ ಚಟುವಟಿಕೆಗಳಲ್ಲಿ ಕಾಣಿಸಿಕೊಳ್ಳುವ ಒಂದು ಪ್ರಧಾನ ವ್ಯವಸ್ಥೆಯಾಗಿದೆ. ಧರ್ಮ, ಸಂಪ್ರದಾಯ, ಆಚರಣೆಗಳು, ಭಾಷೆ ಇನ್ನಿತರ ಎಲ್ಲಾ ಚಟುವಟಿಕೆಗಳೂ ಕಾರ್ಯಾಗಳೂ ಜಾತಿಯಿಂದ ನಿರ್ಧರಿಸಲ್ಪಟ್ಟಿವೆ. ಒಬ್ಬ ವ್ಯಕ್ತಿಯ ಹೆಸರು,

ವ್ಯಕ್ತಿ, ವಂಶ, ವಧುವರರ ಆಯ್ಕೆ ಜಾತಿಯಿಂದಲೇ ನಿರ್ಧಾರವಾಗುವಂಥವು, ಭಾರತದಲ್ಲಿ ಜಾತಿಯ ಉಗಮಕ್ಕೆ ಆರ್ಯರು ಕಾರಣವೆಂದು ಊಹಿಸಲಾಗಿದೆ. ಕಾಲಕ್ರಮೇಣ ಮೂಲ ವರ್ಣವ್ಯವಸ್ಥೆಯು ಕಾರಣಾಂತರಗಳಿಂದ ಭಾಗ ಉಪವಿಭಾಗಗಳಾಗಿ ಬೇರ್ಪಟ್ಟಿತು. ಈ ಭಾಗ ಉಪವಿಭಾಗಗಳೇ ಬಳಿಕ ಜಾತಿ ಉಪಜಾತಿಗಳಾಗಿ ಮಾರ್ಪಾಡುಗೊಂಡು, ಭಾರತೀಯ ಸಮಾಜ, ಇಂದಿನ ದಿನಗಳಲ್ಲಿ, ಜಾತಿ ವ್ಯವಸ್ಥೆ ಬೇರುಗಳ ಕವಲುಗಳನ್ನು ತನ್ನಲ್ಲಿ ಅಡಕಗೊಳಿಸಿಕೊಂಡಿದೆ. ಇದರಿಂದಾಗಿ ಜಾತಿಪದ್ಧತಿಗೆ ಸಮಗ್ರ ಭಾರತೀಯರ ವೈಯುಕ್ತಿಕ ಹಾಗೂ ಸಾಮಾಜಿಕ ಸಾಂಸ್ಕೃತಿಕ ಬದುಕಿನಲ್ಲಿ ಜನರ ಕಾರ್ಯಗಳನ್ನು ಕ್ರಮಬದ್ಧಪಡಿಸುವ, ನಿರ್ದೇಶಿಸುವ ನಿಯಂತ್ರಿಸುವ ಒಂದು ಪ್ರಮುಖ ವ್ಯವಸ್ಥೆಯಾಗಿ ಬೆಳೆಯಲು ಸಾಧ್ಯವಾಗಿದೆ.[೧೧] ಆದರೆ ಅಂದು ವಿಜಯನಗರ ಕಾಲದ, ರಾಜದಾನಿಯಾದ ಹಂಪಿಯಲ್ಲಿ ಅನೇಕ ಜಾತಿ ಸಮುದಾಯಗಳು ವಾಸಿಸುತ್ತಿರುವುದು ಅಧ್ಯಯನಗಳಿಂದ ತಿಳಿಯುತ್ತದೆ ಆದರೆ ಕೆಲವು ಸಮುದಾಯಗಳು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಿದ್ದವು. ಆದರೆ ಈ ವ್ಯವಸ್ಥೆಗೆ ಒಳಪಡಲಿಲ್ಲ. ಅವು ಬುಡಕಟ್ಟು ಸಮುದಾಯಗಳು ಎಂದು ಹೇಳಬಹುದು ಪ್ರಸ್ತುತ ಈ ಪರಿಸರದಲ್ಲಿ ವಾಸಿಸುವ ಸುಮಾರು ಬುಡಕಟ್ಟು ಸಮುದಾಯಗಳು ಈ ಸಾಮ್ರಾಜ್ಯ ಅಳಿದ ಅಥವಾ ನಿರ್ನಾಮವಾದ ನಂತರ ಈ ಪ್ರದೇಶಕ್ಕೆ ಅಲೆಮಾರಿ ಬುಡಕಟ್ಟು ಸಮುದಾಯಗಳು ವಲಸೆ ಬಂದು ನೆಲೆನಿಂತಿವೆ. ಎಂದು ಕ್ಷೇತ್ರಕಾರ್ಯದಿಂದ ತಿಳಿದೇ ಬರುತ್ತದೆ. ''ಭವ್ಯ-ಸುಂದರ-ವೈಭವದ ಸಾಮ್ರಾಜ್ಯವೆಂದು ಇತಿಹಾಸಕಾರರಿಂದ ಕರೆಸಿಕೊಂಡ ವಿಜಯನಗರ ಸಾಮ್ರಾಜ್ಯದ ನಿಜವಾದ ಭವ್ಯತೆ ಸುಂದರತೆಯ ಹಾಗೂ ಅದರ ಉಜ್ವಲವಾದ ಸಂಸ್ಕೃತಿಯನ್ನು ನಿರ್ದಿಷ್ಟ ಅರ್ಥ ಮಾಡಿಕೊಳ್ಳಲು ಅಂದಿನ ಕಾಲದಲ್ಲಿದ್ದ ಜಾತಿವ್ಯವಸ್ಥೆ ಹಾಗೂ ಅದರ ವಿವಿಧ ಸ್ತರಗಳ ಅಧ್ಯಯನವು ಅತ್ಯವಶ್ಯಕವೆನ್ನಿಸುತ್ತದೆ. ವಿಜಯನಗರದಲ್ಲಲ್ಲದೆ ಭಾರತ ಖಂಡದಲ್ಲಿಯೇ ಜಾತಿಯು ಸಮಾಜದ ಮೂಲಭೂತ ಹಾಗೂ ವಿಶಿಷ್ಟವಾದ ಸಂಸ್ಥೆಯಾಗಿ ಬೆಳೆದು ಬಂದಿದೆ. ಎಂದರೆ ತಪ್ಪಾಗದು. ಏಕೆಂದರೆ ಭಾರತ ಜಾತಿ ವ್ಯವಸ್ಥೆಯನ್ನು ಹೋಲುವ ಕೆಲವು ಪದ್ಧತಿಗಳಂತೂ ಪ್ರಪಂಚದ ಇತರೆ ಭಾಗಗಳಲ್ಲಿ ಹೆಚ್ಚಾಗಿ ಕಂಡು ಬರುವುದೇ ಇಲ್ಲ. (ಜಪಾನ್, ಇಂಡೋಚೈನ, ಇಂಡೋ ನೇಷ್ಯ, ಬಲೋಚಿಸ್ಥಾನ ಮುಂತಾದವುಗಳಲ್ಲಿ ಅಲ್ಲಿ ಪ್ರಮಾಣದಲ್ಲಿ ಕಾಣಬಹುದು.) ವಿಜಯನಗರ ಸಾಮ್ರಾಜ್ಯದಲ್ಲಿ ಜಾತಿಯು ಸಾಮ್ರಾಜ್ಯದ ಹಾಗೂ ಸಮಾಜದ ವಿಶಿಷ್ಟ ಸಂಸ್ಥೆಯಾಗಿತ್ತೆಂದು ಹೇಳಿದರೆ ತಪ್ಪಾಗಲಾರದು.[೧೨]

''ಜಾತಿ ಪದ್ಧತಿಯು ವಿಜಯನಗರ ಸಾಮ್ರಾಜ್ಯದಾದ್ಯಂತ ಸಾಮಾಜಿಕ ಸಂಘಟನೆಯ ಎಲ್ಲಾ ಮೂಲಗಳಲ್ಲಿಯೂ ತನ್ನದೇ ಆದ ರೀತಿಯಲ್ಲಿ ಆಕ್ರಮಿಸಿಕೊಂಡಿತು. (ಇಂದು ಅಂದಿಗಿಂತಲೂ ಹೆಚ್ಚಾಗಿಯೇ ಆಕ್ರಮಿಸಿಕೊಳ್ಳುತ್ತಿದೆ.) ಅಂದಿನ ಇತಿಹಾಸಕ್ಕೆ ಸಂಬಂಧಿಸಿದ

ಏನೆಲ್ಲಾ ದಾಖಲೆಗಳು ದೊರಕಿಸಿದರೂ ಸಹ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ, ಜಾತಿಯಿಂದ ಪ್ರಭಾವಿತವಾಗಿರದ ಅಂಶಗಳು ವಿರಳವೆಂದೇ ಹೇಳಬಹುದು. ಜನರು ಆಚರಿಸಿಕೊಂಡು ಬರುತ್ತಿದ್ದ ಸಂಪ್ರದಾಯಗಳು, ಹಬ್ಬ, ಹರಿದಿನ, ಜಾತ್ರೆ ಉತ್ಸವ ಮುಂತಾದವುಗಳು ಹೇಗೆ ತಮ್ಮ ಜೀವನದಲ್ಲಿ ಮಹತ್ವದ ಸ್ಥಾನವನ್ನು ಹೊಂದಿವೆಯೋ ಹಾಗೆಯೇ ಸಾಮಾಜಿಕ ವ್ಯವಸ್ಥೆಯ ಆದಿ ಮತ್ತು ಅಂತ್ಯ ಎಲ್ಲವೂ ಕೂಡ ಜಾತಿಯೇ ಆಗಿತ್ತೆಂದರೆ, ಉತ್ಪ್ರೇಕ್ಷೆಯೆನಿಸಲಾರದೇನೋ, ಇದು ಒಂದು ರೀತಿಯಲ್ಲಿ ಹಿಂದೂ ಧರ್ಮದ ಹಕ್ಕನ್ನು ನಿರ್ಧರಿಸುತ್ತದೆನ್ನಬಹುದು. ಒಬ್ಬ ಹಿಂದೂ ಧರ್ಮಿಯನು ಜನನದಿಂದ ಮರಣದವರೆಗೂ ಮತ್ತು ಅದರಾಚೆಯೂ ಕೂಡ ಜಾತಿಯ ಆಧಾರದಲ್ಲಿಯೇ ಬದುಕುವಂತಾಗಿದೆ. ಹೀಗಾಗಿ ಅಂದು ಜಾತಿಯೇ ಎಲ್ಲವನ್ನು ನಿರ್ಧರಿಸುತ್ತಿತ್ತು. ಉದಾಹರಣೆಗೆ: ಒಬ್ಬ ವ್ಯಕ್ತಿ ಯಾರನ್ನು ಮದುವೆಯಾಗಬೇಕು, ಹೇಗೆ ಮದುವೆಯಾಗಬೇಕು, ಎಲ್ಲಿ ವಾಸಿಸಬೇಕು, ಹೇಗೆ ಬದುಕಬೇಕು, ಏನನ್ನು ತಿನ್ನಬೇಕು, ಹೇಗೆ ತಿನ್ನಬೇಕು, ಎಲ್ಲಿ ಕೆಲಸ ಮಾಡಬೇಕು, ಹೇಗೆ ಕೆಲಸ ಮಾಡಬೇಕು, ಎಲ್ಲಿ ಹಾಗೂ ಹೇಗೆ ಅವನು ಸಾಯಬಹುದು. ಅವನನ್ನು ಎಲ್ಲಿ ಶವಸಂಸ್ಕಾರ ಮಾಡಬೇಕು. ಹೇಗೆ ಮಾಡಬೇಕು ಹಾಗೂ ಇನ್ನೂ ಮುಂದುವರೆದು ಸಾವಿನ ನಂತರ ಅವನಿಗೆ ಏನಾಗುತ್ತದೆ ಎನ್ನುವ ಪ್ರತಿಯೊಂದು ವಿಷಯವೂ ಕೂಡ ಜಾತಿಯಿಂದಲೇ ನಿರ್ಣಯವಾಗುತ್ತಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ ವಿಜಯನಗರದರಸರ ಕಾಲದಲ್ಲಿ ಜಾತಿಯೇ ಅಂದಿನ ಜೀವನದ ಎಲ್ಲಾ ಅಂಶಗಳನ್ನು ನಿರ್ಧರಿಸುತ್ತಿತ್ತೆನ್ನಬಹುದು.[೧೩]

ಇಂತಹ ಒಂದು ಜಾತಿ ವ್ಯವಸ್ಥೆಯನ್ನು ಹಂಪಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳಾದ ಲಂಬಾಣಿ (ಕೆರೆತಾಂಡ) ಬೇಡರು (ಊರು ಬೇಡ ಮ್ಯಾಸ ಬೇಡ ಕಮಲಾಪುರ) ದುರುಗ ಮುರುಗಿ (ಕಮಲಾಪುರ) ಹಕ್ಕಿಪಿಕ್ಕಿ (ಕಂಪ್ಲಿ) ಮತ್ತು ಇತರ ಅಲೆಮಾರಿ ಸಮುದಾಯಗಳು ಕೂಡ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ವೆಂಕಟಾಪುರ, ಬುಕ್ಕಸಾಗರ ಗಳಲ್ಲಿ ಕಂಡು ಬರುವ ಕೆಲವು ಅಲೆಮಾರಿ ಬುಡಕಟ್ಟು ಸಮುದಾಯಗಳು ಸಾಮಾಜಿಕ, ಸ್ಥಿತಿಗತಿಯ ಬಗ್ಗೆ ಮುಖ್ಯವಾಗಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

ಮೇಲೆ ಕಾಣಿಸಿರುವ ಎಲ್ಲಾ ಅಂಶಗಳನ್ನು ಅಥವ ವಿಚಾರಗಳನ್ನು ಗಮನಿಸಿದಾಗ ತಿಳಿದು ಬರುವ ಪ್ರಮುಖ ಅಂಶಗಳಿವು ಶಿಷ್ಟ ಸಮಾಜಗಳಿದ ದೂರವಾಗಿ, ಅವರಿಗಿಂತ ಭಿನ್ನವಾದ ಜೀವನ ಜೀವನಕ್ರಮವನ್ನು ರೂಪಿಸಿಕೊಂಡು ಬದುಕುತ್ತ, ತಮ್ಮದೇ ಆದ ವಿಶಿಷ್ಟ, ಸಾಂಸ್ಕೃತಿಕ ಮೌಲ್ಯಗಳನ್ನು ಇಂದಿನ ದಿನಗಳಲ್ಲೂ ಜೀವಂತವಾಗಿ ಉಳಿಸಿಕೊಂಡು ಬೆಳೆಸಿಕೊಂಡು ಬಂದಿರುವ ಒಂದು ನಿರ್ದಿಷ್ಟ ಗುಂಪನ್ನು "ಬುಡಕಟ್ಟು" ಎಂದು ಕರೆಯಬಹದು. ಇವು ಈ ರಾಜ್ಯದಲ್ಲಿ ಐವತ್ತಕ್ಕೂ ಹೆಚ್ಚು ಬುಡಕಟ್ಟುಗಳನ್ನು ಗುರುತಿಸಬಹುದು. ಇವನ್ನು ಸಮಾಜ

ವಿಜ್ಞಾನಗಳು ನಿರ್ವಚಿಸುವ "ಬುಡಕಟ್ಟು" ಲಕ್ಷಣಗಳಿಗೆ ಹೋಲಿಸಲು ಸಾಧ್ಯವೇ ಇಲ್ಲ ಎನ್ನುವಷ್ಟು ದೂರದಲ್ಲಿವೆ.

ನಗರಗಳಲ್ಲಿ, ಹಳ್ಳಿಗಳಲ್ಲಿ ವಾಸಮಾಡುವ ಜನರನ್ನು ಬಿಟ್ಟು, ಉಳಿದಂತೆ ಸಾಗರಗಳ ನಡುವಣ ದ್ವೀಪಗಳಲ್ಲಿ, ಬೆಟ್ಟಗುಡ್ಡಗಳಲ್ಲಿ, ಕಾಡುಗಳಲ್ಲಿ, ಮರಳುಗಾಡುಗಳಲ್ಲಿ ಉಳಿದೆಲ್ಲಾ ಜನರಿಂದಲೂ ದೂರವಾಗಿ, ಪ್ರತ್ಯೇಕವಾಗಿ, ವಾಸಿಸುವ, ಪ್ರತ್ಯೇಕ ಸಂಸ್ಕೃತಿಯುಳ್ಳ ಜನರ ಸಮಾಜಗಳನ್ನು ಬುಡಕಟ್ಟುಗಳು ಎಂದು ಕರೆಯಲಾಗಿದೆ. ಈ ಸಮಾಜಗಳಲ್ಲಿ ರಕ್ತ ಸಂಬಂಧ ಅತ್ಯಂತ ಮುಖ್ಯವಾಗಿದ್ದು, ವ್ಯಕ್ತಿ-ವ್ಯಕ್ತಿಗಳ ಸಂಬಂಧಗಳು ಗಾಢವಾಗಿದ್ದು, ಸಾಂಸ್ಕೃತಿಕವಾಗಿ ಅತ್ಯಂತ ಬಿಗಿಕಟ್ಟಾದ ನಿಯಮಗಳಿದ್ದು, ಹೊರಗಿನ ಯಾರನ್ನು ಅನುಮಾನದಿಂದಲೇ ನೋಡುವ ಪ್ರವೃತ್ತಿ ಇರುತ್ತದೆ. ಈ ಜನರಿಗೆ ಪ್ರತ್ಯೇಕವಾದ ಭಾಷೆ ಮತ್ತು ಜೀವನಕ್ರಮಗಳಿರುತ್ತವೆ." ಎಂದು ಬುಡಕಟ್ಟು ಲಕ್ಷಣಗಳನ್ನು ಸ್ಥೂಲವಾಗಿ ಕ್ರೋಢೀಕರಿಸಬಹುದು. ಹೀಗೆ ನಗರ ಸಾಂಸ್ಕೃತಿಯ ಪ್ರಭಾವದಿಂದ ತಪ್ಪಿಸಿಕೊಂಡು ದಟ್ಟಕಾಡು ಮೇಡುಗಳಲ್ಲಿ ಗುಡ್ಡಗಾಡು ಪ್ರದೇಶಗಳಲ್ಲಿ ದ್ವೀಪಗಳಲ್ಲಿ ವಾಸಿಸುತ್ತ ತಮ್ಮದೇ ಆದ ಆಚಾರ ವಿಚಾರ, ದೈವ, ಮೂಲ ಪುರುಷ, ನಂಬಿಕೆ ಆಚರಣೆ, ಉಡುಗೆ ತೊಡುಗೆ, ಮಾಟ ಮಂತ್ರ, ಆಹಾರ, ಪಾನೀಯಗಳನ್ನು ನಿರ್ದಿಷ್ಟ ಸಾಮಾಜಿಕ ಕಟ್ಟುಪಾಡುಗಳನ್ನು ರೂಪಿಸಿಕೊಂಡು ಬದುಕುತ್ತಿರುವುದು ಕಂಡುಬರುತ್ತದೆ.

ನಾಗರೀಕತೆಗಿಂತ ಭಿನ್ನವಾದ ಬದುಕಿನ ಸ್ಥಿತಿಗತಿಗಳನ್ನು ಸಾಂಸ್ಕೃತಿಕ ಮಾನವಶಾಸ್ತ್ರದ ಬೆಳಕಿನಲ್ಲಿ ಅಭ್ಯಸಿಸುವ ಕ್ರಮ ಪಾಶ್ಚಾತ್ಯರಲ್ಲಿ ಕಳೆದ ಶತಮಾನದಿಂದಲೇ ಆರಂಭವಾಯಿತು. ಮೇಲಿನೋವ್‌ಸ್ಕಿ, ರ‍್ಯಾಡ್ ಕ್ಲಿಪ್ ಬ್ರೌನ್, ರೂತ್‌ಬೆನೆಡಿಕ್ಟ್, ಮಾರ್ಗರೇಟ್ ಮೀಡ್ ಮೊದಲಾದ ವಿದ್ವಾಂಸರು ಈ ನಿಟ್ಟಿನಲ್ಲಿ ಮಹತ್ವದ ಸಂಶೋಧನೆ ನಡೆಸಿ ಹೊಸ ಹೊಸ ವಿಚಾರಗಳನ್ನು ಪ್ರಕಟಪಡಿಸಿದ್ದಾರೆ. ಬುಡಕಟ್ಟು ಜನರ ಸಾಂಸ್ಕೃತಿಕ ವೈವಿಧ್ಯತೆಗಳಿಗೆ ಕಾರಣವಾದ ಪ್ರಾಕೃತಿಕ ವೈವಿದ್ಯತೆಗಳಿಗೆ ಕಾರಣವಾದ ಪ್ರಾಕೃತಿಕ, ಸಾಮಾಜಿಕ, ಮಾನಸಿಕ ಕಾರಣಗಳನ್ನು ಪತ್ತೆ ಹಚ್ಚಿದ್ದಾರೆ. ಭಾರತದಲ್ಲಿ ಈ ಬಗೆಯ ಅಧ್ಯಯನಗಳು ಯಾವಾಗ ಆರಂಭವಾಯಿತೆಂದು ಖಚಿತವಾಗಿ ಹೇಳಲು ಸಾಧ್ಯವಾಗದಿದ್ದರೂ ಕಳೆದ ಶತಮಾನದ ಆದಿಯಲ್ಲೇ ವಿಷಯ ತಿಳಿದುಬರುತ್ತದೆ. ಸರ್ ಹರ್ಬರ್ಟ್ ರಿಸ್ಲೆಯವರು ಭಾರತಾದ್ಯಂತ ಎಲ್ಲ ರಾಜ್ಯವನ್ನೊಳಗೊಂಡಂತೆ, ಆಯಾ ರಾಜ್ಯಗಳಲ್ಲಿಯ ಬುಡಕಟ್ಟು ಮತ್ತು ಜಾತಿಗಳ ಜನಸಂಖ್ಯೆಯನ್ನು ನೆಲೆಗಳನ್ನು ದಾಖಲಿಸಿದ್ದಾರೆ. ಇಷ್ಟೇ ಅಲ್ಲದೆ ಆ ಜನರ ಸಂಪ್ರದಾಯಗಳನ್ನು ಅಭ್ಯಸಿಸಿ ಬೃಹತ್ ಸಂಪುಟಗಳ ಮೂಲಕ ಪ್ರಕಟಿಸಿದ್ದಾರೆ. ೧೯೦೩ರಲ್ಲಿ ಮೈಸೂರು ರಾಜ್ಯದಲ್ಲಿ ಎಚ್.ವಿ. ನಂಜುಂಡಯ್ಯನವರ ಮಾರ್ಗದರ್ಶನದಲ್ಲಿ ಆಗಿನ ಮೈಸೂರಿನ ಬುಡಕಟ್ಟುಗಳ ಬಗ್ಗೆ ಮಾನವಶಾಸ್ತ್ರೀಯ ಸಮೀಕ್ಷೆ ಆರಂಭಗೊಂಡು ಹದಿನೇಳು ವರ್ಷಗಳ ದೀರ್ಘಕಾಲ ನಡೆಯಿತು. ಈ ಅವಧಿಯಲ್ಲಿ ಅವರು

ಹೊರತಂದ ಸಂಪುಟಗಳ ಸಂಖ್ಯೆ ಮೂವತ್ತನಾಲ್ಕು ತರುವಾಯ ಮೈಸೂರು ಸಂಸ್ಥಾನದ ಒಡೆಯರ ನೇತೃತ್ವದಲ್ಲಿ ಈ ಕ್ಷೇತ್ರ ಕಾರ್ಯಗಳಿಗೆ ಉತ್ತೇಜನ ದೊರಕಿತು. ಅನಂತರ ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು ಈ ಕ್ಷೇತ್ರವನ್ನು ಮುಂದುವರಿಸಿ, ಸಂಗ್ರಹವಾದ ದತ್ತವನ್ನು ಪರಿಶೀಲಿಸಿ ಪರಿಷ್ಕರಿಸಿ ಹತ್ತು ವರ್ಷಗಳ ಕಾಲ ಶ್ರಮಿಸಿ The Mysore Tribes and castes ಎಂಬ ಹೆಸರಿನಲ್ಲಿ ನಾಲ್ಕು ಸಂಪುಟಗಳನ್ನು ಹೊರತಂದರು. ಇದರೊಂದಿಗೆ ಅಪರಾಧಿ ಬುಡಕಟ್ಟುಗಳೆಂದೇ ಗುರುತಿಸಲ್ಪಟ್ಟು ಕೆಲವು ಬುಡಕಟ್ಟುಗಳ ಅಧ್ಯಯನ ಕೂಡ ಸಾಧ್ಯವಾಗಿದೆ. ಈ ಸಂಪುಟಗಳಲ್ಲಿ ಜಾತಿವಾರು ಮತ್ತು ಬುಡಕಟ್ಟುಗಳ ಅಧ್ಯಯನ ಕೂಡ ಸಾಧ್ಯವಾಗಿದೆ. ಈ ಸಂಪುಟಗಳಲ್ಲಿ ಜಾತಿವಾರು ಮತ್ತು ಬುಡಕಟ್ಟುಗಳ ಜನಸಂಖ್ಯೆ, ವಾಸಸ್ಥಳ, ಸಂಪ್ರದಾಯಗಳನ್ನು ತಿಳಿಸಿಕೊಡಲಾಗಿದೆ. ಹೀಗೆ ಹಲವಾರು ಅಧ್ಯಯನಗಳು ಕರ್ನಾಟಕದಲ್ಲಿ ನಡೆದುಕೊಂಡು ಬಂದಿದ್ದರಿಂದ ಕರ್ನಾಟಕದ ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳಿಗೆ ಪ್ರಸ್ತುತವಾಗಿ ಇಂದಿನ ಸರ್ಕಾರವು ಕೆಲವು ಬುಡಕಟ್ಟು, ಹಾಗೂ ಅಲೆಮಾರಿಸಮುದಾಯಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದೂಳಿದ ವರ್ಗಗಳ ಪಟ್ಟಿಯಲ್ಲಿ ಗುರುತಿಸಿ ಅವುಗಳಿಗೆ ಸ್ವಂತ ಜಾಗ (ಮನೆ ಭೂಮಿ) ಹಾಗೂ ಮೂಲಭೂತ ಸೌಲಭ್ಯಗಳನ್ನು ನೀಡುವಲ್ಲಿ ಮುಂದಾಗಿದೆ. ಆದರೂ ಸಹ ಇದು ಬೆರಳೆನಿಕೆಯಷ್ಟು ಮಾತ್ರ ಸಾಧ್ಯವಾಗಿದೆ ಎಂದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಏಕೆಂದರೆ ನಾನು ಅಧ್ಯಯನಕ್ಕೆ ತೆಗೆದುಕೊಂಡು ಹಂಪಿ ಪರಿಸರದಲ್ಲಿ ಬರುವಂತ ಕೆಲವು ಬುಡಕಟ್ಟುಗಳನ್ನು ಸಂದರ್ಶಿಸಿದಾಗ ಮೊದಲು ಕಂಪ್ಲಿಯಲ್ಲಿ ಇರುವ ಹಕ್ಕಿಪಿಕ್ಕಿ, ದುರುಗ ಮುರಗಿ, ಸುಡುಗಾಡು ಸಿದ್ಧರು, ಹೇಳವರು, ಇತರ ಅಲೆಮಾರಿಗಳನ್ನು ಬೆಟ್ಟಿಕೊಟ್ಟಾಗ ಅವುಗಳ ಅಥವಾ ಅವರುಗಳು ವಾಸಿಸುವ ಜಾಗ, ಇನ್ನು ಕೆಲವು ಕುಟುಂಬಗಳಿಗೆ, ಸ್ವಂತ ಜಾಗ, ಮನೆ, ಹೀಗೆ ಕೆಲವು ಮೂಲಭುತ ಸೌಲಭ್ಯಗಳು ದೊರೆಯದೆ ಅತಂತ್ರ ಸ್ಥಿತಿಯಲ್ಲಿ ಇರುವುದು ಕಂಡುಬರುತ್ತದೆ. ಹಾಗೇ ಇದರಂತೆ ವೆಂಕಟಾಪುರ, ಬುಕ್ಕಸಾಗರ ಹೀಗೆ ಇರುವುದು ಉಂಟು.

ಕಮಲಾಪುರದಲ್ಲಿ ಬರುವಂತ ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳು ಸಂದರ್ಶಿಸಿದಾಗ ಇಲ್ಲಿನ ಬೇಡಬುಡಕಟ್ಟು (ಊರು ಬೇಡ, ಮ್ಯಾಸ ಬೇಡ) ಬೇಟಿ ಕೊಟ್ಟಾಗ ಇವರಿಗೆ ಮೂಲಭುತ ಸೌಲಭ್ಯಗಳು ದೊರೆತಿರುವುದು ಕಂಡುಬರುತ್ತದೆ. ಆದರೆ ಇವರಲ್ಲಿ ಕೆಲವು ಕುಟುಂಬವರ್ಗದವರಿಗೆ ಯಾವುದೇ ಭೂಮಿ ಇರುವುದಿಲ್ಲ. ಆದ್ದರಿಂದ ಇವರು ಕೂಲಿ ಕಾರ್ಮಿಕರಾಗಿ, ದಿನಗೂಲಿಗರಾಗಿ ಕೆಲವು ಸಣ್ಣ ಪುಟ್ಟ ವ್ಯಾಪಾರವನ್ನು ಮಾಡುತ್ತಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಆದರೆ ಅಂದು ವಿಜಯನಗರದ ಕಾಲದಲ್ಲಿ ಸೈನಿಕರಾಗಿ, ಮಂತ್ರಿಗಳಾಗಿ ಕಾರ್ಯನಿರ್ವಹಿಸಿರುವುದು ಇತಿಹಾಸದಿಂದ ತಿಳಿಯುತ್ತದೆ. ಹಾಗೂ ಕೆಲವು

ಕುಟುಂಬಗಳು ಅತಂತ್ರ ಸ್ಥಿತಿಯ ಬದುಕು ಕೂಡ ಇತ್ತು. ಆದ್ದರಿಂದ ಇಂದು ಕೂಡ ಕಮಲಾಪುರದಲ್ಲಿ ಬೇಡ ಬುಡಕಟ್ಟುಗಳು ಪ್ರತಿಯೊಂದು ಕುಟುಂಬಗಳು ಬದುಕು ಏರಿಳಿತಗಳಿಂದ ಇರುವುದು ಪ್ರಸ್ತುತ ಅಧ್ಯಯನದಿಂದ ತಿಳಿಯುತ್ತದೆ. ಹಾಗೂ ಈ ಸ್ಥಳದಲ್ಲಿ ಇನ್ನೊಂದು ಅಲೆಮಾರಿ ಸಮುದಾಯ ದುರುಗ ಮುರುಗಿ ಅಲೆಮಾರಿ ಸಮುದಾಯವು ಕಾಲಗತಿಯಲ್ಲಿ ಇದು ಅನೇಕ ಕಷ್ಟಕಾರ್ಪಣ್ಯಗಳಿಂದ ಬದುಕುತ್ತಿರುವುದು ದುರಂತದ ಸಂಗತಿ ಎಂದು ಹೇಳಬಹುದು. ಒಟ್ಟಿನಲ್ಲಿ ಹಂಪಿ ಪರಿಸರದ ಸುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯಗಳು ಅಂದಿನಿಂದ ಇಂದಿನವರೆಗೂ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿರುವುದು ಕಂಡುಬರುತ್ತದೆ.

ಈ ಮೇಲೆ ಹೇಳಿಕೆಯನ್ನು ಗಮನಿಸಿದಾಗ ಬುಡಕಟ್ಟುಗಳು ಹಾಗೂ ಇತರ ಅಲೆಮಾರಿ ಸಮುದಾಯಗಳು ಈ ಪ್ರದೇಶದಲ್ಲಿ ಕಂಡುಬರುವ ಹಾಗೆ ಪ್ರಸ್ತುತವಾಗಿ ಹೆಳುವುದಾದರೆ ಭಾರತದಲ್ಲಿ ಬಹುಸಂಸ್ಕೃತಿಯ ನಾಡಾಗಿದೆ ಎಂದು ಎಲ್ಲರಿಗೂ ಗೊತ್ತಿರುವ ವಿಷಯ ಆದರೆ ಬುಡಕಟ್ಟುಗಳು ಹೊರತು ಪಡಿಸಿ ಗುರುತಿಸಿಕೊಂಡಿದೆ. ಆದರೆ ಇಂದಿನ ಅಧ್ಯಯನಗಳಿಂದ ರಾಜ್ಯದಲ್ಲಿವಾಸಿಸುವ ಬುಡಕಟ್ಟು ಹಾಗೂ ಇತರ ಅಲೆಮಾರಿ ಸಮುದಾಯಗಳು ಕೆಲವು ಪ.ಜಾ/ಪ.ಪಂ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿಸಲಾಗಿದೆ. ಇಲ್ಲಿ ನನ್ನ ಅಧ್ಯಯನಕ್ಕೆ ಒಳ ಪಟ್ಟ ಸಮುದಾಯಗಳನ್ನು ಮಾತ್ರ ಗುರುತಿಸಿಕೊಂಡು ಚರ್ಚಿಸಲಾಗಿದೆ. ಕಾರಣ ಭಾರತದಲ್ಲಿ ಕೆಲವು ರಾಜ್ಯಗಳಲ್ಲಿ ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳು ಒಂದು ರಾಜ್ಯದಲ್ಲಿ ಒಂದು ಪಟ್ಟಿಗೆ ಸೇರಿದರೆ ಮತ್ತೊಂದು ರಾಜ್ಯದಲ್ಲಿ ಬೇರೆ ಪಟ್ಟಿಗೆ ಸೇರಿಕೊಂಡಿವೆ. ಆಯಾ ರಾಜ್ಯಗಳಲ್ಲಿ ವಾಸಿಸುವ ಬುಡಕಟ್ಟು ಅಲೆಮಾರಿ ಸಮುದಾಯಗಳ ಆರ್ಥಿಕ ಬಲ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಅಥವಾ ಆಯಾ ರಾಜ್ಯದ ಸಮುದಾಯಗಳ ಹೋರಾಟದ ಫಲದಿಂದ ಪಡೆದುಕೊಂಡಿವೆ. ಆದ್ದರಿಂದ ಕರ್ನಾಟಕ ರಾಜ್ಯದ ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳನ್ನು ಮಾತ್ರ ಅದರಲ್ಲೂ ಹಂಪಿಯ ಸುತ್ತಮುತ್ತಲಿನ ಪರಿಸದಲ್ಲಿ ನೆಲೆನಿಂತಿರುವ ಸಮುದಾಯಗಳಾದ ಕಮಲಾಪೂರದ ಬೇಡ ಬುಡಕಟ್ಟು (ಮ್ಯಾಸ ಬೇಡ, ಊರ ಬೇಡ) ಎಸ್.ಟಿ. ದುರುಗ ಮುರಗಿ, ಎಸ್.ಸಿ, ಕಂಪ್ಲಿ ಹಕ್ಕಿಪಿಕ್ಕಿ, ಎಸ್.ಟಿ., ವೆಂಕಟಾಪುರ, ಬುಕ್ಕಸಾಗರ ಅಲೆಮಾರಿಗಳಾದ ಗೊಸಂಗಿ, ಎಸ್.ಟಿ, ದುರಗಮುರಗಿ ಎಸ್.ಸಿ. ಕೆರೆತಾಂಡ ಲಂಬಾಣಿ ಎಸ್.ಸಿ., ಹಂಪಿಯಲ್ಲಿ ಶಿಳ್ಳೆಕ್ಯಾತ, ಎಸ್.ಸಿ. ಬೇಡರು ಎಸ್.ಟಿ. ಹೀಗೆ ಇವರಿಗೆ ಸರ್ಕಾರ ಗುರುತಿಸಿಕೊಂಡ ಬದಲಾವಣೆ ಕಡೆಗೆ ಚಲಿಸುವ ಚಲನೆಯಲ್ಲಿ ನಡೆಯುತ್ತಿರುವುದು ಎಂದು ಹೆಳಬಹುದು. ಆದ್ದರಿಂದ ಅಂದಿನಿಂದ ಇಂದಿನವರೆಗೆ ಪ್ರತಿಯೊಂದು ಸಮುದಾಯದ ಹಾಗೂ ಬುಡಕಟ್ಟು ಅಲೆಮಾರಿ ಸಮುದಾಯಗಳ ಕಲೆ ಕಸುಬು, ಕೌಟುಂಬಿಕ ವ್ಯವಸ್ಥೆ, ಸಾಮಾಜಿಕ

ಸ್ಥಾನಮಾನ, ಆಚಾರ ವಿಚಾರ, ಉಡುಗೆ ತೊಡುಗೆ, ಅವರ ಪರಂಪರೆ ಗುರುತಸಿಕೊಳ್ಳಲು ಈ ವ್ಯವಸ್ಥೆ ಮುಂದುವರಿದಿರಬಹುದು ಎಂದು ಹೇಳಬಹುದು.

ದೇವದಾಸಿ ಮತ್ತು ವೇಶ್ಯಾ ಪದ್ಧತಿ

''ವೇಶ್ಯಾವಾಟಿಕೆಯು ವಿಜಯನಗರದಲ್ಲಿ ಒಂದು ರಾಜಪೋಷಿತವಾದ ವೃತ್ತಿಯಾಗಿದ್ದಿತು ಎಂದು ಹೇಳುವುದಕ್ಕೆ ಅನೇಕ ಆಧಾರಗಳು ದೊರಕುತ್ತವೆ. ಪುರುಷನೊಂದಿಗೆ ಸ್ತ್ರೀಯೊಬ್ಬಳು ತಾತ್ಕಾಲಿಕವಾಗಿ ಮಾಡಿಕೊಳ್ಳುವ ಲೈಂಗಿಕ ಒಪ್ಪಂದವೇ ವೇಶ್ಯಾವೃತ್ತಿ. ಇದನ್ನು ಸಮಾಜದಲ್ಲಿ ಅಕ್ರಮ ಲೈಂಗಿಕ ಸಂಬಂಧವೆಂತಲೂ ಭಾವಿಸಲಾಗುತ್ತದೆ. ಪ್ರತಿಯೊಂದು ಸಮಾಜವು ಸಹ ಇದನ್ನು ಕೆಟ್ಟದೆಂದು ಹೆಳುತ್ತಲೆ ತಮ್ಮ ತಮ್ಮ ವ್ಯವಸ್ಥೆಯಲ್ಲಿ ಏರ್ಪಾಟು ಮಾಡಿಕೊಂಡುಬರುತ್ತಲಿವೆ. ವಿಜಯನಗರದ ಕಾಲದಲ್ಲಿಯೇ ಅಲ್ಲದೇ ನಮ್ಮ ಪ್ರಾಚೀನ ಭಾರತದ ಚರಿತ್ರೆಯನ್ನು ಗಮನಿಸುವುದಾದರೂ ರಾಜರ ಆಸ್ಥಾನದಲ್ಲಿಯೇ ಎಲ್ಲಾ ವೃತ್ತಿಗಳಿಗಿಂತಲೂ ಸ್ವಾಭಾವಿಕ ವೃತ್ತಿಯಾಗಿ ಬೆಳೆದು ಬಂದಿರುವುದು ಕಂಡಬುರತ್ತದೆ. ವೇಶ್ಯಾ ಪದ್ಧತಿಯು ಆಳವಾಗಿ ಬೇರೂರಲು ಅನೇಕ ಕಾರಣಗಳನ್ನು ಕೊಡಬಹುದು ಪ್ರಮುಖವಾಗಿ,

೧. ಬಡತನ

೨. ಅಜ್ಞಾನ

೩. ಆಸ್ಥಾನದ ನೃತ್ಯಗಾರ್ತಿಯರು ಹಾಗೆ ವೇಶ್ಯಾವೃತ್ತಿ

೪. ಬದುಕಲು ಬೇರೆ ಮಾರ್ಗವಿಲ್ಲದೆ ವೇಶ್ಯಾ ವೃತ್ತಿ ಕೈಗೊಂಡಿದ್ದು.''[೧೪]

''ವಿದೇಶಿ ಪ್ರವಾಸಿಗನಾದ ಬಾರ್ಬೋಸಾನು ಕೆಲವು ಶ್ರೀಮಂತ ವೇಶ್ಯೆಯರು ಬಡತನದ ಬೇಗೆಯಲ್ಲಿರುವ ಪೋಷಕರನ್ನು ತಮ್ಮ ಹೆಣ್ಣುಮಕ್ಕಳನ್ನು ವೇಶ್ಯಾವೃತ್ತಿಗೆ ಕಳುಹಿಸಲು ಒತ್ತಾಯಿಸುತ್ತಾರೆ.''[೧೫] ಇದು ಬಹಳಷ್ಟು ಬೇಡ ಬುಡಕಟ್ಟಿನಲ್ಲಿ ಅತಿ ಹೆಚ್ಚು ಕುಟುಂಬಗಳಲ್ಲಿ ಈ ಪದ್ದತಿಗೆ ಒಳಗಾಗುತ್ತಿದ್ದವು ಎಂದು ಹೇಳಬಹುದಾದರೆ ಪ್ರಸ್ತುತವಾಗಿ ಕಮಲಾಪುರದಲ್ಲಿ ಇಂದಿಗೂ ರೂಢಿಯಲ್ಲಿ ಇರುವುದು ಗೌಪ್ಯದ ವಿಷಯವಾಗಿದೆ. ಕಾರಣ ಪ್ರತಿಒಂದು ರಾಜ್ಯ, ಜಿಲ್ಲೆ, ಪಟ್ಟಣ, ನಗರ ಹಾಗೂ ಊರುಗಳಲ್ಲಿ ದೇವದಾಸಿ ಮತ್ತು ವೇಶ್ಯಾ ಪದ್ಧತಿ ಕಂಡುಬರುವುದು ಕೆಳವರ್ಗಕುಟುಂಬಗಳಲ್ಲಿ ಅಥವಾ ಪ.ಜಾ./ಪಂ.ಪಂಗಳಲ್ಲಿ ಅತಿ ಹೆಚ್ಚಾಗಿ ಅಂದಿನಿಂದ ಇಂದಿನವರೆಗೂ ಈ ಪದ್ಧತಿ ರೂಢಿಯಲ್ಲಿದೆ. ಏಕೆಂದರೆ ಈ ಸಮುದಾಯಗಳಲ್ಲಿ ಕಂಡುಬರುವ ಲಕ್ಷಮಗಳು ಎಂದರೆ ಬಡತನ, ಅಜ್ಞಾನ, ಮೂಢನಂಬಿಕೆ, ಆಗಾದವಾದ ನಂಬಿಕೆ, ಭಯ ಭೀತಿಯಿಂದ ಬದುಕುತ್ತಿರುವ ಅವರು ಇನ್ನು ಅನೇಕ ನಿಗೂಢವಾದ ವಿಚಾರಗಳು ಅಡಗಿರುವುದು ಈ ಅನಿಷ್ಟ ಪದ್ಧತಿಗೆ ಒಳಗಾಗುತ್ತಿವೆ ಎಂದು ಹೇಳಬಹುದು. ಆದರೆ ಪ್ರಸ್ತುತವಾಗಿ ಸ್ವಲ್ಪ

ಬದಲಾವಣೆಗಳು ಕಂಡುಕೊಂಡಿವೆ ಎಂದರೆ ಈ ರಾಜ್ಯದ ಆಯಾ ಪ್ರದೇಶಗಳ ಜನರ ಬೌದ್ಧಿಕ ತಿಳುವಳಿಕೆ ಹಿನ್ನಲೆಯಲ್ಲಿ ಕಾಲಮಾವ ಲಯಕ್ಕೆ ತಕ್ಕ ಪರಿವರ್ತನೆಗೊಂಡಿವೆ ಎಂದು ಗುರುತಿಸಬಹುದು. ಆದರೆ ನನ್ನ ಅಧ್ಯಯನಕ್ಕೆ ಒಳಪಡಿಸಿದ ಈ ಪ್ರದೇಶದಲ್ಲಿ ಕಂಡುಬರುವುದಾದರೆ ಹಂಪಿಪರಿಸರದಲ್ಲಿ ಬರುವ ಕಮಲಾಪುರದಲ್ಲಿ ಇನ್ನೂ ಕೂಡ ದೇವದಾಸಿ ಮತ್ತು ವೇಶ್ಯಾಪದ್ಧತಿ ಪ್ರಸ್ತುತ ದಿನಮಾನಗಳಲ್ಲಿ ಹಾಗೇ ಉಳಿದುಕೊಂಡು ಬರುತ್ತಿರುವುದು ಗೌಪ್ಯವಾಗಿ ಕಂಡುಬರುತ್ತದೆ ಎಂದು ಹೇಳಬಹುದು. ಕಾರಣ ಅವರಿಗೆ ಇಲ್ಲಿರುವ ಮೂಢನಂಬಿಕೆ, ಧಾರ್ಮಿಕ ಆಚರಣೆಗಳು ಗಾಢವಾಗಿ ಬೇರೂರಿದೆ. ಅಥವಾ ಬಡತನ, ಆರ್ಥಿಕತೆಯಿಂದ ಉಳಿದಿರಬಹುದು ಎಂದು ಹೇಳಬಹುದು. ಆದರೆ ಇದು ಇಲ್ಲಿನ ಎಲ್ಲಾ ಕುಟುಂಬಗಳಲ್ಲಿ ಇರುವುದಿಲ್ಲ. ಕೆಲವು ಕುಟುಂಬಗಳಲ್ಲಿ ಮಾತ್ರ ಕಂಡುಬರುತ್ತದೆ.

ದೇವದಾಸಿ ಪದ್ಧತಿಯು ವೇಶ್ಯಾ ವೃತ್ತಿಯಾಗಿ ಮಾರ್ಪಡುತ್ತಿತ್ತು. ಅದು ವಿದೇಶಿ ಪ್ರವಾಸಿಗನಾದ ಬಾರ್ಬೋಸನು ಹೀಗೆ ಹೆಳುತ್ತಾನೆ. ಗಂಡ ಸತ್ತ ನಂತರ ಹೆಂಡತಿಯು ಗಂಡನ ಚಿತೆಯಲ್ಲಿಯೇ ಜೀವಂತವಾಗಿ ಬಿದ್ದು ಸಾಯುವುದನ್ನು ''ಸತಿಸಹಗಮನ'' ಎಂದು ಕರೆಯುವುದು. ಇಂಥವುಗಳನ್ನು ಅಗೌರವದಿಂದ ಕಾಣಲಾಗುತ್ತಿತ್ತು. ಅವರ ತಲೆಯನ್ನು ಬೋಳಿಸಿ ಮನೆತನಕ್ಕೆ ಅಮಂಗಳವೆಂದು ಬಗೆದು ಹೊರಗೆ ಕಳುಹಿಸುವುದು, ಕೊನೆಗೆ ದಿಕ್ಕಿಲ್ಲದೆ ಅವಳು ದೇವಾಲಯವೊಂದರಲ್ಲಿ ದೇವದಾಸಿಯಾಗಿ ನಂತರ ವೇಶ್ಯಾವೃತ್ತಿಯಲ್ಲಿ ನಂತರ ವೇಶ್ಯಾವೃತ್ತಿಯಲ್ಲಿ ತೊಡಗುವರು ಎಂದು ಅಭಿಪ್ರಾಯಪಟ್ಟಿದ್ದಾನೆ.

ಹೀಗೆ ದೇವಾಲಯಗಳಲ್ಲಿ ನೃತ್ಯ ಸಂಗೀತದಲ್ಲಿ ಸೇವೆ ಸಲ್ಲಿಸುತ್ತಿದ್ದ ದೇವ ದಾಸಿಯರು ಉಳಿದ ಸಮಯವನ್ನು ವೇಶ್ಯಾವೃತ್ತಿಯಲ್ಲಿ ವ್ಯಯಿಸುತ್ತಿದ್ದುದನ್ನು ಸಮಕಾಲೀನ ಆಕಾರಗಳು ತಿಳಿಸುತ್ತವೆ.

ಇಂತಹವರ ಮಕ್ಕಳು ಕೂಡ ವೇಶ್ಯರಾಗುತ್ತಿದ್ದರೆಂಬುದು. ನೈವೇದ್ಯ ಮಾಡುವಾಗ ದೇವಸ್ಥಾನಕ್ಕೆ ಸೇರಿದ ದೇವದಾಸಿಯರು ನೃತ್ಯಮಾಡುತ್ತಾರೆ. ಈ ದೇವದಾಸಿಯರಿಗೆ ಹುಟ್ಟಿದ ಮಕ್ಕಳೆಲ್ಲ ದೇವಸ್ಥಾನಕ್ಕೆ ಸೇರುತ್ತಾರೆ. ಈ ದೇವದಾಸಿರು ಸೂಳೆಗಾರಿಕೆ ಮಾಡುತ್ತ ಊರಿನ ಅತ್ಯುತ್ತಮವಾದ ಬೀದಿಗಳಲ್ಲಿ ವಾಸಮಾಡುತ್ತಾರೆ ಎಂಬ ಪಾಯೇಸನ ದಾಖಲೆಯಿಂದ ತಿಳಿಯುತ್ತದೆ.

೪.೨. ಆರ್ಥಿಕ

''ಪ್ರತಿಯೊಂದು ಸಮಾಜದಲ್ಲಿ ವ್ಯಕ್ತಿಗಳ ಬೆಳವಣಿಗೆಯಿಂದ ಆರ್ಥಿಕ ವ್ಯವಸ್ಥೆಯು ಮುಖ್ಯವಾಗಿ ಅತ್ಯವಶ್ಯಕ. ಇದರಿಂದ ವ್ಯಕ್ತಿಗಳು ಅವರದೇ ಆದ ಕಸುಬು, ಉಪಕಸುಬುಗಳ ಇರುತ್ತವೆ ಅಂತಹ ವ್ಯವಸ್ಥೆಯು ವಿಜಯನಗರ ಸಾಮ್ರಾಜ್ಯವು ಮುಖ್ಯವಾಗಿ ವ್ಯವಸಾಯಿಕ ಸಾಮ್ರಾಜ್ಯವಾಗಿತ್ತು. ಹಳ್ಳಿಗಳೇ ಇಲ್ಲಿಯ ಐಶ್ವರ್ಯದ ಪ್ರಮುಖ ಆಧಾರಗಳಾಗಿದ್ದವು. ರೈತನೇ

ಹಳ್ಳಿಗಳ ಹಾಗೂ ಸಾಮ್ರಾಜ್ಯದ ತಳಹದಿಯಾಗಿದ್ದಾನೆಂದು ಹೇಳಬಹುದು. ಅವರ ಸಂಪತ್ತೇ ದೇಶದ ಸಂಪತ್ತು ಅವನ ಭಾಗ್ಯವೇ ದೇಸದ ಭಾಗ್ಯ ರೈತರ ಉದ್ಧಾರವೇ ದೇಶೋದ್ಧಾರ ಎಂದು ನಂಬಿ ರೈತನಲ್ಲಿ ಸುಖ, ಸಂಪತ್ತು, ಸಮೃದ್ಧಿಯಾಗಿದ್ದರೆ ದೇಸದಲ್ಲಿ ನೆಲವೂ, ಬಲವೂ, ಸಂಪತ್ತು ನದಿಯಂತೆ ಲೀಲಾಜಾಲವಾಗಿ ಹರಿಯುತ್ತದೆ ಎಂದು ನಂಬಿದವರಾಗಿದ್ದರು. ಇದನ್ನು ಗಮನಿಸಿದರೆ ಅಂದು ರೈತರು ಅಂದರೆ ಕೃಷಿಯನ್ನೇ ಅವಲಂಬಿಸಿಕೊಂಡಿದ್ದವರಿಗೆ ಸಾಮ್ರಾಜ್ಯದಲ್ಲಿ ಉತ್ತಮ ಸ್ಥಾನಮಾನವಿದ್ದಿತ್ತೆಂದು ಕಂಡುಬರುತ್ತದೆ.[೧೬]

ಕರ್ನಾಟಕದ ಬುಡಕಟ್ಟುಗಳ ಪೈಕಿ ಕೆಲವು ಅಲೆಮಾರಿತನ. ಅರೆ ಅಲೆಮಾರಿತನದವರಾಗಿದ್ದರೆ ಮತ್ತೆ ಕೆಲವು ಕೃಷಿ, ಪಶುಪಾಲನೆ, ಬೇಟೆ, ಕೂಲಿ ಕಾಯಕವನ್ನು ಅವಲಂಬಿಸಿದೆ. ಬೇಟೆ, ಪಶುಪಾಲನೆ ಮೂಲದ ಬುಡಕಟ್ಟುಗಳು ಅಲೆಮಾರಿ ಬುಡಕಟ್ಟುಗಳಾಗಿದ್ದವು. ಹಕ್ಕಿಪಿಕ್ಕಿ, ಬೇಡಬುಡಕಟ್ಟು ಲಂಬಾಣಿ ಸಮುದಾಯ, ದುರುಗ ಮುರಗಿ, ಇತರ ಅಲೆಮಾರಿ ಸಮುದಾಯಗಳು ಬದುಕಿಗಾಗಿ ಇಂದಿಗೂ ಅಲೆಮಾರಿ ಬದುಕನ್ನು ಅವಲಂಬಿಸಿರುವಂಥವು. ಹೀಗೆ ನೂರಾರು ವರ್ಷಗಳ ಹಿಂದೆ ಕೆಲವು ಬುಡಕಟ್ಟುಗಳು ಬೇಟೆ, ಆಹಾರ ಸಂಗ್ರಹಣೆಯನ್ನೇ ಅವಲಂಬಿಸಿದ್ದವು. ಪ್ರಾರಂಭದಲ್ಲಿ ಕುಮ, ಬೇಸಾಯ ಮತ್ತು ಸ್ಥಳಾಂತರದ ಬೇಸಾಯ ಮಾಡುತ್ತಿದ್ದವರು ಕಾಲಕ್ರಮೇಣ ಪಾರಂಪರಿಕ ಬೇಸಾಯದತ್ತಾ ಬುಡಕಟ್ಟುಗಳು ಮುಖ ಮಾಡಿವೆ. ಇಂದಿನ ದಿನಗಳಲ್ಲಿ ಬಹಳಷ್ಟು ಬುಡಕಟ್ಟುಗಳಿಗೆ ಪ್ರಧಾನ ಕಸುಬೇ ಬೇಸಾಯ. ಅಥವಾ ಹೊಲಗದ್ದೆಗಳಲ್ಲಿ ಕೂಲಿಯಾಗಿರುವುದು. ಅಲೆಮಾರಿ ಬುಡಕಟ್ಟುಗಳನ್ನು ಹೊರತುಪಡಿಸಿ ಮಿಕ್ಕೆಲ್ಲ ಬುಡಕಟ್ಟುಗಳು ಬೇಸಾಯವನ್ನೇ ಹೆಚ್ಚಾಗಿ ಅವಲಂಬಿಸಿವೆ.

''ಬೆಟೆಗೆ ಸಂಬಂಧಸಿದ ಕಾನೂನುಗಳು ಕೆಲವು ಬುಡಕಟ್ಟುಗಳ ಅಸ್ತಿತ್ವಕ್ಕೆ ಮಾರಕವಾಗಿ ಪರಿಣಮಿಸಿದವು. ೧೯೫೬ರ ಕರ್ನಾಟಕ ಪ್ರಾಣಿಬಲಿಗಳ ಪ್ರತಿಬಂಧಕ ಅಧಿನಿಯಮ, ೧೯೬೩ ಮತ್ತು ೧೯೭೮ಈ ಅರಣ್ಯ ತಿದ್ದುಪಡಿ ಅಧಿನಿಯಮ, ೧೯೭೨ರಲ್ಲಿ ವನ್ಯಜೀವಿ ಸಂರಕ್ಷಣಾ ಅದಿನಿಯಮ, ೧೯೭೬ರ ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮ, ೧೯೭೬ರ ಕರ್ನಾಟಕ ಅರಣ್ಯ ಅಧಿನಿಯಮ, ೧೯೮೭ ಭಾರತ ಮೀನುಗಾರಿಕೆ ಅಧಿನಿಯಮ ಮೊದಲಾದವು ಬೇಟೆಯನ್ನು ತಪ್ಪಿಸಿ, ಸಸ್ಯ ಮತ್ತು ಪ್ರಾಣಿ ಸಂರಕ್ಷಣೆಗೆ ಅವಕಾಶ ಕಲ್ಪಿಸಿವೆ. ಆದರೆ ಬೇಟೆಯನ್ನೇ ನಂಬಿಕೊಂಡಿದ್ದ ಬುಡಕಟ್ಟುಗಳ ಬದುಕು ಶೋಚನೀಯವಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಅಭಯಾರಣ್ಯಗಳ ಸಂರಕ್ಷಣೆ, ಉದ್ಯಾನ, ಧಾಮ, ಕೈಗಾರಿಕೆ, ಆಣೆಕಟ್ಟುಗಳ ನಿರ್ಮಾಣ ಕಾರ್ಯ ಸಾಗುತ್ತಿವೆ. ಈ ಯೋಜನೆಗಳು, ಬುಡಕಟ್ಟುಗಳು ವಾಸಿಸುತ್ತಿರುವ ಪ್ರದೇಶಗಳಲ್ಲೇ ಕಾರ್ಯಾಗತವಾಗುತ್ತಿವೆ.''[೧೭] ಬುಡಕಟ್ಟುಗಳ ಬದುಕು ಹೀಗಾಗಿ ಅತಂತ್ರ ಸ್ಥಿತಿ ತಲುಪಿವೆ.

ಹೀಗೆ ಸ್ಥಿತ್ಯಂತರಕ್ಕೆ ಒಳ್ಳಗಾಗಿ ಹಂಪಿ ಪರಿಸರದಲ್ಲಿ ಕಂಡುಬರುವ ಬೇಡ ಬುಡಕಟ್ಟು, ದುರುಗ ಮುರುಗಿ, ಲಂಬಾಣಿ, ಹಕ್ಕಿ ಪಿಕ್ಕಿ ಇತರ ಅಲೆಮಾರಿ ಬುಡಕಟ್ಟು ಸಮುದಾಯಗಳು

ಇಲ್ಲಿನ ಸ್ಥಳೀಯವಾಗಿ ಇರುವಂತ ಪರಿಯಾಯ ಕಸುಬುಗಳನ್ನು ಅನುಸರಿಸಿಕೊಂಡು ಬದುಕುತ್ತಿವೆ. ಸ್ವಾತಂತ್ರ ದೊರೆತು ೬೩ ವರ್ಷಗಳು ಕಳೆದರು ಈ ಸಮುದಾಯಗಳಿಗೆ ಸರಕಾರ ಯಾವುದೇ ರೀತಿಯ ಸಹಾಯ ಮಾಡದೆ ಇರುವುದು ಆಶ್ಚರ್ಯಕರ ಸಂಗತಿ. ಏಕೆಂದರೆ ಭಾರತದ ಸರಕಾರವಾಗಲಿ ಅಥವಾ ಕರ್ನಾಟಕ ಸರಕಾರವಾಗಲಿ ಇಂತಹ ಸಮುದಾಯವನ್ನು ಪತ್ತೆ ಹಚ್ಚಿ ಅವರ ಪ್ರಗತಿಗಾಗಿ ಶ್ರಮಿಸಬಹುದಿತ್ತು. ಆದರೆ ಈ ಸಮುದಾಯ ಒಂದು ಕಡೆಗೆ ನೆಲೆಯನ್ನು ಇಲ್ಲಿಯವರೆಗೆ ಕೊಂಡುಕೊಂಡಿಲ್ಲ. ಕೊಂಡುಕೊಂಡಿದೇ ಆದರೆ ಬಹಳ ವಿರಳ ಎಂದು ಹೇಳಬಹುದು. ಇವರು ನಿರಂತರವಾಗಿ ಊರಿಂದ ಊರಿಗೆ ಬದುಕು ಸಾಗಿಸುವ ಸಲುವಾಗಿ ಅಲೆಮಾರಿ ಬದುಕನ್ನು ಅವಲಂಬಿಸಿರುವ ಈ ಸಮುದಾಯ ಜನಗಣತಿ ಮತ್ತು ಮತದಾರರ ಪರಿಷ್ಕರಗಳ ವೇಳೆಯಲ್ಲಿ ಇವರು ತಾವು ಒಂದು ಊರಿನ ನಿವಾಸಿಗಳು ಎಂದು ಹೇಳಿಕೊಳ್ಳುವ ಪರಿಕಲ್ಪನೆ ಇವರಲ್ಲಿ ಇರಲಿಲ್ಲ. ಅದರಿಂದ ಸರಕಾರಗಳಿಗೆ ಇವರ ಆರ್ಥಿಕ ಮಟ್ಟದ ಸುಧಾರಣೆಗಾಗಿ ಯಾವುದೇ ರೀತಿಯ ಸೌಲಭ್ಯವನ್ನು ನೀಡದೇ ಇರಬಹುದು. ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಈ ಸಮುದಾಯ ಇದ್ದರೂ, ಪರಿಶಿಷ್ಟರಿಗೆ ದೊರೆಯುವ ಯಾವುದೇ ರೀತಿಯ ಸೌಕರ್ಯಗಳನ್ನು ಇವರು ಪಡೆದುಕೊಂಡಿರುವುದಿಲ್ಲ.

ಕಲೆಗೆ ಮಹತ್ವ ಕಡಿಮೆಯಾದ ನಂತರ ಈಗೀಗ ಊರಿನ ಹೊರವಲಯಗಳಲ್ಲಿ ನೆಲೆನಿಂತು ವಾಸಿಸತೊಡಗಿರುವರು. ಮತದ ಆಸೆಗೆ ಕೆಲವು ರಾಜಕೀಯ ಮುಖಂಡರು ಮತಾದರರ ಪಟ್ಟಿಯಲ್ಲಿ ಸೇರಿಸಿದ್ದಾರೆ. ಇವರ ಜಾತಿಯ ಹೆಸರು ಹೇಳಿಕೊಳ್ಳಲು ಇವರಿಗೆ ನಾಚಿಕೆಯಾಗುತ್ತದೆ. ಅಂತಹ ವಿಚಿತ್ರ ಸ್ವಭಾವವನ್ನು ಇವರು ಹೊಂದಿದ್ದಾರೆ. ಇವರ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಏಕೆಂದರೆ ಇವರಿಗೆ ಸ್ಥಿರಾಸ್ತಿ ಇಲ್ಲಿ ಹಾಗೂ ಯಾವುದೋ ಕೆಲಸದ ನೈಪುಣ್ಯತೆ ಇವರಲ್ಲಿ ಕಂಡುಬರುವುದಿಲ್ಲ. ಎಲ್ಲಾ ರೀತಿಯ ಕಲೆಗಳನ್ನು ಇವರು ಮಾಡುತ್ತಾರೆ. ಇನ್ನೂ ಕೆಲವರು ಬಿಕ್ಷಾಟನೆ ಮತ್ತು ಮನರಂಜನೆ, ಸಣ್ಣ ಪುಟ್ಟ ವ್ಯಾಪಾರದಲ್ಲಿ ತೊಡಗಿದ್ದು ಈ ಪ್ರದೇಶದಲ್ಲಿ ಕಂಡುಬರುತ್ತದೆ.

೪.೩. ಶೈಕ್ಷಣಿಕ

ಹಂಪಿ ಪರಿಸರದಲ್ಲಿ ಶಿಕ್ಷಣದ ವಿಚಾರವನ್ನು ಸಂಗ್ರಹಿಸುವುದಾದರೆ ಅಂದಿನ ಕಾಲದ ಜಾತಿ ವ್ಯವಸ್ಥೆಯು ತನ್ನದೆ ಆದಂತಹ ಮೌಢ್ಯದ ವ್ಯವಸ್ಥೆಯಲ್ಲಿ ಮುಳುಗಿಸುವಂತೆ ಮಾಡಿತು. ''ಬ್ರಾಹ್ಮಣರು ವಿದ್ಯೆ ಎಂಬುದು ತಮಗೆ ಮಾತ್ರವೆಂದು ಹೇಳಿ ವೇದ ಉಪನಿಷತ್ತುಗಳನ್ನು ಹೇಳಿಕೊಂಡು ರಾಜಶ್ರಯದಲ್ಲಿ ಉತ್ತಮ ಜೀವನ ನಡೆಸಿದರೆ, ತಾವೇ ಸೃಷ್ಟಿಸಿದ ಶೂದ್ರರು ಹಾಗೂ ಪಂಚಮರು ಹುಟ್ಟಿರುವುದರ ಬಗ್ಗೆ ಹಲವಾರು ಅಧರ್ಮ ನೀತಿಯನ್ನು ತಿಳಿಸಿ ಅವರನ್ನು ಪ್ರಾಣಿಗಳಿಗಿಂತಲೂ ಹೀನವಾದ ಜೀವನ ನಡೆಸುವಂತೆ ಮಾಡಿದ್ದರೆನ್ನಬಹುದು.

ಈ ಗುಂಪಿನಲ್ಲಿ ಯಾರಾದರೂ ಶಿಕ್ಷಣ ಪಡೆಯಲು ಅದರಲ್ಲಿಯೂ ಸಂಸ್ಕೃತ ಕಲಿಯಲು ಬಯಸಿದರೆ ಅವ್ಯಕ್ತಿಗೆ ಕಾಯಿಸಿದ ಕಬ್ಬಿಣದ ಸಲಾಕೆಯಿಂದ ಕವಿಗಳಿಗೆ ಎರಕ ಹೊಯ್ಯುವುದು, ನಾಲಿಗೆ ಕತ್ತರಿಸುವುದು, ಗಡಿಪಾರು ಮಾಡುವುದು ಅಥವಾ ಮರಣದಂಡನೆಗೆ ಒಳಪಡಿಸುವ ಅನಿಷ್ಟ ಪದ್ಧತಿಗಳು ಇದ್ದವು. ಅಂದಿನ ಶಿಕ್ಷಣವು ಕೇವಲ ರಾಜ ಹಾಗೂ ರಾಜಾಶ್ರಮದ ಶ್ರೀಮಂತರು, ಬ್ರಾಹ್ಮಣರುಗಳಿಗೆ ಮಾತ್ರ ಮೀಸಲಾಗಿದ್ದಿತು. ಬೇರೆ ಯಾರೂ ಶಿಕ್ಷಣ ಪಡೆಯದಂತೆ ನಿಷೇಧ ವಿಧಿಸಲಾಗಿತ್ತು. ಸಾಮಾನ್ಯ ಜನತೆಯ ಜೀವನದ ಸೌಕರ್ಯಗಳನ್ನು ಯಾವ ದೃಷ್ಟಿಯಿಂದಲೂ ಉತ್ತಮವಾಗಿ ನಿರೂಪಿಸಲು ಸ್ವಲ್ಪವೂ ಗಮನಕೊಡದ, ಕೇವಲ ಅನಿಷ್ಟ ಪದ್ಧತಿಗಳ ತಳಹದಿಯ ಮೇಲೆ ಆಳ್ವಿಕೆ ನಡೆಸಿದ ರಾಜ್ಯಾಡಳಿತವನ್ನು ಸುಭಿಕ್ಷವಾದ ಆಳ್ವಿಕೆಯ ಸಾಮ್ರಾಜ್ಯಗಳು ನಡೆಸಿರುವುದುದ ಇತಿಹಾಸದಿಂದ ತಿಳಿದುಬರುತ್ತದೆ.[೧೮]

''ದಿವಂಗತ ಹಯವದನರಾಯ ಮೈಸೂರು ಗೆಜೆಟಿಯರ ಸಂಪುಟ ನಾಲ್ಕರಲ್ಲಿ ಹಿಂದಿನ ಕಾಲದ ಶಿಕ್ಷಣ ಪದ್ಧತಿಯನ್ನು ಅವಲೋಕಿಸುತ್ತಾ ಸಾರ್ವಜನಿಕ ಶಿಕ್ಷಣವನ್ನು ಹಿಂದೆಂದೂ ಸರ್ಕಾರದ ಕರ್ತವ್ಯವೆಂದು ಪರಿಗಣಿಸಿದ ಹಾಗೆ ಎಲ್ಲೂ ಕಾಣುವುದಿಲ್ಲ ಎಂದು ಹೇಳಿದ್ದಾರೆ. ಈ ಮಾತಿಗೆ ವಿಜಯನಗರ ಸಾಮ್ರಾಜ್ಯವು ಹೊರತಾಗಿರಲಿಲ್ಲ ಎಂದು ಹೇಳಬಹುದು. ವಿಜಯನಗರದರಸರು ವಿದ್ವತ್ತನ್ನು ಮತ್ತು ಶಿಕ್ಷಣ ಪ್ರಸಾರವನ್ನು ಪ್ರೋತ್ಸಾಹಿಸಿದ್ದಕ್ಕೆ ಕಾರಣವೆಂದರೆ ಸ್ವತಃ ಅವರೇ ವಿದ್ಯಾವಂತರಾಗಿದ್ದರು ಎನ್ನುವುದು ಒಂದು ರೀತಿಯದಾದರೆ, ಮತ್ತೊಂದು ಕಡೆ ಅವರೆ ಮೂಲ ಸಂಪ್ರದಾಯಗಳಿಗೆ ಮನಸೋತು ಸಾರ್ವಜನಿಕ ಶಿಕ್ಷಣವನ್ನು ಸಂಪೂರ್ಣವಾಗಿ ಬದಿಗೊತ್ತಿದ್ದರು ಎಂದು ಹೇಳಬಹುದು. ರಾಜಕುಮಾರರ ವಿದ್ಯಾಭ್ಯಾಸದಿಂದ ಮುಂದುವರಿದ ಈ ಪರಂಪರೆಯು ನಂತರದ ವಿಜಯನಗರದ ಅರಸರೂ ಸಹ ಅನುಸರಿಸಿಕೊಂಡು ಬಂದರು.[೧೯]

ಆದರಿಂದ ಈ ಸಾಮ್ರಾಜ್ಯದ ಶಿಕ್ಷಣದ ವಿಚಾರವನ್ನು ನಾವು ಬಹಳಮಟ್ಟಿಗೆ ಶಾಸನಗಳಿಂದ ತಿಳಿದುಕೊಳ್ಳಬಹುದಾಗಿದೆ. ಇವುಗಳಲ್ಲಿ ಕೆಲವಂತೂ ಸ್ವಾರಸ್ಯ ಪೂರ್ಣವಾದ ವಿವರಗಳನ್ನು ಒದಗಿಸುತ್ತವೆ. ಅಷ್ಟೇ ಅಲ್ಲದೆ ಅಂದಿನ ಸಮಕಾಲೀನ ಸಾಹಿತ್ಯವು ಈ ವಿಚಾರವಾಗಿ ಹೆಚ್ಚಿನ ಬೆಳಕನ್ನು ಚೆಲ್ಲುತ್ತದಲ್ಲದೆ ಈ ಶಿಕ್ಷಣದ ಚಟುವಟಿಕೆಗಳು ಅಂದು ಕೆಲವೇ ವರ್ಗಗಳ ಬೌದ್ಧಿಕ, ನೈತಿಕ ಹಾಗೂ ಸಂಸ್ಕೃತಿ ವಿಷಯಗಳ ಮೇಲೆ ಗಮನಹರಿಸಲು ನಿಜವಾದ ಆದಾರವಾಗಿರುತ್ತಿದ್ದವು. ಇವುಗಳ ಆಧಾರದ ಮೇಲೆಯೇ ಅಂದಿನ ಕಾಲದ ಶಿಕ್ಷಣದ ವ್ಯವಸ್ಥೆಯನ್ನು ಕಂಡುಕೊಳ್ಳಲು ಮೇಲಿನ ಅಂಶಗಳು ಪೂರಕವಾಗಿವೆ ಎಂದು ಹೇಳಬಹುದು.

ಒಟ್ಟಿನಲ್ಲಿ ಯಾವುದೇ ದೇಶದ ಇತಿಹಾಸವನ್ನು ಅವಲೋಕಿಸಿದರೆ, ''ಧರ್ಮ ಮತ್ತು ಶಿಕ್ಷಣದ ನಡುವಿನ ಗಾಢ ಸಂಬಂದ ಕಾಣುತ್ತದೆ. ಪೂರ್ವದಲ್ಲಿ ಎಲ್ಲ ಶಿಕ್ಷಣಗಳೂ ಧಾರ್ಮಿಕವೇ

ಆಗಿದ್ದವು. ಅದರ ಮುಖಂಡರೇ ಶಿಕ್ಷಣದ ಮೇಲೆ ಆಡಳಿತ ಮತ್ತು ನಿಯಂತ್ರಣವನ್ನು ಸಾದಿಸಿದ್ದರು. ಧಾರ್ಮಿಕ ಮುಖಂಡರೇ ಜ್ಞಾನದಾತೃಗಳೂ ಆಗಿದ್ದು, ಜ್ಞಾನದ ಮೇಲೆ ಏಕಸ್ವಾಮ್ಯ ಅಧಿಕಾರವನ್ನು ಹೊಂದಿದ್ದರು. ಆದಿಮ ಜನಾಂಗಗಳಲ್ಲಿ ಶಿಕ್ಷಣ ಕ್ರಮವು ವೃತ್ತಿ ಕೌಶಲ್ಯದ ತರಬೇತಿ ಮತ್ತು ನಡತೆಗಳ ಬೋಧನೆಯನ್ನು ಒಳಗೊಂಡಿದ್ದವು. ಒಂದು ಮಗು ಮುಂದೆ ತನ್ನ ಜೀವನಾವಶ್ಯಕ ಸೌಕರ್ಯಗಳನ್ನು ಪಡೆಯುವುದು ಮತ್ತು ಪ್ರಕೃತಿಯಲ್ಲಿ ಕ್ರಿಯಾಶೀಲವಾಗಿರಬಹುದಾದ ಆಗೋಚರ ಶಕ್ತಿಗಲನ್ನು ಪ್ರಸನ್ನಗೊಳಿಸಿಕೊಳ್ಳುವಂತ ಮಾಡುವುದು, ಅಂದಿನ ಶಿಕ್ಷಣದ ಮೂಲ ಗುರಿಯಾಗಿತ್ತು. ಬುದ್ಧಿಶಕ್ತಿಯ ವಿಕಾಸಕ್ಕೇ ಹೆಚ್ಚು ಒತ್ತುಕೊಡುವ ಆಧುನಿಕ ಶಿಕ್ಷಣ ಪದ್ಧತಿಗಿಂತ ಬಿನ್ನವಾಗಿ ಪ್ರಾಚೀನರ ತಮ್ಮ ಶಿಕ್ಷಣ ಪದ್ಧತಿಯಲ್ಲಿ ಶೌರ್ಯ ಮತ್ತು ಶೀಲಗಳ ವಿಕಾಸಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದರು. ಅಂದಿನ ಕಾಲದಲ್ಲಿ ಬರವಣಿಗೆಗೆ ಇನ್ನೂ ವಿಕಾಸವಾಗಿದ್ದರಿಂದ ಮಾಂತ್ರಿಕರು ಮತ್ತು ವೈದ್ಯರು ಪರಂಪರಾಗತವಾಗಿ ಮೌಖಿಕವಾಗಿ ಬಂದಿದ್ದ ಜ್ಞಾನವನ್ನೇ ಸಂಪತ್ತಾಗಿಸಿಕೊಂಡಿದ್ದರು. ಈ ಜನರಲ್ಲಿ ಶಿಕ್ಷಣ ಎನ್ನುವುದು ಸಮಾಜಾದೀನಾವಾದ ಒಂದು ದೊಡ್ಡ ಅಂಗವಾಗಿತ್ತು. ಬರವಣಿಗೆಯ ಕಲೆಯು ವಿಕಾಸಗೊಂಡ ನಂತರವೇ ನಿಜವಾದ ಅರ್ಥದಲ್ಲಿ ಶಿಕ್ಷಣದ ಮೂಲವನ್ನು ಗುರುತಿಸಬಹುದು. ಈಜಿಪ್ಟನಲ್ಲಿ ಮೊದಲಬಾರಿಗೆ ಬರವಣಿಗೆಯ ಕಲೆಯು ಕಂಡು ಬಂದಿತು. ನಂತರ ಬೆಬಿಲೋನಿಯೂ, ಚೀನಾ, ಪರ್ಷಿಯಾ ಮತ್ತು ಸಿಂಧೂ ಕಣಿವೆಗಳಲ್ಲಿಯೂ ಕಂಡುಬಂದಿತು. ಹೀಗೆ ಕಂಡು ಬಂದ ಶಿಕ್ಷಣದ ವ್ಯವಸ್ಥೆಯೂ ಪ್ರಾಚೀನ ಭಾರತದಲ್ಲಿ ಅನೇಕ ದೇಶಗಳು ವಿಕಾಸದ ಹಾದಿಯಲ್ಲಿ ಇನ್ನೂ ಹಿಂಬಿದ್ದಿರುವಾಗ ಮತ್ತು ಇಂತಹ ದೇಶಗಳ ಆದಿಮ ಜನಾಂಗಗಳು ಬಿಲ್ಲುಗಾರಿಕೆಯನ್ನು ಕಲಿಯುವುದಕ್ಕೂ ಪೂರ್ವದಲ್ಲೇ ಭಾರತವು ತನ್ನ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮುನ್ನಡೆ ಪಡೆದಿತ್ತು. ಬಾರತದಲ್ಲಿ ಶಿಕ್ಷಣವು ಬಾಹ್ಯ ಪ್ರೇರಿತವಲ್ಲ. ಶಿಕ್ಷಣ ಪ್ರವೇಶ ಅತಿ ಪ್ರಾಚೀನ ಮೂಲ ಅಥವಾ ಬರಯುತವಾದ ಪ್ರಭಾವ ಬೇರಾವುದೇ ದೇಶದಲ್ಲಿ ಇಲ್ಲಿ ವೈದಿಕ ಯುಗದ ಸಾಮಾನ್ಯ. ಕವಿಯಿಂದ ಹಿಡಿದು ಇಂದಿನ ಮಂಗಾಳದ ದಾರ್ಶನಿಕರವರೆಗೆ ಶಿಕ್ಷಕರ ಮತ್ತು ವಿದ್ವಾಂಸ ಅವಿರತ ಪರಂಪರೆ ಸಾಗುತ್ತಲೇ ಎಂದಿದೆ."[೨೦]

ವ್ಯಕ್ತಿತ್ವ ವಿಕಾಸಕ್ಕೆ ಮಾನವಹಕ್ಕು ಮತ್ತು ಸ್ವಾತಂತ್ರ್ಯವನ್ನು ಗೌರವಿಸುವುದಕ್ಕೆ ಶಿಕ್ಷಣ ಅಗತ್ಯವಾದುದು. ಶಿಕ್ಷಣ ಎನ್ನುವುದು ಸಮಾಜದ ಏಳ್ಗೆಗೆ ಇರುವ ಸಾಧನವಾಗಿದೆ. ಅದಕ್ಕಾಗಿಯೇ ಶಿಕ್ಷಣ ಎನ್ನುವುದು ಮೂಲಭೂತ ಹಕ್ಕು. ಈ ಹಕ್ಕು ಎಲ್ಲರಿಗೂ ಸಮಾನವಾಗಿ ಸಿಗುವಂತಾಗಬೇಕು. ಶಿಕ್ಷಣ ಉಚಿತವಾಗಿ ಸಿಗಬೇಕು. ಕೊನೆಪಕ್ಷ ಪ್ರಾಥಮಿಕ ಹಂತದಲ್ಲಾದರೂ ಸಿಗಲೇಬೇಕು. ಅಂದಾಗ ಶಿಕ್ಷಣದ ಅಗತ್ಯ ಮತ್ತು ಅರ್ಥ ತಿಳಿಯುತ್ತದೆ. ಇನ್ನೂ ಈ ಬುಡಕಟ್ಟುಗಳು ನಾಗರೀಕತೆಯಿಂದ ದೂರವಾಗಿ ಪ್ರತ್ಯೇಕವಾಗಿ ಬದುಕಿ ತಮ್ಮ ಸಾಂಸ್ಕೃತಿಕ ಅಪೂರ್ವತೆಯನ್ನು

ಉಳಿಸಿಕೊಂಡು ಬಂದವರು. ಇಂತಹ ಬುಡಕಟ್ಟು ಅಭಿವೃದ್ಧಿಗಾಗಿ ವಿಶೇಷ ವಿವಿಧೋದ್ದೇಶ ಬುಡಕಟ್ಟು ಬ್ಲಾಕ್‌ಗಳನ್ನು ೨ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಸ್ಥಾಪಿಸಲಾಯಿತು. ಈ ಬುಡಕಟ್ಟುಗಳ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಈ ಬ್ಲಾಕ್‌ಗಳ ಉದ್ದೇಶವಾಗಿತ್ತು.

ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿ ಹೇಳಬಹುದಾದರೆ ಈ ಬುಡಕಟ್ಟು ತೀರಾ ಹಿಂದುಳಿದಿವೆ. ಈ ಬುಡಕಟ್ಟುಗಳ ಶೈಕ್ಷಣಿಕ ಸ್ಥಿತಿಗತಿ ಶೋಚನೀಯವಾಗಿವೆ. ಸರ್ಕಾರದ ಸೌಲಭ್ಯವಿದ್ದರೂ ಅದರ ಮಾಹಿತಿ ಸರಿಯಾಗಿ ಇವರಿಗೆ ಸಿಗುತ್ತಿಲ್ಲ. ಹೀಗೆ ಶೋಚನೀಯವಾದ ಸ್ಥಿತಿಯಲ್ಲಿದ್ದ ಈ ಬುಡಕಟ್ಟುಗಳ ಶೈಕ್ಷಣಿಕ ಹಿನ್ನೆಲೆಯನ್ನು ಅಭ್ಯಸಿಸುವುದು ತೀರಾ ಅವಶ್ಯವಾಗಿದೆ.

೧. ಬೇಡ ಸಮುದಾಯ

ಹಂಪಿ ಪರಿಸರದಲ್ಲಿ ಬೇಡ ಸಮುದಾಯದ ಶೈಕ್ಷಣಿಕ ಸ್ಥಿತಿಗತಿ ತುಂಬಾ ಶೋಚನೀಯವಾಗಿದೆ. ಬೇಡ ಸಮುದಾಯವು ಈ ಪರಿಸರದಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಇವರ ಶೈಕ್ಷಣಿಕ ಮಟ್ಟ ತೀರಾ ಕಡಿಮೆಯಿದೆ. ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ಮೂರು ಲಕ್ಷದ ಎಪ್ಪತ್ತು ಸಾವಿರ ಜನಸಂಖ್ಯೆಯಿದೆ. ಶಿಕ್ಷಣ ಸಾಕ್ಷರತೆಯ ಪ್ರಮಾಣ ಶೇ.೪೧ರಿಂದ ೪೨ರ ಮಾತ್ರ. ಆದರೆ ಹಂಪಿ ಪರಿಸರದಲ್ಲಿ ಶೈಕ್ಷಣಿಕ ಮಟ್ಟ ತೀರಾ ಹಿಂದುಳಿದಿದೆ.

೨. ಹಕ್ಕಿ ಪಿಕ್ಕಿ ಸಮುದಾಯ

ಈ ಸಮುದಾಯವು ಹಂಪಿ ಪರಿಸರದ ವ್ಯಾಪ್ತಿಯಲ್ಲಿರುವ ಕಂಪ್ಲಿಯಲ್ಲಿ ಈ ಸಮುದಾಯ ಕಂಡುಬರುತ್ತದೆ. ಈ ಸಮುದಾಯ ಶೈಕ್ಷಣಿಕವಾಗಿ ತೀರಾ ಹಿಂದುಳಿದಿದೆ ಇದರಲ್ಲಿ ಬೆರಳೆಣಿಕೆಯಷ್ಟು ಜನರು ಇತ್ತೀಚಿನ ಆಧುನಿಕ ಕಾಲದ ಪ್ರಭಾವದಿಂದಾಗಿ ಶಿಕ್ಷಣದ ಕಡೆ ವಾಲಿದ್ದು ಕಂಡುಬರುತ್ತದೆ. ಈ ಸಮುದಾಯದಲ್ಲಿ ಬಿ.ಎ. ೧, ಪಿಯುಸಿ.೧೫, ಎಸ್.ಎಸ್.ಎಲ್.ಸಿ.೧೦, ಓದಿದ ಜನರು ಕಂಡುಬರುತ್ತಾರೆ. ಈ ಸಮುದಾಯಕ್ಕೆ ಶಿಕ್ಷಣದ ಕೊರತೆ ಎದ್ದು ಕಾಣುತ್ತದೆ. ಸರ್ಕಾರದ ಸೌಲಭ್ಯಗಳ ಬಗ್ಗೆ ಇವರಿಗೆ ಲಭಿಸದಿರುವುದು ಖೇದಕರ ಸಂಗತಿಯಾಗಿದೆ.

೩. ಲಂಬಾಣಿ ಸಮುದಾಯ

ಈ ಸಮುದಾಯವು ಹಂಪಿ ಪರಿಸರದ ಕೆರೆತಾಂಡ, ಕಡ್ಡಿರಾಂಪುರ ಗ್ರಾಮಗಳಲ್ಲಿ ಕಂಡುಬರುತ್ತದೆ. ಶೈಕ್ಷಣಿಕವಾಗಿ ಶೋಚನೀಯ ಸ್ಥಿತಿಯಲ್ಲಿದೆ. ಈ ಸಮುದಾಯದಲ್ಲಿ ಬಿ.ಎ, ಬಿ.ಎಡ್., ಪಿಯುಸಿ, ಎಸ್.ಎಸ್.ಎಲ್.ಸಿ ಐ.ಟಿ.ಐ ಕೋರ್ಸ್‌ಗಳಲ್ಲಿ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಈ ಪರಂಪರೆ ಆಧುನಿಕತೆಯ ಜಾಗತೀಕರಣದ ಪ್ರಬಾವದಿಂದಾಗಿ ಶಿಕ್ಷಣದ ಕಡೆಗೆ ಗಮನ ನೀಡುತ್ತಿದ್ದಾರೆ. ಇವರು ಲಿಪಿಯಿಲ್ಲದ ತಮ್ಮ

ಭಾಷೆಯನ್ನು ಮಾತನಾಡುತ್ತಾರೆ. ಸರ್ಕಾರದ ಸೌಲಭ್ಯಗಳನ್ನು ಪಡೆಯುವಲ್ಲಿ ಹಿಂದುಳಿದಿದೆ ಎಂಬುದು ಗಮನಾರ್ಹ ವಿಷಯವಾಗಿದೆ.

೪. ದುರಗ ಮುರಗಿ ಸಮುದಾಯ

ಈ ಸಮುದಾಯವು ಹಂಪಿ ಪರಿಸರದ ವ್ಯಾಪ್ತಿಯಲ್ಲಿ ಬರುವ ಕಂಪ್ಲಿ, ಕಮಲಾಪುರಗಳಲ್ಲಿ ಕಂಡುಬರುತ್ತದೆ. ಇವರಲ್ಲಿ ಶಿಕ್ಷಣ ಪಡೆದವರೇ ಇಲ್ಲದ್ದು ಕಾಣುತ್ತದೆ. ಕಂಪ್ಲಿಯಲ್ಲಿ ಒಬ್ಬರು, ಕಮಲಾಪುರದಲ್ಲಿ ಒಬ್ಬರು ವಿದ್ಯಾರ್ಥಿಗಳಿದ್ದಾರೆ. ಇವರು ಶಿಕ್ಷಣದಿಂದ ಬಹುದೂರದಲ್ಲಿದ್ದಾರೆ. ಸರ್ಕಾರವು ಕೂಡ ಇವರತ್ತ ಗಮನಹರಿಸಿಲ್ಲ. ಸರ್ಕಾರದ ಯೋಜನೆಗಳು ಇವರನ್ನು ತಲುಪಿಲ್ಲದಿರುವುದು ವಿಷಾದನೀಯವಾದ ಸಂಗತಿಯಾಗಿದೆ.

೫. ಇತರ ಅಲೆಮಾರಿ ಸಮುದಾಯಗಳು

ಹಂಪಿ ಪರಿಸರದಲ್ಲಿ ಅನೇಕ ಅಲೆಮಾರಿ ಸಮುದಾಯಗಳು ಇದ್ದದ್ದು ಕಂಡುಬರುತ್ತದೆ. ಅವುಗಳೆಂದರೆ, ಸುಡಗಾಡು ಸಿದ್ಧರು, ವೇಷಗಾರರು, ಸಿಳ್ಳೇಕ್ಯಾತರು, ಚೆನ್ನದಾಸರು, ಮೋಡಿಕಾರರು ಮುಂತಾದ ಸಮುದಾಯಗಳ ಶಿಕ್ಷಣದಿಂದ ವಂಚಿತಗೊಂಡಿವೆ. ಸರ್ಕಾರವು ಇವರಿಗೆ ಶಿಕ್ಷಣ ನೀಡುವುದಕ್ಕೋಸ್ಕರ ಕಂಪ್ಲಿಯಲ್ಲಿ ಟೆಂಟ್‌ಸ್ಕೂಲ್, ಹೊಸಪೇಟೆಯಲ್ಲಿ ಟೆಂಟ್‌ಸ್ಕೂಲ್, ಬಳ್ಳಾರಿಯಲ್ಲಿ ಟೆಂಟ್ ಸ್ಕೂಲ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಇವುಗಳಿಂದ ಅಷ್ಟಾಗಿ ಲಾಭವಾಗಿಲ್ಲ. ಇನ್ನೂ ಶಾಲೆಗಳ ಸ್ಥಾಪನೆ ಅಗತ್ಯವಿದೆ. ಸರ್ಕಾರ ಇದರ ಕಡೆ ಗಮನ ಹರಿಸಬೇಕಾಗುವುದು ಅವಶ್ಯವಿದೆ.

ಹೀಗೆ ಹಂಪಿ ಪರಿಸರದಲ್ಲಿ ಬರುವ ಬುಡಕಟ್ಟು ಸಮುದಾಯಗಳು ಶೈಕ್ಷಣಿಕವಾಗಿ ಬಹಳ ಹಿಂದುಳಿದಿದ್ದಾರೆ. ಇವರ ಸ್ಥಿತಿ ಶೋಚನೀಯವಾಗಿದೆ. ಇವರ ಈ ಸ್ಥಿತಿಗೆ ಆರ್ಥಿಕತೆಯೇ ಕಾರಣವಾಗಿದೆ. ಬಡತನದಿಂದ ಬಳಲುವ ಇವರು ಅಲೆಮಾರಿ ಜೀವನ ನಡೆಸುವುದರಿಂದಾಗಿ ಶಿಕ್ಷಣ ಆಕಾಶದಂತಾಗಿದೆ.

೪.೪. ರಾಜಕೀಯ

ಸಾಮಾಜಿಕ ರಚನೆಯಲ್ಲಿ ರಾಜಕೀಯ ಪಾತ್ರ ಮಹತ್ವದ್ದು. ಇದೊಂದು ರಾಜ್ಯದ, ದೇಶದ ಬೆಳವಣಿಗೆಯ ನಿರ್ಧಾರಕ ಅಂಶವೂ ಹೌದು. ರಾಜ್ಯಭಾರ ವ್ಯವಸ್ಥೆಯನ್ನು ರೂಪಿಸುವವರು ಆಳುವ ವರ್ಗದವರು. ಈ ವ್ಯವಸ್ಥೆ ತೆಗೆದುಕೊಂಡಾಗ ಹಿಂದೆ ಸಾಮಾನ್ಯವಾಗಿ ಅರಸು ಮನೆತನಗಳ ರಾಜ್ಯ ಆಡಳಿತ ವ್ಯವಸ್ಥೆ ಕಂಡುಬರುತ್ತದೆ. ರಾಜ್ಯವನ್ನು ರಾಜಮನೆತನದ ಖಾಸಗಿ ಚಟುವಟಿಕೆ ಎಂಬರ್ಥದಲ್ಲಿ ನೋಡಲಾಯಿತೇ ಹೊರತು ಸಾಮಾಜಿಕ ಪ್ರಕ್ರಿಯೆಯ ಸಾವಯವ ಅಂಗವನ್ನಾಗಿ ನೋಡಲಿಲ್ಲ. ರಾಜಕೀಯ ಎಂಬುದನ್ನು ಸಾಮಾಜಿಕ ಅಧಿಕಾರ ಹಂಚಿಕೆಯ ಹಾಗೂ ಗಳಿಕೆಯ ವ್ಯವಸ್ಥೆ ಎಂಬುದಾಗಿ ತಿಳಿಯದೆ ಕೇವಲ, ಸೈನ್ಯ, ಯುದ್ಧ, ರಾಜವಂಶಗಳ

ಸಂಬಂಧ ಎಂಬರ್ಥದಲ್ಲಿ ಭಾವಿಸಲಾಯಿತು. ಹೀಗಾಗಿ ಅಂದಿನ ಕಾಲದ ಆಡಳಿತ ಅಥವಾ ರಾಜವ್ಯವಸ್ಥೆಯು ರಾಜರ ಚರಿತ್ರೆ ಅಥವಾ ರಾಜಕೀಯ ಚರಿತ್ರೆ ಎನ್ನುವ ಅರ್ಥದಲ್ಲಿ ವ್ಯಾಖ್ಯಾನಿಸಿರುವುದಕ್ಕೂ ತಪ್ಪುಗಳಿಗೆ ಮೂಲಕಾರಣ, ರಾಜ್ಯ ಎನ್ನುವುದು ಒಂದು ನಿರ್ದಿಷ್ಟ ಭೌಗೋಳಿಕ ಸೀಮಿಗೆ ಸಂಬಂಧಿಸಿದ್ದಾಗಿದೆ. ಅದೊಂದು ಆಳ್ವಿಕೆಯ ವ್ಯವಸ್ಥೆಯೂ ಹೌದು. ಅದರಲ್ಲಿ ಅರಸ, ಮಂತ್ರಿ, ಅಧಿಕಾರಿಗಳು, ಪ್ರಜೆಗಳು ಎಲ್ಲರೂ ಇರುತ್ತಾರೆ. ಅವರ ಸಂಬಂಧಗಳು ಪರಸ್ಪರ ಪೂರಕವಾದದ್ದೇ ಆಗಿದೆ. ಅವರೆಲ್ಲರಿಗೂ ಜವಾಬ್ದಾರಿಗಳಿರುತ್ತವೆ. ಇದರಿಂದಾಗಿ ಆಡಳಿತ ವಿಧಾನ ಸಾಮಾಜಿಕ ರಚನೆಗೆ ಅನುಗುಣವಾಗಿಯೇ ಇರುತ್ತಿತ್ತು. ಆಡಳಿತ ವ್ಯವಸ್ಥೆಯು ಅರಸ ಹಾಗೂ ಅರಸನಿಂದ ನೇಮಿಸಲ್ಪಟ್ಟ ಅಧಿಕಾರಿ ವರ್ಗಗಳ ನಡುವಿನ ರಾಜಕೀಯ ಒಪ್ಪಂದವಾಗಿಯೂ ಕಂಡುಬರುತ್ತದೆ. ಕೇಂದ್ರಾಡಳಿತ, ಪ್ರಾಂತೀಯ ಆಡಳಿತ, ಗ್ರಾಮಾಡಳಿತ ಇವು ಪರಸ್ಪರ ಸಂಬಂಧವನ್ನು ಹೊಂದಿರುತ್ತಿದ್ದವು. ಆಡಳಿತದ ಸ್ವರೂಪದಲ್ಲಿಯೂ ಬದಲಾವಣೆಗಳನ್ನು ಕಾಣುವುದು ಸಾಧ್ಯವಿರಲಿಲ್ಲ. ಕೇಂದ್ರಾಡಳಿತದಲ್ಲಿ ಚಕ್ರವರ್ತಿಗಳು, ಪ್ರಾಂತೀಯ ಆಡಳಿತದಲ್ಲಿ ಮಹಾಮಂಡಳೇಶ್ವರರು, ಮಹಾಸಾಮಂತರು, ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ವರ್ತಕ ಶ್ರೇಣಿಗಳು, ಮಹಾಜನರು, ಪ್ರಭುಗಾವುಂಡರು, ಮುಂತಾದವರು ಆಡಳಿತ ನಡೆಸುತ್ತಿದ್ದರು. ಇವರೆಲ್ಲರೂ ಪರಸ್ಪರ ಒಬ್ಬರಿಗೊಬ್ಬರು ಅಧೀನರಾಗಿರುತ್ತಿದ್ದರು. ಶ್ರೇಣೀಕೃತ ಸಮಾಜ ವ್ಯವಸ್ಥೆಯ ಮಾದರಿಯಲ್ಲಿಯೇ ಅಧಿಕಾರಿಗಳ ವಿವಿಧ ಶ್ರೇಣಿಗಳಿರುತ್ತಿದ್ದವು.

ಹೀಗೆ ಇರುವ ವ್ಯವಸ್ಥೆಯು ಭಾರತದಲ್ಲಿ ರಾಜಕೀಯ ವ್ಯವಸ್ಥೆಯೂ ಸಂಪೂರ್ಣವಾಗಿ ಅಥವಾ ಪರಿಪೂರ್ಣವಾದ ಅರ್ಥದಲ್ಲಿ ಗುರುತಿಸುವುದಾದರೆ ಭಾರತವು ಸ್ವಾತಂತ್ರ್ಯ ಪಡೆದ ನಂತರ ರಾಜಕೀಯ ವ್ಯವಸ್ಥೆಯು ಬದಲಾವಣೆ ಕಂಡುಕೊಂಡಿತ್ತು.

ಕರ್ನಾಟಕದಲ್ಲಿ ಅನೇಕ ಅರಸುಮನೆತನಗಳು ರಾಜಕೀಯ ಅಥವಾ ಆಡಳಿತ ನಡೆಸಿರುವುದು ಇತಿಹಾಸದಿಂದ ತಿಳಿಯುತ್ತದೆ. ಇವುಗಳಲ್ಲಿ ವಿಜಯನಗರ ಸಾಮ್ರಾಜ್ಯವು ಒಂದು. ಇದು ಆಳ್ವಿಕೆ ಮಾಡಿದ್ದು ಹಂಪಿಯನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡು ಸುಮಾರು ೨೫೦ ವರ್ಷಗಳ ಕಾಲ ರಾಜಕೀಯ ಮಾಡಿದ್ದು ತಿಳಿದುಬರುತ್ತದೆ. ಇದು ಕೂಡ ಆಡಳಿತ ಅಥವಾ ರಾಜಕೀಯ ವ್ಯವಸ್ಥೆಯು ಮೇಲೆ ತಿಳಿಸಿರುವ ಹಾಗೇ ರಾಜಭಾರ ಮಾಡಿರಬಹುದು ಎಂದು ಹೇಳಬಹುದು. ನಂತರ ಕೆಲವು ದಶಕಗಳ ನಂತರ ಭಾರತ ಸ್ವಾತಂತ್ರ್ಯ ಪಡೆದು ಪ್ರಜಾಪ್ರಭುತ್ವ ಸರ್ಕಾರ ರಾಜಕೀಯ ವ್ಯವಸ್ಥೆ ಬದಲಾವಣೆ ಕಂಡು ಸುಮಾರು ೬೩ ವರ್ಷಗಳು ಕಳೆದರು. ಇಲ್ಲಿನ ಕೆಲವು ಬುಡಕಟ್ಟು ಅಥವಾ ಆದಿವಾಸಿ ಹಾಗೂ ಕೆಳವರ್ಗದ ಜನರಿಗೆ ಇನ್ನೂ ರಾಜಕೀಯ ಚುಕ್ಕಾಣಿ ಹಿಡಿಯುವಲ್ಲಿ ಆಗುತ್ತಿಲ್ಲ. ಕಾರಣ ಇನ್ನೂ ಕೂಡ ಜಾತಿ ವ್ಯವಸ್ಥೆ ಏಣಿ ಶ್ರೇಣಿ ವ್ಯವಸ್ಥೆ ಅಂದಿನಿಂದ ಇಂದಿನವರೆಗೂ ಎದ್ದು ಕಾಣುತ್ತದೆ. ಅಥವಾ ಪ್ರಭಾವ ಬೀರುತ್ತ ಬಂದಿದೆ ಎಂದು ಹೇಳಲು ಪ್ರಸ್ತುತವಾಗಿ ಕಂಡುಬರುವ ರಾಜಕೀಯ ವ್ಯವಸ್ಥೆಯೇ ಸಾಕ್ಷಿಯಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಹಂಪಿ ಪರಿಸರದಲ್ಲಿ ಬರುವ ಬುಡಕಟ್ಟು ಸಮುದಾಯಗಳು ರಾಜಕೀಯವಾಗಿ ತೀರಾ ಹಿಂದುಳಿದಿವೆ. ರಾಜಕೀಯ ಪ್ರಜ್ಞೆ ಈ ಬುಡಕಟ್ಟುಗಳಲ್ಲಿ ಇಲ್ಲದಿರುವುದು ಕಂಡುಬರುವುದು. ಇತ್ತೀಚೆಗೆ ಜಾಗತೀಕರಣ ಪ್ರಭಾವ, ಸಾರಿಗೆ-ಸಂಪರ್ಕಗಳ ವ್ಯವಸ್ಥೆ, ಅಲ್ಪ ಪ್ರಮಾಣದ ಜನಸಂಪರ್ಕದಿಂದಾಗಿ ಮತದಾನ ಮಾಡುವ ಅವಕಾಶ ದೊರೆತಿದೆಯೇ ಹೊರತು ರಾಜಕಾರಣದ ಬಗ್ಗೆ ಎಳ್ಳಷ್ಟು ಅರಿವಿಲ್ಲವೆಂಬುದು ವಿಷಾದಕರ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಈ ಪರಿಸರದಲ್ಲಿ ಬರುವ ಬುಡಕಟ್ಟುಗಳ ರಾಜಕೀಯ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಆದ್ದರಿಂದ ಈ ಬುಡಕಟ್ಟುಗಳ ರಾಜಕೀಯ ವಿಚಾರಗಳನ್ನು ಕುರಿತು ವಿವರಿಸಲು ಪ್ರಯತ್ನಿಸಲಾಗಿದೆ.

೧. ಬೇಡ ಬುಡಕಟ್ಟು ಸಮುದಾಯ

ಈ ಬುಡಕಟ್ಟು ಸಮುದಾಯವು ಹಂಪಿ ಪರಿಸರದಲ್ಲಿ ರಾಜಕೀಯವಾಗಿ ಹಿಂದುಳಿದಿದೆ. ಇತ್ತೀಚಿನ ದಿನಗಳಲ್ಲಿ ರಾಜಕೀಯವಾಗಿ ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಸಂವಿಧಾನ ಕಲ್ಪಿಸಿರುವ ಮೀಸಲಾತಿಯ ಹಿನ್ನೆಲೆಯಲ್ಲಿ ಇವರಿಗೆ ರಾಜಕೀಯ ಸ್ಥಾನಮಾನಗಳು ದೊರಕುತ್ತಿವೆಯೋ ಹೊರತು ಸಮಾಜ ಇವರಿಗೆ ಅಂತಹ ಅವಕಾಶಗಳು ದೊರಕದಂತೆ ನೋಡಿಕೊಳ್ಳುತ್ತಿವೆ.

ರಾಜಕೀಯವಾಗಿ ಪ್ರಭಾವಿತವಾಗಿರುವ ಮೇಲ್ವರ್ಗದವರು ಇವರನ್ನು ರಾಜಕೀಯದಿಂದ ದೂರ ಉಳಿಯುವಂತೆ ಮಾಡಿದ್ದು ಕಂಡುಬರುವುದು. ಯಾವುದೇ ರಾಜಕೀಯ ಪಕ್ಷ ಇವರ ಬೆಂಬಲವಿಲ್ಲದೆ ಈ ಪರಿಸರದಲ್ಲಿ ಆಯ್ಕೆಯಾಗುವುದು ದುಸ್ತರ ಸಂಗತಿಯಾಗಿದೆ. ಬಹು ಸಂಖ್ಯಾತರಾದ ಬೇಡರು ಅಲ್ಪಸಂಖ್ಯಾತರ ಆಳ್ವಿಕೆಯಲ್ಲಿರಬೇಕಾಗಿತ್ತು. ಇತ್ತೀಚಿನ ದಿನಗಳಲ್ಲಿ ರಾಜಕೀಯವಾಗಿ ಅಂಬೆಗಾಲಿಡುತ್ತಿದೆ. ಇವರ ಪ್ರವೇಶ ಮೇಲ್ವರ್ಗದವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಕಂಪ್ಲಿಯಲ್ಲಿ ಟಿ.ಸುರೇಶಬಾಬು ಶಾಸಕರಾಗಿದ್ದಾರೆ. ಬಳ್ಳಾರಿ ನಗರ ಕ್ಷೇತ್ರದಿಂದ ಶ್ರೀರಾಮುಲು ಶಾಸಕರಾಗಿ, ಕ್ಯಾಬಿನೆಟ್ ದರ್ಜೆ ಮಂತ್ರಿಯಾಗಿದ್ದಾರೆ. ಜೆ.ಶಾಂತ ಬಳ್ಳಾರಿ ಸಂಸದೆಯಾಗಿರುವುದು ಅಲ್ಲದೆ ಇನ್ನಿತರ ಗ್ರಾಮ ಪಂಚಾಯಿತಿಗಳ ಸದಸ್ಯರು, ಜಿಲ್ಲಾ ಪಂಚಾಯತ್ ಸದಸ್ಯರು ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರಾಗಿರುವುದು ಕಂಡುಬರುತ್ತದೆ. ಆದರೂ ಕೂಡ ಇವರ ರಾಜಕೀಯ ಕ್ಷೇತ್ರದಲ್ಲಿ ಇವರ ಶೇಕಡಾ ಪ್ರಮಾಣ ತೀರಾ ಕಡಿಮೆಯಿದೆ ಎಂದು ಹೇಳಬಹುದು. ಹೀಗೆ ಹಿಂದುಳಿದ ಬೇಡ ಬುಡಕಟ್ಟು ಸಮುದಾಯವು ಇನ್ನೂ ರಾಜಕೀಯವಾಗಿ ಹೆಮ್ಮರವಾಗಿ ಬೆಳೆಯಬೇಕಾಗಿರುವುದು ಅವಶ್ಯವಾಗಿದೆ. ಸರ್ಕಾರವು ಕೂಡ ಹೆಚ್ಚಿನ ಸ್ಥಾನಮಾನಗಳನ್ನು ಕಲ್ಪಿಸಬೇಕಾಗಿದೆ.

೨. ಹಕ್ಕಿಪಿಕ್ಕಿ ಸಮುದಾಯ

ಹಂಪಿ ಪರಿಸರದಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯವು ರಾಜಕೀಯವಾಗಿ ಅತ್ಯಂತ ಹಿಂದುಳಿದಿದೆ ಎನ್ನುವುದು ಹೇಳುವುದಾದರೆ ಕಂಪ್ಲಿಯಲ್ಲಿ ಕಂಡುಬರುವ ಹಕ್ಕಿಪಿಕ್ಕಿ ಕಾಲೋನಿಯಲ್ಲಿ ವಾಸಿಸುವ ಸಮುದಾಯದಿಂದ ತಿಳಿದು ಬರುತ್ತದೆ. ಇವರು ರಾಜಕೀಯಕ್ಕೆ ಪ್ರವೇಶಿಸುವ ಮನಸ್ಸಿದ್ದರು ಅವರಿಗೆ ಯಾವುದೇ ಇನ್ನೂ ಅವಕಾಶ ದೊರಕಿಸಿ ಕೊಡದೇ ಇರುವ ಸಂಗತಿಯಾಗಿದೆ. ಹಾಗೂ ಸ್ವಾತಂತ್ರ್ಯ ಬಂದು ೬೩ ವರ್ಷಗಳಾದರೂ ಕೂಡ ಇವರಿಗೆ ರಾಜಕೀಯ ಸ್ಥಾನಮಾನ ಸಿಗದಂತೆ ಮಾಡಿರುವುದು ದುರಂತ ಅಲ್ಲದೆ ಮತದಾರರ ಪಟ್ಟಿಯಲ್ಲಿ ಇವರ ಹೆಸರುಗಳು ಸೇರಿಸಿದರು ಸಂಪೂರ್ಣವಾಗಿ ಇನ್ನೂ ಕಂಪ್ಲಿಯಲ್ಲಿ ಕೆಲವು ಕುಟುಂಬಗಳಿಗೆ ಅಥವಾ ಕುಟುಂಬದ ಸದಸ್ಯರ ಹೆಸರು ಸೇರಿಲ್ಲ ಎಂದು ಕ್ಷೇತ್ರ ಕಾರ್ಯದಿಂದ ತಿಳಿದುಬರುತ್ತದೆ. ಆಗಾಗಿ ಇವರು ಇನ್ನೂ ರಾಜಕೀಯದಿಂದ ದೂರುವುಳಿವಂತಾಗಿದೆ. ಹಾಗೂ ಇವರತ್ತ ಯಾವ ರಾಜಕೀಯ ಪಕ್ಷಗಳು ಕೂಡ ಗಮನಹರಿಸಿಲ್ಲದಿರುವುದು ವಿಷಾದಕರವಾಗಿದೆ.

೩. ಲಂಬಾಣಿ ಸಮುದಾಯ

ಹಂಪಿ ಪರಿಸರದಲ್ಲಿ ಲಂಬಾಣಿ ಸಮುದಾಯವು ಕಂಡುಬರುವುದು. ಈ ಸಮುದಾಯವು ಇಲ್ಲಿ ರಾಜಕೀಯವಾಗಿ ಅಷ್ಟಾಗಿ ಗುರುತಿಸಿಕೊಂಡಿಲ್ಲ. ಕಾರಣವಿಷ್ಟೇ ಜೀವನ ಜಟಕಾಬಂಡಿ ನಡೆಯುವುದೇ ದೊಡ್ಡ ಪ್ರಮಾದವಾಗಿದೆ. ಬಡತನ ಇವರ ಹೆಗಲ ಮೇಲೇರಿದೆ. ಇಂತಹ ಅಹಿತಕರ ವಾತಾವರಣವಿರುವುದರಿಂದ ರಾಜಕೀಯದಿಂದ ತೀರಾ ಹಿಂದುಳಿದಿದ್ದಾರೆ. ಆದರೂ ಕೂಡ ಇತ್ತೀಚಿನ ದಿನಮಾನಗಳಲ್ಲಿ ಈ ಸಮುದಾಯ ರಾಜಕೀಯ ಪ್ರವೇಶಕ್ಕೆ ಅನುಕೂಲಕರವಾದ ವಾತಾವರಣ ಸೃಷ್ಟಿಸಿಕೊಳ್ಳಲು ಶಿಕ್ಷಣವೇ ಮಾರ್ಗದರ್ಶಿಯಾಗಿದೆ. ಇವರು ತಾಂಡಾಗಳಲ್ಲಿ ವಾಸಿಸುವುದರಿಂದ ರಾಜಕೀಯ ಪ್ರಜ್ಞೆ ಇಲ್ಲದಂತಾಗಿದೆ. ರಾಜಕೀಯ ಪಕ್ಷಗಳ ಭರಾಟೆಯಿಂದಾಗಿ ರಾಜಕೀಯವು ಲಂಬಾಣಿ ಸಮುದಾಯದತ್ತ ನಡೆದಿದೆ. ಇವರ ರಾಜಕೀಯ ಸ್ಥಾನಮಾನಗಳು ಕೂಡ ಸಂವಿಧಾನದ ಮೀಸಲಾತಿಯಿಂದ ಸಿಗುವುವೇ ಹೊರತು. ಇವರ ನಿಷ್ಠೆ ಸೇವೆಯಿಂದಲ್ಲವೆಂದು ಹೇಳಬಹುದು. ಈ ಸಮುದಾಯ ಬಹು ಸಂಖ್ಯೆಯನ್ನು ಹೊಂದಿಲ್ಲ. ಕೆಲವೇ ಕೆಲವು ತಾಂಡಾಗಳು ಈ ಪರಿಸರದಲ್ಲಿ ಇವೆ. ಅದರಲ್ಲಿ ಕೆರೆ ತಾಂಡಾದಲ್ಲಿ ೪, ೫ ಜನರು ಕಮಲಾಪುರದ ಪಟ್ಟಣ ಪಂಚಾಯಿತಿಯ ಸದಸ್ಯರಾಗಿದ್ದಾರೆ. ಜಿಲ್ಲಾ ಪಂಚಾಯಿತಿಯ ಸ್ಥಾನಮಾನಗಳು ಇವರಿಗೆ ಲಭಿಸಿಲ್ಲದ್ದು ಖೇದಕರವಾದ ಸಂಗತಿಯಾಗಿದೆ.

೪. ದುರುಗ ಮುರಗಿ ಸಮುದಾಯ

ಹಂಪಿ ಪರಿಸರದಲ್ಲಿ ಈ ಸಮುದಾಯ ಕಂಪ್ಲಿ ಮತ್ತು ಕಮಲಾಪುರ ಗ್ರಾಮಗಳಲ್ಲಿ ಕಂಡುಬರುತ್ತದೆ. ಇವರಿಗೆ ರಾಜಕೀಯ ಪ್ರಜ್ಞೆ ಗೊತ್ತಿದ್ದು ಗೊತ್ತಿಲ್ಲದಂತೆ ಇರುವುದು

ಕಂಡುಬರುತ್ತದೆ. ಆದ್ದರಿಂದ ಈ ಸಮುದಾಯದಲ್ಲಿ ಯಾರು ಜನಪ್ರತಿನಿಧಿಗಳಾಗಿಲ್ಲ. ಮತ್ತು ಇನ್ನೂ ಕೆಲವರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿಲ್ಲದಿರುವುದು ತಿಳಿದು ಬರುತ್ತದೆ. ಇವರು ಜೀವನ ಸಾಗಿಸುವುದೇ ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ರಾಜಕೀಯ ಪ್ರವೇಶಿಸುವುದು ದೂರದ ಮಾತಾಗಿದೆ. ರಾಜಕೀಯವಾಗಿ ಇವರನ್ನು ಮೇಲೆತ್ತಲು ಯಾವ ಪಕ್ಷಗಳೂ ಕಾರ್ಯನಿರ್ವಹಿಸುತ್ತಿಲ್ಲ ಇದರಿಂದ ಇವರಿಗೆ ರಾಜಕೀಯ ಎಂಬುದು ಗೋಚರವಾದ ಸಂಗತಿಯಾಗಿದೆ. ಹೀಗಾಗಿ ಇವರು ರಾಜಕೀಯವಾಗಿ ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದಾರೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

೫. ಇತರೆ ಅಲೆಮಾರಿ ಬುಡಕಟ್ಟು ಸಮುದಾಯಗಳು

ಹಂಪಿ ಪರಿಸರದಲ್ಲಿ ಅನೇಕ ಅಲೆಮಾರಿ ಸಮುದಾಯಗಳು ಕೊರಮರೂ, ಎಳವರು, ಸುಡಾಗಾಡುಸಿದ್ದರು, ಹಾವಾಡಿಗರು, ಮೋಡಿಕಾರರು, ಮತ್ತು ಗೋಸಂಗಿ ಮುಂತಾದ ಅಲೆಮಾರಿ ಸಮುದಾಯಗಳು ಕಂಪ್ಲಿ, ವೆಂಕಟಾಪುರ, ಬುಕ್ಕಸಾಗರ, ಕಮಲಾಪುರ ಮತ್ತು ಕಡ್ಡಿರಾಂಪುರ, ಹಂಪೆಯಲ್ಲಿ ಇರುವುದು ತಿಳಿದುಬರುತ್ತದೆ. ಕಂಪ್ಲಿಯಲ್ಲಿ ಸುಡಗಾಡು ಸಿದ್ಧರ ಸಮುದಾಯದಲ್ಲಿ ಒಬ್ಬರು ಪಟ್ಟಣ ಪಂಚಾಯಿತಿಯ ಸದಸ್ಯರಾಗಿದ್ದಾರೆ. ಉಳಿದ ಯಾವ ಅಲೆಮಾರಿ ಸಮುದಾಯಗಳಲ್ಲಿ ರಾಜಕೀಯ ಪ್ರತಿನಿಧಿಗಳು ಇಲ್ಲದ್ದು ಕಂಡುಬರುತ್ತದೆ. ಇವರಿಗೆ ರಾಜಕೀಯ ಪ್ರವೇಶಿಸುವ ಅವಕಾಶವಿದ್ದರೂ ಪ್ರವೇಶಕ್ಕೆ ಸಮಾಜ ಅವಕಾಶ ನೀಡುವುದಿಲ್ಲ. ಸಂವಿಧಾನದಿಂದ ಕಲ್ಪಿಸಿದ ಮೀಸಲಾತಿಯನ್ನು ಬೇರೊಬ್ಬರು ಕಬಳಿಸುವುದರಿಂದ ಇವರಿಗೆ ಅವಕಾಶವಿಲ್ಲದಂತಾಗಿದೆ. ಹೀಗಾಗಿ ಈ ಅಲೆಮಾರಿ ಸಮುದಾಯಗಳು ರಾಜಕೀಯವಾಗಿ ತೀರಾ ಹಿಂದುಳಿದಿರುವುದು ತಿಳಿದುಬರುವ ಸಂಗಾತಿಯಾಗಿದೆ.

೪.೫. ಧಾರ್ಮಿಕ

ಭಾರತ ಅನೇಕ ಬುಡಕಟ್ಟು ಹಾಗೂ ಇತರ ಅಲೆಮಾರಿ ಸಮುದಾಯಗಳಿಂದ ಕೂಡಿರುವ ದೇಶ. ಸಾವಿರಾರು ಬುಡಕಟ್ಟುಗಳು ಇಲ್ಲಿ ವಾಸಿಸುತ್ತಿದ್ದು, ತಮ್ಮದೇ ಆದ ವೈಶಿಷ್ಟ್ಯಗಳಿಂದ ಕೂಡಿರುತ್ತವೆ. ಆದ್ದರಿಂದ ಭಾರತೀಯ ಸಾಮಾಜಿಕ ಸಂರಚನಾವ್ಯವಸ್ಥೆಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ್, ಸಿಖ್ ಹೀಗೆ ಅನೇಕ ಧರ್ಮಗಳು ವಿಭಿನ್ನ ಸಂಸ್ಕೃತಿಗಳನ್ನು ರೂಢಿಸಿಕೊಂಡು ನೆಲೆಕಂಡುಕೊಂಡಿರುವುದು ವಾಸ್ತವ. ಇಷ್ಟಾದರೂ ಸಹ ನಮ್ಮ ಈ ಭೂಮಿಯು ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಕೊಂಡು ತನ್ನದೇ ಆದ ವಿಶಿಷ್ಟ್ಯ ಸಂಸ್ಕೃತಿಯನ್ನು ಪ್ರಪಂಚಕ್ಕೆ ನೀಡಿದೆ ಎಂದೆನ್ನಬಹುದು.

ಧರ್ಮವನ್ನು ಸಾಧನವನ್ನಾಗಿ ಇಟ್ಟುಕೊಂಡು ಸಮಾಜದಲ್ಲಿ ಯಜಮಾನಿಕೆಯನ್ನು ಸ್ಥಾಪಿಸುವುದೇ ಧಾರ್ಮಿಕ ಪ್ರಭುತ್ವ, ಇದು ಸಮಾಜದಲ್ಲಿ ಶಾಶ್ವತವಾದ ಪರಿಣಾಮಗಳನ್ನು

ಬೀರುತ್ತದೆ. ಧಾರ್ಮಿಕ ಪ್ರಭುತ್ವವು ರಾಜಪ್ರಭುತ್ವಕ್ಕಿಂತಲೂ ಹೆಚ್ಚು ಅಧಿಕಾರ, ಸಾಮಾರ್ಥ್ಯವನ್ನು ಹೊಂದಿತ್ತು. ಅರಸರುಗಳು ತಮ್ಮನ್ನು ದೇವರಿಗೆ ಸಮಾನ ಅಥವಾ ದೇವರ ಪ್ರತಿನಿಧಿಗಳು ಮುಂತಾಗಿ ಕರೆದುಕೊಂಡಿರುವುದು ಈ ಕಾರಣದಿಂದಾಗಿಯೇ. ಧಾರ್ಮಿಕ ಪ್ರಭುತ್ವವು ಲೌಕಿಕದೊಂದಿಗೆ ಅಲೌಕಿಕ ಜಗತ್ತನ್ನು ನಿರ್ಮಿಸಿಕೊಂಡು ಜನರ ಬದುಕಿನ ಮೇಲೆ ನೇರ ಪ್ರವೇಶವನ್ನು ಪಡೆಯಿತು. ಆದರೆ ಧರ್ಮದ ಸರಳ ವ್ಯಾಖ್ಯಾನದಿಂದ ಈ ಸಂಸ್ಕೃತಿಕ ಯಜಮಾನಿಕೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಧಾರ್ಮಿಕ ಪ್ರಭುತ್ವವು ಮೇಲ್ನೋಟಕ್ಕೆ ಕೇವಲ ಧಾರ್ಮಿಕ ಆಚರಣೆಗಳಿಗಷ್ಟೇ ಸೀಮಿತಗೊಂಡ ವ್ಯವಸ್ಥೆಯಂತೆ ಕಂಡುಬರುತ್ತದೆ. ಜಾತಿ ವ್ಯವಸ್ಥೆ ಮತು ದೇವಾಲಯಗಳು ಧಾರ್ಮಿಕ ಪ್ರಭುತ್ವವನ್ನು ನಿರಂತರವಾಗಿ ಮುಂದುವರಿಯುವಂತೆ ಮಾಡಿದವು. ಅಧ್ಯಯನದ ಈ ಅವಧಿಯಲ್ಲಿ ಧರ್ಮವು ಸಮಾಜದಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತಿತ್ತು ಅನ್ನುವುದು ದಾಖಲೆಗಳಿಂದ ತಿಳಿದುಬರುತ್ತದೆ.

ಪ್ರಾಚೀನ ಕಾಲದಿಂದಲೂ ನೂರಾರು ಸಂಸ್ಥಾನಗಳು ಈ ಭೂಮಿಯ ಮೇಲೆ ಆಳ್ವಿಕೆ ನಡೆಸಿ ತಮ್ಮದೇ ಆದ ಸಂಸ್ಕೃತಿಯನ್ನು ಕೊಡುಗೆಯಾಗಿ ನೀಡಿರುವುದರಿಂದಲೋ ಏನೋ ಧಾರ್ಮಿಕ ಅಥವಾ ಜಾತಿಯ ಗಲಭೆಗಳಿಗೆ ಪ್ರಚೋದನೆ ನೀಡದೇ ಸರ್ವಧರ್ಮವನ್ನು ಸಮನಾಗಿ ನೋಡಿಕೊಂಡು ಅವುಗಳನ್ನು ಪೋಷಿಸಿಕೊಂಡು ಬಂದಿರುವುದಕ್ಕೆ ಸಾಕಷ್ಟು ಆಧಾರಗಳು ದೊರಕುತ್ತವೆ. ಕರ್ನಾಟಕದಲ್ಲಿ ಕೂಡ ಅನೇಕ ಅರಸು ಮನೆತನಗಳು ತಮ್ಮದೇ ಆದ ಸಂಸ್ಕೃತಿಯನ್ನು ಕೊಡುಗೆಯಾಗಿ ನೀಡಿರುವುದುಂಟು. ಹಾಗೇ ವಿಜಯನಗರ ಸಾಮ್ರಾಜ್ಯವು ಒಂದು ಇದು ಹಂಪಿಯನ್ನು ರಾಜ್ಯಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸಿ ತನ್ನದೇ ಸಾಂಸ್ಕೃತಿಕ ಕೊಡುಗೆಯನ್ನು ನೀಡಿದೆ ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಇದು ಮೂಲತಃ ವೈಷ್ಣವ ಧರ್ಮಪಂಥಿಯರು ಹಾಗೂ ಇನ್ನಿತರ ಧರ್ಮ ಪ್ರಚಾರಕರು ತಮ್ಮ ಧರ್ಮದ ಪ್ರಚಾರವನ್ನು ಕೈಗೊಂಡಿದ್ದರು ಎಂದು ಆಧಾರಗಳಿಂದ ತಿಳಿಯುತ್ತದೆ.

ಪ್ರಸ್ತುತವಾಗಿ ಅಧ್ಯಯನಕ್ಕೊಳಪಡಿಸಲಾದ ಹಂಪಿ ಪರಿಸರದ ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿ ಎಂಬ ವಿಷಯವನ್ನಾಧರಿಸಿ ಧಾರ್ಮಿಕ ಹಿನ್ನಲೆ ಗುರುತಿಸುವುದಾದರೆ. ಬುಡಕಟ್ಟು ಹಾಗೂ ಇತರ ಅಲೆಮಾರಿ ಸಮುದಾಯಗಳ ಧರ್ಮ ಮತ್ತು ಲೋಕದೃಷ್ಟಿಯ ವಿಶಿಷ್ಟತೆ ಕೂಡ ಒಂದು ಭಾಗವಾಗಿದೆ. ಇವರು ಆಹಾರವನ್ನು ಸಂಪಾದಿಸಿಕೊಳ್ಳುವಲ್ಲಿ ಮಾನವರು ದೀರ್ಘವಾದ ಚರಿತ್ರೆಯನ್ನು ಹೊಂದಿದ್ದಾರೆ. ಬೇಟೆ, ಮೀನುಗಾರಿಕೆ, ಪಶುಪಾಲನೆ, ಕೃಷಿಪದ್ಧತಿಗಳ ಕ್ರಮಾಗತ ಬೆಳವಣಿಗೆಯಲ್ಲಿ ಅವರ ಆಹಾರ ಸಂಪಾದನೆಯಿದೆ. ಈ ಆಹಾರ ಸಂಪಾದನೆಗೆ ಮಾಡುವ ಶ್ರಮ ಮತ್ತು ವಿಧಿಯಾಚರಣೆಗಳ ಮೂಲಕ ಬುಡಕಟ್ಟು ಇತರ ಅಲೆಮಾರಿ ಸಮುದಾಯಗಳು ಧರ್ಮವೊಂದನ್ನು ರೂಪಿಸಿಕೊಂಡಿದ್ದಾರೆ. ಆದ್ದರಿಂದ ಧರ್ಮವೆನ್ನುವುದನ್ನು

ದುಡಿಮೆಯ ತಾತ್ವಿಕ ರೂಪ ಎಂದು ಕರೆಯಬೇಕಾಗುತ್ತದೆ. ಈ ಧರ್ಮದ ವಿಧಿಯಾಚರಣೆಗಳೆಲ್ಲ ಭೂಮಿ, ನೀರು, ಮಳೆ, ಬೆಳೆ, ಬೆಂಕಿಗೆ, ಸಂಬಂಧಪಟ್ಟೇ ಇರುತ್ತವೆ. ಅಂದರೆ ತಮ್ಮ ಸುತ್ತ ಮುತ್ತಲಿರುವ ಪ್ರಕೃತಿಯ ಜೊತೆ ಕಣ್ಣಿಗೆ ಕಾಣುವಂಥ ಸಂಗತಿಗಳ ಮತ್ತು ತಮ್ಮ ಆಹಾರ ಸಂಪಾದನೆಗೆ ಸಹಾಯಕವಾಗುವ ವಸ್ತುಗಳ ಬಳಕೆಯಲ್ಲಿ ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳ ಧರ್ಮ ಕಾಣಸಿಗುತ್ತದೆ.

ಇಂತಹ ಬುಡಕಟ್ಟು ಮತ್ತು ಇತರ ಅಲೆಮಾರಿನ ಸಮುದಾಯಗಳ ''ಧರ್ಮ ಎನ್ನುವ ಪರಿಕಲ್ಪನೆಗೆ ಕೆಲವು ಸಾರ್ವತ್ರಿಕ ಚಹರೆಗಳಿವೆ ಹಾಗೇ ಕೆಲವು ವೈಶಿಷ್ಟಗಳಿವೆ. ಉದಾಹರಣೆಗೆ. ಎಲ್ಲಾ ಬುಡಕಟ್ಟುಗಳೂ ನಿಸರ್ಗರಾಧಕರು ಎಂಬುದು ಹಾಗೂ ಪಿತೃಪೂರ್ವಿಕರ ಪೂಜಕರು ಎಂಬುದು ಇತರ ಬುಡಕಟ್ಟುಗಳಿಗೂ ಸಮಾನ. ಆದರೆ ಪ್ರತಿ ಬುಡಕಟ್ಟು ಸಮುದಾಯ ತನಗೆ ಪೂಜ್ಯ ಹಾಗೂ ವರ್ಜ್ಯವೆನಿಸುವ ''ಸಂಗತಿ''ಗಳ ಪಟ್ಟಿಯಲ್ಲಿ ವಿಭಿನ್ನ ನವಿಲು ಕೆಲವರಿಗೆ ಪೂಜ್ಯನಿಲಯ, ಕೆಲವರಿಗೆ ವರಾಹ ಪೂಜ್ಯನೀಯ, ಕೆಲವರಿಗೆ ಆಹಾರ ಸಂಗ್ರಹಣೆಗಾಗಿ ಬಳಸುವವನ್ನು ಅಥವಾ ಬೇಟೆ ಆಡಲು ಬಳಸುವ ವಸ್ತು ಪೂಜ್ಯನೀಯ, ಕೆಲವರಿಗೆ ಸಮೂಹದ ಏಳಿಗೆಗೆ ಶ್ರಮಿಸಿದ ವ್ಯಕ್ತಿ ಸಂಸ್ಕೃತಿ ನಾಯಕನಾಗಿರುತ್ತಾನೆ. ಉದಾ.. ಮ್ಯಾಸನಾಯಕರಿಗೆ ಗಾದ್ರಿಪಾಲನಾಯಕ, ಕಾಡುಗೊಲ್ಲರಿಗೆ ಜುಂಜಪ್ಪ, ಲಂಬಾಣಿಗಳಿಗೆ ಸೇವಾಲಾಲ್, ಹೀಗೆ ಅವರ ಸಾಂಸ್ಕೃತಿಕ ನಾಯಕರುಗಳು ಪೂಜನೀಯವಾಗಿರುತ್ತಾರೆ. ಇದು ಅವರವರ ಬೌಗೋಳಿಕತೆಯನ್ನು ಮಾತ್ರವಲ್ಲದೆ ಕುಲಸಂಸ್ಕೃತಿ ನಂಬಿಕೆ ಮುಂತಾದ ಅಂಶಗಳೂ ಕಾರಣವಾಗಿವೆ. ಅಂದರೆ ಅವರ ಸಂಸ್ಕೃತಿಯೇ ಅವರ ಧರ್ಮ, ವ್ಯಕ್ತಿ–ವ್ಯಕ್ತಿಗಳ ನಡುವಿನ ಸಂಬಂಧ, ಆಲೋಚನಾ ವಿಧಾನ, ದರ್ಶನ, ಪೂಜವಿಧಾನ, ದೇವತಾರಾಧನೆ ಹೀಗೆ ಎಲ್ಲವನ್ನು ಅವರ ಸಂಸ್ಕೃತಿ ಅವರಿಗೆ ಕೊಟ್ಟಿರುತ್ತದೆ.''[೨೧] ಅವರ ಸ್ಮೃತಿಯ ದರ್ಶನದಂತೆಯೇ ಅವರು ಜೀವಿಸುತ್ತಾರೆ. ''ಅಂದರೆ ಬುಡಕಟ್ಟು ಹಾಗೂ ಇತರ ಅಲೆಮಾರಿ ಸಮುದಾಯಗಳ ಸಮಾಜದಲ್ಲಿ ಏನಾದರೂ ಅವರ ಜೀವನದಂತೆ ಅವರ ಲೋಕದೃಷ್ಟಿ ಮತ್ತು ಧಾರ್ಮಿಕ ನಂಬಿಗೆಗಳೂ ಕೂಡ ಸಹಜವಾಗಿ ರೂಪುಗೊಂಡವುಗಳು. ಅವುಗಳ ನಡುವೆ ಇರುವ ವೈವಿಧ್ಯತೆ ಹಾಗೂ ಸಾರ್ವತ್ರಿಕತೆ ಮಾನವ ಜೀವನದ ಏಕತೆಯನ್ನು ಹಾಗೂ ಸಾಂಸ್ಕೃತಿಕ ವೈವಿಧ್ಯತೆಯನ್ನು ಏಕಕಾಲಕ್ಕೆ ಪ್ರತಿನಿಧಿಸುವಂತಿದೆ. ಅಂದರೆ ಅವರ ದುಡಿಮೆ ಚಲನಶೀಲತೆಯನ್ನು ಮೈಗೂಡಿಸಿಕೊಂಡು ಆಚರಣೆಯಲ್ಲಿರುತ್ತದೆ. ಅಂದರೆ ಬದಲಾವಣೆ ಮತ್ತು ನಿಸರ್ಗದೊಡನಿರುವ ಸಂಬಂಧ ಬುಡಕಟ್ಟು ಸಮುದಾಯದ ಪ್ರಮುಖ ಲಕ್ಷಣಗಳು. ತಾವು ಪವಿತ್ರವೆಂದು ನಂಬಿರುವ ಗಿಡ, ಮರ, ಬಳ್ಳಿ, ಪ್ರಾಣಿಗಳ ಬಗ್ಗೆ ಅವರಿಗೆ ಗೌರವ ಭಾವನೆ ಇದ್ದು, ಅವುಗಳ ವಂಶಾಭಿವೃದ್ಧಿಯಾಗುವಂತೆ ನೋಡಿಕೊಳ್ಳುವುದು ಬುಡಕಟ್ಟು ಧರ್ಮದ ತಾತ್ವಿಕತೆಯಾಗಿದೆ.

ಉಳಿಕೆ ಮತ್ತು ಪುನರುಜ್ಜೀವನ ಈ ಎರಡು ಸಂಗತಿಗಳು ಬುಡಕಟ್ಟು ಧರ್ಮವನ್ನು ರೂಪಿಸುತ್ತಾ, ಬೆಳೆಸುತ್ತಾಬಂದಿವೆ.[೨೨]

ಹಂಪಿ ಪರಿಸರದಲ್ಲಿ ಬರುವ ಬುಡಕಟ್ಟು ಸಮುದಾಯಗಳು ಧಾರ್ಮಿಕವಾಗಿ ವಿಭಿನ್ನವಾಗಿ ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ಜಗತ್ತಿನ ಯಾವ ಧರ್ಮಗಳತ್ತ ಕಿವಿಗೊಡದೆ ನಿಸರ್ಗವೇ ದೇವರು, ಅದುವೇ ಧರ್ಮ ಎಂದು ಭಾವಿಸಿಕೊಂಡಿದ್ದರು. ಈ ಪ್ರದೇಶದಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ, ಇಸ್ಲಾಂ, ಕ್ರೈಸ್ತ ಧರ್ಮಗಳು ಅಸ್ತಿತ್ವದಲ್ಲಿದ್ದವು. ಆದರೆ ಈ ಧರ್ಮಗಳ ಪ್ರಜ್ಞೆ ಇವರಿಗೆ ಇರಲಿಲ್ಲ. ಅಲ್ಲದೇ ತಮ್ಮದೆಯಾದ ವಿಶಿಷ್ಟವಾದ ಧಾರ್ಮಿಕ ಆಚರಣೆಗಳನ್ನು ಆಚರಿಸುತ್ತಿದ್ದರು. ಇವರ ಜೀವನೋಪಾಯವೇ ಅತಂತ್ರ ಸ್ಥಿತಿಯಲ್ಲಿರುವಾಗ ಈ ಯಾವ ಧರ್ಮಗಳು ಇವರಿಗೆ ಅನ್ನವನ್ನು ನೀಡಲಿಲ್ಲ. ಈ ಬುಡಕಟ್ಟುಗಳ ಹತ್ತಿರ ಯಾವ ಧರ್ಮವು ಕೂಡ ಸ್ಪರ್ಶಿಸಲಿಲ್ಲ. ಇಂತಹ ಸಮಯದಲ್ಲಿ ಧಾರ್ಮಿಕ ಜಾಗೃತಿ ಮೂಡಿಸಿಕೊಂಡು ಈ ಬುಡಕಟ್ಟುಗಳು ಅಸ್ತಿತ್ವಕ್ಕೆ ಬರುವಷ್ಟು ಜ್ಞಾನವು ಕೂಡ ಇರಲಿಲ್ಲ. ಪಂಚಮಹಾಭೂತಗಳಾದ ಪೃಥ್ವಿ, ಆಪ್, ತೇಜ್, ವಾಯು, ಆಕಾಶಗಳೇ ಇವರಿಗೆ ಸರ್ವಸ್ವವಾಗಿದ್ದವು. ಈ ಬುಡಕಟ್ಟುಗಳು ಪಂಚಮಹಾಭೂತಗಳಿಂದ ನಿರ್ಮಾಣಗೊಂಡಿರುವ ಮರಗಳನ್ನು, ವಿಗ್ರಹಗಳನ್ನು ಆರಾಧಿಸುತ್ತಿದ್ದರು. ನದಿಯನ್ನು ಗಂಗಾದೇವಿ ಎಂದು, ಭೂಮಿಯನ್ನು ಭೂತಾಯಿಯೆಂದು, ಸೂರ್ಯ, ಚಂದ್ರ, ನಕ್ಷತ್ರಗಳನ್ನು ದೇವತೆಗಳೆಂದು ಪೂಜಿಸುತ್ತಿದ್ದರು. ಈ ಬುಡಕಟ್ಟು ಸಂಪ್ರದಾಯಗಳಲ್ಲಿ ಸ್ತ್ರೀ ದೇವತೆಯನ್ನು ಶಕ್ತಿ ದೇವತೆಯೆಂದು ಪೂಜಿಸುತ್ತಾರೆ. ಅಲ್ಲದೆ ಈ ಶಕ್ತಿ ದೇವತೆಗಳಿಗೆ ಕುರಿ, ಕೋಣ ಮುಂತಾದ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿಯ ಆಚರಣೆಗಳನ್ನು ಮಾಡುತ್ತಿದ್ದಾರೆ. ಇಂದಿಗೂ ಕೂಡ ಆ ಆಚರಣೆಗಳಿರುವುದು ಕಂಡುಬರುತ್ತವೆ.

ಉದಾ : ಬೇಡರು ಊರು ಮಾರಮ್ಮ, ಹುಲಿಗೆಮ್ಮ ದೇವತೆಯ ಆರಾಧಕರಾಗಿದ್ದಾರೆ. ಹನುಮಂತನನ್ನು ಪೂಜಿಸುವರು. ಯುಗಾದಿ, ಮಾಹಾನವಮಿ, ಮೊಹರಂ ಇನ್ನೂ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

ಲಂಬಾಣಿ : ಇವರು ಸೇವಾಲಾಲ್ ದೇವರ ಆರಾಧಕರಾಗಿದ್ದಾರೆ. ತಮ್ಮ ಸಮುದಾಯಕ್ಕೆ ಸಂಬಂಧಿಸಿದ ಇತರೆ ದೇವತೆಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ದೀಪಾವಳಿ ಹಬ್ಬ ಮತ್ತು ಹೋಳಿ ಹಬ್ಬಗಳು ಪ್ರಮುಖ ಹಬ್ಬಗಳಾಗಿವೆ.

ಹಕ್ಕಿ-ಪಿಕ್ಕಿ: ಇವರು ಅಕ್ಕಪಾಳ, ಬಾವಂದಿ, ಚಾವಂಡಿ, ಚಾಮುಂಡಿ, ದಾದಾಜಿ, ದುರನ್, ದುರ್ಗಾ, ಹನುಮಂತ ಕಾಳಾ, ಕಕ್ಕಲ್, ರಾವುಂಡಿ, ಎಲ್ಲಮ್ಮ ಇತ್ಯಾದಿ ದೈವಗಳನ್ನು ಆಚರಿಸುತ್ತಾರೆ.

ದುರಗ-ಮುರಗಿ: ಈ ಸಮುದಾಯದವರು ಮಾರೆಮ್ಮ ದೇವತೆಯನ್ನು ಪೂಜಿಸುವರು. ಭಾರತ ಹುಣ್ಣಿಮೆಯಲ್ಲಿ ಮಾರೆಮ್ಮ ದೇವತೆಗೆ ಕುರಿ, ಕೋಣಗಳನ್ನು ಬಲಿ ನೀಡುವುದು ಇವರ ವಿಶೇಷ ಆಚರಣೆಯಾಗಿದೆ.

ಇತರೆ ಅಲೆಮಾರಿಗಳು

ಸುಡುಗಾಡಸಿದ್ಧರು: ಶಿವ, ರಾಮ, ಸುಡುಗಾಡು ಸಿದ್ದೇಶ್ವರ ದೇವತೆಗಳನ್ನು ಆರಾಧಿಸುತ್ತಿದ್ದಾರೆ. ಯುಗಾದಿ ಹಬ್ಬವನ್ನು ಆಚರಿಸುವರು, ಬುಡ್ಗಜಂಗಮರು ಇವರು ಮಾರೆಮ್ಮ, ಸುಂಕ್ಲಮ್ಮ, ಜಂಬಲಮ್ಮ ಮುಂತಾದ ದೇವತೆಗಳನ್ನು ಮತ್ತು ಯುಗಾದಿ ಹಬ್ಬವನ್ನು ಆಚರಿಸುತ್ತಾರೆ.

ಗೋಸಂಗಿ: ಈ ಸಮುದಾಯದವರು ಆಯಿಮಾತಾ, ಕಡಕೋಳದೇವಿ ಎಂಬ ಶಕ್ತಿ ದೇವತೆಗಳನ್ನು ಆರಾಧಿಸುವರು.

ಈ ರೀತಿಯಾಗಿ ಈ ಪರಿಸರದಲ್ಲಿ ಕಂಡುಬರುವ ಬುಡಕಟ್ಟು ಸಮುದಾಯಗಳಲ್ಲಿ ಆಚರಣೆಗಳು ವಿಶಿಷ್ಟವಾಗಿವೆ.

೪.೬ ಔದ್ಯೋಗಿಕ (ಗಣಿಗಾರಿಕೆ)

ಗಣಿಗಾರಿಕೆಯಿಂದಾಗಿ ಪರಿಸರದ ಹಲವು ಕ್ಷೇತ್ರಗಳ ಮೇಲೆ ಆಗುತ್ತಿರುವ ಗುಣ ಅವಗುಣಗಳನ್ನು ಕುರಿತು ಚರ್ಚಿಸಲಾಗಿದೆ. ಈ ಚರ್ಚೆಯು ಮುಖ್ಯವಾಗಿ ಕ್ಷೇತ್ರ ಕಾರ್ಯದಿಂದ ನಾವು ಪಡೆದ ಮಾಹಿತಿ ಫಲತತೆಯನ್ನು ಕುರಿತು ಒಳಗೊಂಡಿರುತ್ತದೆ. ಸ್ವಾತಂತ್ರ್ಯದ ನಂತರ ಭಾರತ ದೇಶವು ಕಂಡುಕೊಂಡ ಅಭಿವೃದ್ಧಿ ನೀತಿಯು ಕೇವಲ ಬಂಡವಾಳವನ್ನು ಮರು ಉತ್ಪಾದಿಸುವ ಒಂದು ತಂತ್ರವಾಗಿ ಮಾತ್ರ ಬಳಕೆಯಾಯಿತು. ಎಂದು ಹೇಳಲು ಯಾವುದೇ ಪುರಾವೆಗಳ ಅಗತ್ಯವಿಲ್ಲ. ಸಮಾಜವಾದಿ ಸಮಾಜದ ಕನಸುಗಳನ್ನು ಕಂಡ ಭಾರತದ ಅಂದಿನ ಹಿರಿಕರ ನಡೆಗಳಲ್ಲಿ ಅನೇಕ ಸಮಸ್ಯೆಗಳಿದ್ದವು. ಸೈದ್ಧಾಂತಿಕವಾಗಿ ಅವರಿಗೆ ರಷ್ಯಾ ಮಾದರಿ ಹೆಚ್ಚು ಪ್ರಿಯವಾಗಿದೆ. ಸ್ವಾತಂತ್ರ್ಯ ನಂತರ ಅಭಿವೃದ್ಧಿಯ ಮಾದರಿಯನ್ನು ಯಥವತ್ತಾಗಿ ಯುರೋಪಿನಿಂದ ಪಡೆಯಲಾಗಿತ್ತು. ಸ್ವಾತಂತ್ರ್ಯ ನಂತರ ಸರಕಾರ ಯುರೋಪನ್ನು ಅಭಿವೃದ್ಧಿಯ ಮಾದರಿಯನ್ನಾಗಿ ಸ್ವೀಕರಿಸಿದ್ದು ಮಹತ್ವದ ತಪ್ಪು ರಾಜಕಾರಣದ ನಡೆಯಲಾಗಿತ್ತು. ಯುರೋಪಿನ ಅಭಿವೃದ್ಧಿ ನೀತಿಯೆಂದರೆ ಬಂಡವಾಳದಿಂದ ಬಂಡವಾಳವನ್ನು ಉತ್ಪಾದಿಸುವುದು. ಮಾನವ ಶಕ್ತಿಯನ್ನು ಪರಿಸರವನ್ನು ಈ ಭೂಮಿಯ ಆಳದಲ್ಲಿರುವ ಅಮೂಲ್ಯ ಖನಿಜಸಂಪತ್ತನ್ನು ನಿರ್ದಯತೆಯಿಂದ ಬಳಸಿ ಬಂಡವಾಳವನ್ನು ಇನ್ನು ದ್ವಿಗುಣಗೊಳಿಸುವುದು. ಅಭಿವೃದ್ಧಿಯೆಂದರೆ ಯುರೋಪಿನ ರಾಷ್ಟ್ರಗಳಿಗೆ ಬಂಡವಾಳದ ವಿಸ್ತರಣೆಯೇ ಆಗಿದೆ.

ಇದರ ಪರಿಣಾಮವು ಕರ್ನಾಟಕದ ಬಳ್ಳಾರಿ ಜಿಲ್ಲೆಯವರಿಗೂ ಅವಲಂಬಿಸಿದೆ ಎಂಬ ಗಹನವಾದ ವಿಷಯವಾಗಿದೆ. ಇಲ್ಲಿಯ ಪ್ರಮುಖವಾಗಿ ಜಿಂದಾಲ್ ಗಣಿಗಾರಿಕೆ ಇದು ೧೬೦೦೦

ಎಕರೆಯನ್ನು ಒಳಗೊಂಡಿದೆ ಎಮ್.ಎಸ್.ಪಿ.ಎಲ್. ಕೈಗಾರಿಕೆ ಇದರ ಮುಖ್ಯಸ್ಥ ಬಲ್ಡೋಟ ಇವರಿಂದ ಆರಂಭವಾದ ಈ ಗಣಿಗಾರಿಕೆಗಳು ಇಂದು ಪ್ರಖ್ಯಾತಿಯನ್ನು ಪಡೆದುಕೊಂಡಿವೆ. ಇಲ್ಲಿಯ ಜನರಿಗೆ ಒಂದು ಕಡೆ ತುಂಬಾ ಪರಿಣಾಮಕಾರಿಯಾದ ಹಾನಿಯನ್ನುಂಟು ಮಾಡಿದೆ. ಅದೇನೆಂದರೆ ಇಲ್ಲಿಯ ಪರಿಸರ ನಾಶ ಜನಜೀವನ ಅಸ್ತವ್ಯಸ್ತ ಕೃಷಿಯ ಮೇಲೆ ಪರಿಣಾಮ ಪ್ರಾಣಿಗಳ ಆರೋಗ್ಯದ ಮೇಲೆ ಹಾನಿಯನ್ನುಂಟು ಮಾಡಿದೆ. ಹಾಗೂ ಮುಖ್ಯ ಇಲ್ಲಿನ ಬುಡುಕಟ್ಟು ಹಾಗೂ ಇತರ ಅಲೆಮಾರಿ ಸಮುದಾಯಗಳ ದಿನನಿತ್ಯ ಬದುಕಿನ ಮೇಲೆ ಪರಿಣಾಮವನ್ನುಂಟು ಮಾಡಿವೆ ಇದರಿಂದಾಗಿ ಇವರ ಬದುಕು ಅತಂತ್ರ ಸ್ಥಿತಿಗೆ ಒಳಗಾಗಿರುವುದು ಕಂಡು ಬರುತ್ತದೆ.

ಆದಿವಾಸಿ ಸಮುದಾಯದ ಜನರು ತಮ್ಮ ಜೀವನೋಪಯಕ್ಕಾಗಿ ಅನೇಕ ಕಡೆ ವಲಸೆ ಹೋಗುತ್ತಿದ್ದರು. ತಮಗೆ ಎಲ್ಲಿ ಯೋಗ್ಯವೆನಿಸುತ್ತದೆ ಅಲ್ಲಿಗೆ ಅರಿದು ಹಂಚಿ ಹೋಗುವುದು ಕಾಣುತ್ತದೆ. ಅದೇ ರೀತಿಯಗಿ ದೇಶದ ಮೂಲೆ ಮೂಲೆಯಿಂದಲು ವಲಸೆ ಬಂದು ಈ ಪ್ರದೇಶದಲ್ಲಿ ಬಂದು ನೆಲೆನಿಂತುಕೊಂಡಿವೆ. (ಹಂಪೆ ಪರಿಸರ)ದಲ್ಲಿ ಕಾರಣ ಇಲ್ಲಿನ ಬಯಲು ಪ್ರದೇಶ, ನದಿ, ಬೆಟ್ಟ, ಹಾಗೂ ಹಂಪೆ ಒಂದು ಧಾರ್ಮಿಕ ಕ್ಷೇತ್ರವಾಗಿರುವುದರಿಂದ ಸಾಂಪ್ರದಾಯಿಕವಾಗಿ ಅವರ ಬಿಕ್ಷಾಟನೆಗೆ ಅನುಕೂಲವಾಗಿದೆ ಎಂದು ಕ್ಷೇತ್ರಕಾರ್ಯದಿಂದ ತಿಳಿದು ಬರುತ್ತದೆ. ಈ ಭಾಗದಲ್ಲಿ ಕಂಡುಬರುವ ಬುಡುಕಟ್ಟು ಹಾಗೂ ಅಲೆಮಾರು ಸಮುದಾಯಗಳು ಮೊದಲು ಮೂಲ ಕಸುಬಿನಿಂದ ಜೀವಿಸುತ್ತಿದ್ದರು. ಕೆಲವು ಕಾಲ ಕಳೆದ ನಂತರ ಸ್ಥಳೀಯ ಪರ್ಯಾಯ ಕಸುಬುಗಳನ್ನು ರೂಢಿಸಿಕೊಂಡಿರುವುದು ಕಂಡು ಬರುತ್ತದೆ. ವ್ಯಾಪಾರ, ಗುಡಿಕೈಗಾರಿಕೆ, ಕೃಷಿಕಾರ್ಮಿಕರಾಗಿ, ಇತ್ಯದಿ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಇಲ್ಲಿ ಅಧಿಕವಾಗಿ ಭತ್ತ, ಬಾಳೆ, ಮಲ್ಲಿಗೆ, ತೆಂಗು, ಇತರ ಬೆಳೆಗಳನ್ನು ಬೆಳೆಯಲಾಗುತ್ತದೆ. ಇದರಲ್ಲಿ ಇವರು ಭಾಗಿಯಾಗುತ್ತಿರುವುದು ತಿಳಿದು ಬರುತ್ತದೆ. ಆದರೆ ಇತ್ತೀಚಿಗೆ ಇಲ್ಲಿ ದೊಡ್ಡ ಪ್ರಮಾಣದಲ್ಲಿ ಗಣಿ ಉದ್ಯಮೆಗಳು ಆರಂಭವಾದಗಿನಿಂದ ಇವರು ಗಣಿಗಾರಿಕೆ ಕೆಲಸದಲ್ಲಿ ತೊಡಗಿಕೊಂಡಿರುವುದು ಕಾಣಲಾಗುತ್ತದೆ. ಇವರು ಸಾಂಪ್ರದಾಯ ಶೀಲರು ಅಂದರು ಆಗಿರುವುದರಿಂದ ಇವರು ಏಳಿಗೆಗಿಂತಲೂ ಮಾಲೀಕರ ಏಳಿಗೆಗೆ ಹೆಚ್ಚು ಅವಕಾಶ ದೊರೆದಂತಾಗುತ್ತದೆ. ಇಲ್ಲಿ ಉಳಿತಾಯ ಮಾಡಲಿಕ್ಕೆ ಅಣಿಮಾಡಿಕೊಟ್ಟಾಂತಾಗಿದೆ. ಇದರಿಂದಾಗಿ ಗಣಿಯ ಮಾಲೀಕನಿಗೆ ಅಧಿಕವಾದ ಲಾಭವನ್ನು ಗಿಟ್ಟಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿಯೂ ಇವರು ಇಲ್ಲಿ ಸಹ ವಂಚಿತರಾಗಿರುತ್ತಿರುವರು. ಜೊತೆಗೆ ತಮ್ಮ ಹಿಂದಿನಿಂದ ಬಂದ ಕುಲ ಕಸುಬುಗಳು ಮರೆಮಾಚುತ್ತಿವೆ. ಈಗಾಗಿ ಇವರು ಎರಡು ಸಹ ಸವಲಾಗಿ ಸ್ವೀಕರಿಸಿದ್ದಾರೆ.

ಗಣಿಗಾರಿಕೆಯಿಂದಾಗಿ ದೇಶವಿದೇಶಗಳಿಂದಲೂ ಕೈಗಾರಿಕೆಯಿಂದಲೆ ದೇಶದ ಪ್ರಗತಿ ಹೊಂದುತ್ತಿವೆ. ಅಂದರೆ ತಪ್ಪಾಗಲಾರದು. ಅನೇಕ ಜನರಿಗೆ ಜೀವಾಮೃತವನ್ನು ನೀಡುವಂತ ಗಣಿಗಾರಿಕೆಗಳು ಆಶ್ರಯ ತಾಣಗಳಾಗಿವೆ.

ಬಹುತೇಕ ಗಣಿಗಾರಿಕೆಗಳಲ್ಲಿ ಇಲ್ಲಿ ಜಿಂದಾಲ್ ಪ್ರಮುಖವಾದ ಬೃಹತ್ ಕೈಗಾರಿಕೆಯಾಗಿದೆ. ಇದು ಪುನರ್‌ಜೀವನ ನೀಡಿದೆ. ಇಲ್ಲಿಂದ ದಿನಾಲೂ ಸ್ಥಳೀಯ ಬುಡುಕಟ್ಟುಗಳು ಹಾಗೂ ಅಲೆಮಾರಿಗಳು ಗಣಿಗಾರಿಕೆಗಳಿಗೆ ಕೈಗಾರಿಕೆ ಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡು ಬರುತ್ತದೆ.

ಅಡಿ ಟಿಪ್ಪಣಿಗಳು

೧. ಚಿನ್ನಸ್ವಾಮಿ ಸೋಸಲೆ ಎನ್, ಸಾಮ್ರಾಜ್ಯ ಸಂಸ್ಥಾನ, ಪ್ರಸಾರಾಂಗ ಕನ್ನಡ ವಿ.ವಿ, ಹಂಪಿ ೨೦೦೪ ಪು.೪೦
೨. ಅದೇ, ಪು.೪೧
೩. ಅದೇ, ಪು.೪೧
೪. ಅದೇ, ಪು.೪೨
೫. ಅದೇ, ಪು.೪೨
೬. ಅದೇ, ಪು.೪೩
೭. ಅದೇ, ಪು.೪೬
೮. ಅದೇ, ಪು.೪೭
೯. ಅದೇ, ಪು.೪೮
೧೦. ಚಿನ್ನಸ್ವಾಮಿ ಸೋಸಲೆ ಎನ್, ಸಾಮ್ರಾಜ್ಯ ಸಂಸ್ಥಾನ, ಪ್ರಸಾರಾಂಗ ಕನ್ನಡ ವಿ.ವಿ, ಹಂಪಿ ೨೦೦೮ ಪು.೨೭
೧೧. ರಾಮಕೃಷ್ಣ ಆರ್, ಪ್ರಚಾರ ಪುಸ್ತಕಮಾಲೆ ಕರ್ನಾಟಕದ ಬುಡಕಟ್ಟುಗಳು, ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ೨೦೦೭ ಪು.೧
೧೨. ಅದೇ, ಪು.೫೭
೧೩. ಅದೇ, ಪು.೫೮
೧೪. ಅದೇ, ಪು.೬೭
೧೫. ಅದೇ, ಪು.೨
೧೬. ಚಿನ್ನಸ್ವಾಮಿ ಸೋಸಲೆ ಎನ್, ಸಾಮ್ರಾಜ್ಯ ಸಂಸ್ಥಾನ: ಪ್ರಸಾರಾಂಗ ಕನ್ನಡ ವಿ.ವಿ, ಹಂಪಿ ೨೦೦೪ ಪು.೧೧೦
೧೭. ಬಾಲಗುರುಮೂರ್ತಿ ಪ್ರತಾಪ ರಾ ಬಹುರೂಪಿ, ಬುಡ್ಗಜಂಗಮ ಅಲೆಮಾರಿ ಸಮುದಾಯ ಅಧ್ಯಯನ ಮಾಲೆ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೮ ಪು.೭೦
೧೮. ಚಿನ್ನಸ್ವಾಮಿ ಸೋಸಲೆ ಎನ್, ಸಾಮ್ರಾಜ್ಯ ಸಂಸ್ಥಾನ: ಪ್ರಸಾರಾಂಗ ಕನ್ನಡ ವಿ.ವಿ, ಹಂಪಿ ೨೦೦೪ ಪು.೯೫
೧೯. ಅದೇ, ಪು.೨೬
೨೦. ರಹಮತ್ ತರೀಕೇರಿ, ಧರ್ಮ ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ ೨೦೦೦ ಪರಿವಿಡಿ
೨೧. ಮಂಜುನಾಥ ಬೇವಿನಕಟ್ಟೆ, ಸಾಹಿತ್ಯ, ನಂದನ ಪ್ರಕಾಶಕರು, ನಂ.೯, ೪ನೇ ಇ ಬ್ಲಾಕ್, ಆದಿವಾಸಿ ರಾಜಾಜಿನಗರ, ಬೆಂಗಳೂರು-೫೬೦೦೦೧, ೨೦೦೭ ಪು.೧
೨೨. ಅದೇ, ಪು.೨

* * *

ಅಧ್ಯಾಯ ೫

ಜಾಗತೀಕರಣ ಸಂದರ್ಭದಲ್ಲಿ ಬುಡುಕಟ್ಟುಗಳಿಗೆ ಎದುರಾಗಿರುವ ಸಮಸ್ಯೆ ಹಾಗೂ ಸವಾಲುಗಳು

ಬುಡುಕಟ್ಟು ಸಮುದಾಯಗಳು ನಾಗರಿಕ ಸಮುದಾಯದಿಂದ ಉಳಿದುಕೊಂಡವುಗಳಾಗಿವೆ. ಅವರು ಮೂಲತಃವಾಗಿ ಬೆಟ್ಟ, ಗುಡ್ಡ, ಕಾಡು, ಮೇಡು, ಅರಣ್ಯ, ದುರ್ಗಮ್ಮ ಕಣಿವೆ, ಅಥವಾ ಕಂದರಗಳಲ್ಲಿ ಜೀವನ ಸಾಗಿಸುವಂತವರಾಗಿದ್ದರು. ಇಂತಹ ಸಮುದಾಯಗಳನ್ನು ಈ ದೇಶದ ಮೂಲ ನಿವಾಸಿಗಳೆಂದರೆ ಆದಿವಾಸಿಗಳು, (ಬುಡುಕಟ್ಟುಗಳು) ಅಲೆಮಾರಿ, ಅಥವಾ ಅರೆ ಅಲೆಮಾರಿಗಳೆಂದು ಕರೆಯಲಾಗುತ್ತದೆ. ಜಗತ್ತಿನ ಎಲ್ಲಾ ಪ್ರದೇಶಗಳಿಂದ ಇಂತಹ ಅನೇಕ ಅಲೆಮಾರಿಗಳು ತಮ್ಮ ವಲಸೆ ಜೀವನವನ್ನು ಸಾಗಿಸುತ್ತಿರುವರು.

ಇತ್ತೀಚಿಗೆ ಆಧುನಿಕ ಗಾಳಿಗೆ ಸಿಲುಕಿದ ಈ ಸಮುದಾಯಗಳು ಜಾಗತೀಕರಣವೆಂಬ ಪೆಡಂಬೂತದಿಂದಾಗಿ ಇವರ ಜೀವನದ ಮೇಲೆ ಅನೇಕ ಸಮಸ್ಯೆಗಳು ಉಂಟಾಗಿವೆ ಮೂಲತಃವಾಗಿ ಕಾಡಿನಿಂದ ನಾಡಿಗೆ ಬಂದು ಇವರು ತಮ್ಮದೆ ಆಗಿರುತಕ್ಕಂತಹ ಮನೆ, ಮಠ, ಊರು, ಕೇರಿ, ಒಟಾರ, ಗ್ರಾಮ, ಪಟ್ಟಣ, ನಗರ ಜೀವನದ ಸವಿಯನ್ನು ಸವಿಯಲು ಅಂಬಲಿಸುತ್ತಿದ್ದಾರೆ. ಇದರಿಂದಾಗಿ ತಮ್ಮ ಸಂಸ್ಕೃತಿಯನ್ನು ಕೈಬಿಡಲು ಆಗುತ್ತಿಲ್ಲ. ಇಂದಿನ ಸಂಸ್ಕೃತಿಯನ್ನು ತಿರಸ್ಕರಿಸಲು ಆಗುತ್ತಿಲ್ಲ. ಇದು ಇವರಿಗೆ ನುಂಗಲಾರದ ತುತ್ತಾಗಿದೆ. ಕಾಲ ಕಳೆದಂತೆಲ್ಲ ಇತ್ತೀಚಿನ ಮಾನವನ ಮೂಲ ಕುರಿತು ತಿಳಿದು ಕೊಳ್ಳಬೇಕಾದರೆ ಬುಡಕಟ್ಟು ಇಲ್ಲವೆ ಅಲೆಮಾರಿಜನಾಂಗಗಳ ಅಧ್ಯಯನ ಮಾಡುವುದು ಅವಶ್ಯವಾಗಿದೆ. ಇದರಿಂದಾಗಿ ನಮಗೆ ಮೂಲದ ಜನಾಂಗೀಯ ಸಮುದಾಯಗಳು ಹೇಗೆ ಜೀವಿಸುತ್ತಿದ್ದವು ಹಾಗೂ ಸಮಕಾಲೀನ ಸಮಾಜದಲ್ಲಿ ಅಥವಾ ಜಾಗತೀಕರಣ ಸಂಧರ್ಭದಲ್ಲಿ ಹೇಗೆ ಅವರ ಸಮಸ್ಯೆ ಹಾಗೂ ಸವಾಲುಗಳು ಎದುರುಸುತ್ತಿದ್ದಾರೆ ಎಂಬುವುದು ಇಲ್ಲಿನ ಸಮುದಾಗಳಿಂದ ತಿಳಿದುಬರುತ್ತದೆ. ಈ ಒಂದು ಮಾಹಿತಿಯನ್ನು ಹಂಪೆಯಲ್ಲಿ ಜಾಗೀರದಾರ ರಾಮಣ್ಣ ಮತ್ತು ನಾಗಪ್ಪ ಎಂಬುವವರ ಹೇಳಿಕೆಯಂತೆ: ನಾವು ಮೂವತ್ತು ವರ್ಷದ ಹಿಂದೆ ಇಲ್ಲಿಗೆ ವಲಸೆ ಬಂದಿದ್ದೇವೆ. ಆಗ ಜೀವನೋಪಾಯಕ್ಕಾಗಿ ಸಣ್ಣ ಪುಟ್ಟ ಕೂಲಿ ಕೆಲಸ ಮಾಡುತ್ತ ಮುಂದೆ

ಹಂತ ಹಂತವಾಗಿ ನಮ್ಮದೆ ಆದ ಸ್ವಂತ ಸ್ವಾವಲಂಬಿತ ಜೀವನ ನಡೆಸುತ್ತ ಬದುಕುತ್ತಿದ್ದೇವೆ. ಧನ,ಕುರಿ, ಎಮ್ಮೆ, ಮತ್ತು ಕೃಷಿಯಲ್ಲಿ ತೊಡಗಿಕೊಂಡಿದ್ದೆವು. ಹಾಗೂ ನಮ್ಮ ಹಿಂದಿನ ಪದ್ಧತಿಯನ್ನು ಬಿಟ್ಟಿಲ್ಲ. ಆಗಂತ ಇವತ್ತಿನ ಪದ್ಧತಿಯನ್ನು ದೂರ ಮಾಡುತ್ತಿಲ್ಲ. ಎರಡು ಅನುಕರಣೆ ಮಾಡುತ್ತೇವೆ. ಅದರಿಂದಾಗಿ ನಮ್ಮ ಜೀವನ ಬಹಳ ಗೊಂದಲವಾಗಿದೆ. ಸುಧಾರಣೆಮಾಡಿಕೊಳ್ಳಲಿಕ್ಕೆ ಆಗುತ್ತಿಲ್ಲ. ೨೧ ನೇ ಶತಮಾನದ ತನಕ ಭಾರತವನ್ನು ಸಂಪ್ರದಾಯ ಶೀಲ ಜಡತ್ವ ಮತ್ತು ಪ್ರತಿಗಾಮಿ ಸಮಾಜವೆಂದು ಪರಿಗಣಿಸುತ್ತಿದ್ದ ಕಾಲವಾಗಿತ್ತು. ಭಾರತವನ್ನು ಸುಮಾರು ೧೫೦ ವರ್ಷಗಳವರೆಗೆ ಆಳಿದ ಬ್ರಿಟಿಷ್ ಸರಕಾರವು ಭಾರತದಲ್ಲಿ ಕೈಗಾರಿಕೆ ಉದ್ಯಮವನ್ನು ಆರಂಭಿಸುವ ಪ್ರಯತ್ನ ಮಾಡುವುದರ ಜೊತೆಗೆ ಸಾಮಾಜಿಕ ಪರಿವರ್ತನೆಗೊಂಡು ಹುಟ್ಟು ಹಾಕುವ ಯತ್ನದ ಮೂಲಕ ಈ ಪರಿಗಣನೆಯನ್ನು ದೂರ ಮಾಡಿತು. ಆದರೆ ಇಂತಹ ಪರಿವರ್ತನೆಗಳಿಂದ ಜನರ ಜೀವನ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶವನ್ನು ಬ್ರಿಟಿಷರು ಹೊಂದಿರಲಿಲ್ಲ. ಅವರಿಗೆ ಲಾಭದ ಉದ್ದೇಶವಾಗಿತ್ತು. ಪರ್ಯಾಯವಾಗಿ ಭಾರತದಲ್ಲಿ ಸ್ಥಾಪನೆಗೊಂಡಿದ್ದ ರಾಜಕೀಯ ಆಳ್ವಿಕೆಯನ್ನು ಸ್ಥಿರಗೊಳಿಸುವ ಉದ್ದೇಶ ಅವರದಾಗಿತ್ತು. ಇವರ ಉದ್ದೇಶ ಯಾವುದಾದರು ಕೂಡ ಭಾರತದಲ್ಲಿನ ಸಾಮಾಜಿಕ ಸಂಸ್ಥೆಗಳಾದ ಕುಟುಂಬ ವ್ಯವಸ್ಥೆ, ವಿವಾಹ, ಬಂಧುತ್ವ, ಅಸ್ಪೃಶ್ಯತೆ, ಗ್ರಾಮೀಣ ಜೀವನ, ಸಾಮಾಜಿಕ ಸ್ಥರ ವ್ಯವಸ್ಥೆಗಳಲ್ಲಿ ಬದಲಾವಣೆಯಾಗಿರುವುದು ಕಂಡು ಬರುತ್ತದೆ.

ದ್ವಿತೀಯ ಜಾಗತಿಕ ಮಹಾಯುದ್ದದ ಪರಿಣಾಮ ವಿಶ್ವಸಂಸ್ಥೆ ಸ್ಥಾಪನೆಯಾಗಿ ಜೊತೆಗೆ ತೃತೀಯ ಜಗತ್ತಿನ ದೇಶಗಳಲ್ಲಿ ಅಂದರೆ ವಸಹಾತುಶಾಹಿ ಸಾಮ್ರಾಜ್ಯಗಳು ಪತನಗೊಂಡ ಬಳಿಕ ಸ್ವತಂತ್ರಗೊಂಡು ಅಭಿವೃದ್ಧಿ ಪಥದಲ್ಲಿ ಮುನ್ನೆಡೆದಿದ್ದ ಕೆಲವು ದೇಶಗಳಲ್ಲಿ ಸಾಮಾಜಿಕ ಬದಲಾವಣೆಗಳಾದವು. ಐ.ಎಂ.ಎಫ್., ಡಬ್ಲ್ಯೂ.ಬಿ., ಎ.ಡಿ.ಬಿ ಇತ್ಯಾದಿಯಂತಹ ಸಂಸ್ಥೆಗಳು ಒದಗಿಸುವ ಅಮೋಘ ಸೇವಾಸೌಲಭ್ಯಗಳು ಹಣಕಾಸಿನ ಸೌಲಭ್ಯಗಳು ಇಂತಹ ಬದಲಾವಣೆಗಳಿಗೆ ಕಾರಣಗಳಾಗಿವೆ. ಅಲ್ಲದೆ ಇಂತಹ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು ವಿಶ್ವ ಮಟ್ಟದಲ್ಲಿ ಉತ್ಪಾದನೆ ಮತ್ತು ವಿಚಾರಣೆಗೆ ನೆರವಾಗುತ್ತಿದೆ. ಇದರಿಂದಾಗಿ ಸಾಮಾಜಿಕ ಬದಲಾವಣೆಗಳು ಉಂಟಾದವು.

ಈ ಮೇಲಿನ ಅಂಶಗಳಿಂದ ಜಾಗತೀಕರಣ ಪ್ರಕ್ರಿಯೆಯ ಬೇರು ಕೈಗಾರಿಕೆ ಕ್ರಾಂತಿಯನ್ನು ಚಾಚಿಕೊಂಡು ವಿಶ್ವಸಂಸ್ಥೆಯ ಸ್ಥಾಪನೆ ಮೂಲಕ ಉದಯವಾದಾಗಿಯೂ ೧೯೮೦ ರ ದಶಕದಲ್ಲಿ ಪ್ರಚಾರಕ್ಕೆ ಬಂದ ಪ್ರಕ್ರಿಯೆಗಳಲ್ಲಿ ಜಾಗತೀಕರಣ ವ್ಯಾಪಿಸಿದಾಗಿನಿಂದ ಇದರ ಬಿಸಿಯು ಭಾರತವನ್ನು ಹೊರತುಪಡಿಸಿರಲಿಲ್ಲ. ಭಾರತವು ೧೯೯೦ ರಲ್ಲಿ ಗ್ಯಾಟ್ ಒಪ್ಪಂದಕ್ಕೆ ರುಜು ಹಾಕುವುದರ ಮೂಲಕ ಜಾಗತೀಕರಣ ರಚನೆಯು ಅಧಿಕೃತವಾಗಿ ಒಳಗಾಯಿತು.

ಜಾಗತೀಕರಣವೆಂಬುವುದು ಪ್ರಕ್ರಿಯೆಯಾಗಿದ್ದರ ಪರಿಣಾಮವಾಗಿ ಸಮಾಜಗಳಲ್ಲಿನ ಜನರ ಜೀವನದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಇತ್ಯಾದಿ ಕ್ಷೇತ್ರಗಳಲ್ಲಿ ಅಂತರ್‌ರಾಷ್ಟ್ರೀಯ ಪ್ರಭಾವಕ್ಕೆ ಒಳಗಾಗುವುದಾಗಿದೆ. ಈ ಎಲ್ಲಾ ಅಂಶಗಳು ಅಂತರ್‌ರಾಷ್ಟ್ರೀಯ ಪ್ರಭಾವಕ್ಕೆ ಒಳಗಾಗುವುದರ ಪರಿಣಾಮ ತೃತೀಯ ಜಗತ್ತಿನ ದೇಶಗಳ ತಳಹದಿ ಸಮುದಾಯಗಳ ಮೇಲೆ ಆಗಿದೆ.

ಇಂತಹ ಸಮುದಾಯಗಳಲ್ಲಿ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ ಬುಡುಕಟ್ಟು ಅಲೆಮಾರಿ ಸಮುದಾಯಗಳು ಜಾಗತೀಕರಣದಿಂದ ಹೊರತಾಗಿಲ್ಲ. ಬುಡುಕಟ್ಟು ಸಮುದಾಯಗಳು ವಿಕಾಸದ ವಿವಿಧ ಹಂತಗಳಾದ "ಆಹಾರ ಸಂಗ್ರಹಣೆಯ,ಬೇಟೆಗಾರಿಕೆ, ಪಶುಸಂಗೋಪನೆಯ, ವ್ಯವಸಾಯದ ಹಂತಗಳನ್ನು ದಾಟಿ ಬರುವುದರ ಜೊತೆಗೆ ಅನೇಕ ಸಮಸ್ಯೆಗಳು ಹಾಗೂ ಸವಾಲುಗಳಿಂದ ಅಂದಿನಿಂದ ಇಂದಿನವರೆಗೂ (ತೇಲಾಡುತ್ತ ಬಂದಿದೆ) ಸ್ಥಿತ್ಯಂತರಕ್ಕೆ ಒಳಗಾಗುತ್ತಲೇ ಬಂದಿರುವುದು ಅಧ್ಯಯನಗಳಿಂದ ಕಂಡುಬರುತ್ತದೆ. ಹೀಗಾಗಿ ಹಂಪೆ ಪರಿಸರದಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳು ಈ ಅಧ್ಯಯನಕ್ಕೆ ಒಳಪಡಿಸಿಕೊಂಡು ಪ್ರಸ್ತುತ ಜಾಗತೀಕರಣ ಪ್ರಭಾವದಿಂದ ಅವರ (ಸಾಮಾಜಿಕ) ಸಮಸ್ಯೆ ಹಾಗೂ ಸವಾಲುಗಳನ್ನು ಈ ಪರಿಸರದಲ್ಲಿ ಕಂಡುಬರುವ ಬೇಡ, ಹಕ್ಕಿಪಿಕ್ಕಿ, ಲಂಬಾಣಿ, ದುರುಗ-ಮುರುಗ ಇತರ ಅಲೆಮಾರಿ ಸಮುದಾಯಗಳ ಬಗ್ಗೆ ಕ್ಷೇತ್ರ ಕಾರ್ಯದ ನೆಲೆಯಲ್ಲಿ ಕಂಡುಬರುವ ಕೆಲವು ಅಂಶಗಳಿಂದ ಇಲ್ಲಿ ಹೇಳಲು ಪ್ರಯತ್ನಿಸಲಾಗಿದೆ. (ಹಂಪೆ, ಕಮಲಾಪುರ, ಕೆರೆತಾಂಡ, ವೆಂಕಟಾಪುರ, ಬುಕ್ಕಾಸಾಗರ, ಕಂಪ್ಲಿ ಇವು ಅಧ್ಯಯನಕ್ಕೆ ತೆಗೆದುಕೊಂಡ ಗ್ರಾಮಗಳು)

ಕಮಲಾಪುರದಲ್ಲಿ ಕಂಡುಬರುವ ಬುಡುಕಟ್ಟು ಸಮುದಾಯಗಳೆಂದರೆ ಬಹುತೇಕವಾಗಿ ಬೇಡರು, ದುರುಗಮುರುಗ ಕಂಡುಬರುವಂತಹಗಳಾಗಿವೆ. ಹಂಪೆಯಲ್ಲಿ ಬೇಡರು, ಶಿಳ್ಳೆಕ್ಯಾತರು, ಮತ್ತು ವೆಂಕಟಾಪುರದಲ್ಲಿ ಬರುವ ಬುಡ್ಗಜಂಗಮ (ಅಲೆಮಾರಿಗಳು) ಬುಕ್ಕಸಾಗರದಲ್ಲಿ ಗೊಸಂಗಿ ಸಮುದಾಯ, ಕಂಪ್ಲಿಯಲ್ಲಿ ಹಕ್ಕಿಪಿಕ್ಕಿ ಸಮುದಾಯ ಹಾಗೂ ಇತರ ಅಲೆಮಾರಿಗಳಾದ ಸುಡುಗಾರು ಸಿದ್ದರು, ದುರುಗಮುರುಗ ಸಮುದಾಯಗಳು ವೇಷಗಾರರು ಮತ್ತು ಈ ಮೇಲಿನ ಎಲ್ಲಾ ಸಮುದಾಯಗಳು ಪ್ರಸ್ತುತವಾಗಿವೆ. ಜಾಗತೀಕರಣದ ಪ್ರಭಾವದಿಂದ ಸಾಮಾಜಿಕ ಬದಲಾವಣೆ ಕಂಡುಕೊಂಡಿರುವುದೇ ಆದರೆ ಅವು ಇದರ ಜೊತೆಗೆ ಸಮಸ್ಯೆಗಳು ಮತ್ತು ಸವಾಲುಗಳನ್ನು ಎದುರಿಸುತ್ತಿವೆ. ಅವುಗಳೆಂದರೆ ೧.ಉಡುಗೆ ತೊಡುಗೆಗಳು, ೨.ಭಾಷೆ ಸಮಸ್ಯೆ, ೩.ಸಾಂಸ್ಕೃತಿಕ ಸಮಸ್ಯೆ, ೪.ಆರ್ಥಿಕತೆಯ ಸಮಸೆ, ೫.ಜ್ಯಾತಿಯತೆಯ ಸಮಸ್ಯೆ, ೬.ಕೊಳಚೆ ಪ್ರದೇಶ, ೭.ಶಿಕ್ಷಣ, ೮.ಸರಕಾರಿ ಸೌಲತ್ತುಗಳು ಸರಿಯಾಗಿ ದೊರಕದೆ ಇರುವುದು.

ಉಡುಗೆ ತೊಡುಗೆಗಳು

ಆಧುನೀಕರಣ, ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಪ್ರಭಾವದ ಪರಿಣಾಮವಾಗಿ ಬದಲಾವಣೆ ಯಾಗಿದೆ. ಇಂತಹ ಸಂದರ್ಭದಲ್ಲಿ ಕಾಡಿನಲ್ಲಿದ್ದ ಅಥವಾ ಬುಡಕಟ್ಟು ಸಮುದಾಯವು ಸಮಾಜದ ತಳಹದಿಯಲ್ಲಿರುವಂತಹ ಸಮುದಾಯವು ಇಂತಹದೊಂದು ಸಮಸ್ಯೆಯನ್ನು ಎದುರುಸುತ್ತಿದೆ. "ಉಡುಗೆ ತೊಡುಗೆಗಳು ಸರಳವಾದವುಗಳಾಗಿವೆ ಆದರೆ ಬೇರೆ ಅಥವಾ ಶ್ರೀಮಂತ ಅಥವಾ ಮುಂದುವರಿದ ಸಮುದಾಯಕ್ಕೆ ಹೋಲಿಸಿದಾಗ ಇವರ ಊಟ ಉಪಚಾರ, ಬಟ್ಟೆ ಬರೆಗಳು ತುಂಬಾ ಹೀನಾಯವಾಗಿದೆ. ಏಕೆಂದರೆ ಇವತ್ತಿನ ದಿನಮಾನದಲ್ಲಿ ಅಂದರೆ ಆರ್ಥಿಕ ಪರಿಳಿತ ಅಥವಾ ಮುಗ್ಗಟ್ಟಿನಿಂದ ಕೈಗೆ ನಿಲುಕದ ನಿಟ್ಟಿನಲ್ಲಿ ತಮಗೆ ಬೇಕಾದ ವಸ್ತುಗಳು ಸಿಗುವುದಿಲ್ಲ. ಹಾಗಂತ ಸುಧಾರಣೆಹೊಂದಿದ ಸಮುದಾಯ ಇವರಿಗೆ ಸಹಾಯ ಮಾಡುವುದು ಕಡಿಮೆ ಏಕೆಂದರೆ ಇದು ಸ್ವಾರ್ಥಪರ ಸಮಾಜವಾಗಿದೆ ಎಂದರೆ ತಪ್ಪಾಗಲಾರದು. ಇದರಿಂದಾಗಿ ಇವರು ಅರ್ಧಮರ್ದ, ಅರಕುಮುರುಕು, ಬಟ್ಟೆ ಧರಿಸುವುದು, ಯಾರೋ ಪುಣ್ಯಾತ್ಮರು ಹುಟ್ಟು ಬಿಸಾಕುವ ಸ್ಥಿತಿಯಲ್ಲಿರುವಾಗ ಅವುಗಳನ್ನು ಅವರಿಂದ ಭಿಕ್ಷೆಬೇಡಿ ತಂದು ತೊಟ್ಟುಕೊಳ್ಳುವುದು ಇಂದು ಕಾಣುತ್ತೇವೆ. ಹಿಂದೆ ಆದಿಮಾನವನಿಗೆ ಬಟ್ಟೆ ಇರಲಿಲ್ಲ. ಅವನು ಮರದ ತೊಗಟೆ ಮತ್ತು ಎಲೆಗಳನ್ನು ತೋಪನ್ನು ಧರಿಸಿಕೊಂಡು ಮಾನ ಮುಚ್ಚಿಕೊಳ್ಳುತ್ತಿದ್ದ. ಆದರೆ ಇಂದು ಆಧುನಿಕ ಜಗತ್ತಿನಲ್ಲಿ ಬಟ್ಟೆ ಹೇರಳವಾಗಿ ದೊರೆಯುತ್ತಿದೆ. ಆದರೆ ಆಧುನಿಕ ಮಾನವನು ಅರೆಬೆತ್ತಲೆಯಲ್ಲಿ ತಿರುಗುತ್ತಿದ್ದಾನೆ. ಇದು ಎಲ್ಲರಿಗೆ ಅನ್ವಯಿಸುವುದಿಲ್ಲ ಭೋಗ ವಿಲಾಸಿ ಪ್ರಿಯರಿಗೆ ಬುಡುಕಟ್ಟುಗಳಿಗೆ ಇವರೆಡರ ಮಧ್ಯ ಸಿಲುಕಿಕೊಂಡು ಒದ್ದಾಡುತ್ತಿದ್ದಾನೆ. ಇವರಿಗೆ ಬಂಗಾರ ವಸ್ತುಗಳು, ಬೆಳ್ಳಿಯ ವಸ್ತುಗಳು ಉಪಯೋಗಿಸಲಿಕ್ಕೆ ಯೋಗ್ಯತೆಯಿಲ್ಲ. ಇದರಿಂದಾಗಿ ಜೋಗೆಯರ ಸಾಮಾನುಗಳನ್ನು ತಮ್ಮ ಉಡುಗೊರೆಯ ಸಾಮಾನುಗಳಾಗಿ ಉಪಯೋಗಿಸಿಕೊಳ್ಳುತ್ತಾರೆ.

ಭಾಷೆಯ ಸಮಸ್ಯೆ

ಹಂಪೆ ಪರಿಸರದ ಬುಡಕಟ್ಟು ಸಮುದಾಯದ ಜನರಿಗೆ ಭಾಷೆಯ ಸಮಸ್ಯೆಯು ಒಂದಾಗಿ ಕಾಡುತ್ತಿದೆ. ಈ ಸಮಾಜವು ದಿನದಿಂದ ದಿನಕ್ಕೆ ಪರಿವರ್ತನೆಯಾದಂತೆಲ್ಲಾ ಇಲ್ಲಿನ ಪರಿಸರವು ಬದಲಾವಣೆಯಾಗುವುದು ನಿಸರ್ಗದ ನಿಯಮವಾಗಿದೆ. ಇದರಿಂದಾಗಿ ಸುತ್ತಮುತ್ತಲಿನ ಭಾಗದಲ್ಲಿ ಸಾಮಾನ್ಯವಾಗಿ ಕನ್ನಡ, ತೆಲುಗು, ಹಿಂದಿ, ಇಂಗ್ಲಿಷ್ ಮತ್ತು ಲಿಪಿ ಇಲ್ಲದ ಬುಡುಕಟ್ಟು ಸಮುದಾಯವು ತಮ್ಮದೆ ಆದ ಭಾಷೆಯನ್ನು ಸಹ ಮಾತೃಭಾಷೆಯ ಜೊತೆಗೆ ಇತರ ಭಾಷೆಯನ್ನು ಅರಿತು ಕೊಳ್ಳುವುದು ಅನಿವಾರ್ಯವಾಗಿದೆ. ಇದರಿಂದಾಗಿ ಇವರ ಭಾಷೆಯನ್ನು ಕೇಳಿ ಮತ್ತು ಕಂಡು ಇತರ ಸಮುದಾಯದ ಜನರು ಇವರು ಹಿಂದುಳಿದ ಸಮುದಾಯದವರೆಂದು

ಗುರುತಿಸುವುದು ಕಾಣಬಹುದಾಗಿದೆ. ಇವರು ತಮ್ಮ ಮನೆಯಲ್ಲಿ ಮಾತ್ರ ತಮ್ಮ ಸಮುದಾಯದ ಭಾಷೆ ಮಾತಾಡುತ್ತಾರೆ. ಆದರೆ ಹೊರಗಡೆ ಇತರ ಭಾಷೆಯ ಸಮಸ್ಯೆಯನ್ನು ಎದುರುಸುತ್ತಿದ್ದಾರೆ.

ಸಾಂಸ್ಕೃತಿಕ ಸಮಸ್ಯೆ

ಸಾಂಪ್ರದಾಯಶೀಲ ಹಿಂದೂ ಸಮಾಜದಲ್ಲಿ ಸಂಸ್ಕೃತಿಯಿಂದ ಭಾರತವು ಜಗತ್ತಿನ ಎಲ್ಲಾ ರಾಷ್ಟ್ರಗಳಿಗಿಂತ ಶ್ರೀಮಂತವಾಗಿದೆ. ಅಂತಹ ಒಂದು ತಮ್ಮದೆ ಆದ ಸಂಸ್ಕೃತಿಯನ್ನು ಹೊಂದಿರುವ ಬುಡುಕಟ್ಟು ಸಮುದಾಯಗಳಲ್ಲಿ ಬಹಳಷ್ಟು ವೈಶಿಷ್ಟ್ಯತೆಯನ್ನು ಕಾಣಬಹುದಾಗಿದೆ. ಉದಾಹರಣೆಗೆ ಹಬ್ಬ ಹರಿದಿನಗಳು ಜಾತ್ರೆ ಉತ್ಸವಗಳು ಮತ್ತು ಮದುವೆಯ ಮುಂಜೆಗಳಲ್ಲಿ ವಿವಿಧ ರೀತಿಯ ದೇವ ದೇವತೆಗಳ ಆಚರಣೆಗಳನ್ನು ಕಾಣಬಹುದು. ಇಲ್ಲಿ ಪ್ರಾಣಿಬಲಿ, ಮೌಢ್ಯತೆ, ಕಂದಾಚಾರ, ಗೊಡ್ಡು ಸಂಪ್ರದಾಯಗಳು ಮುಂತಾದವು ಇವರ ಸಂಸ್ಕೃತಿಯ ಬದುಕಿನಲ್ಲಿ ಕಂಡುಬರುವ ಸಮಸ್ಯೆಗಳಾಗಿವೆ.

ಜಾತಿಯತೆಯ ಸಮಸ್ಯೆ

ಹಂಪೆ ಪರಿಸರದಲ್ಲಿ ಕಂಡುಬರುವ ಹಲವು ಬುಡಕಟ್ಟು ಅಲೆಮಾರಿ ಸಮುದಾಯಗಳಲ್ಲಿ ಅನೇಕ ಜಾತಿಗಳು ಮತ್ತು ಉಪಜಾತಿಗಳು, ಪಂಗಡ, ಉಪಪಂಗಡಗಳು, ಗೋತ್ರ ಉಪಗೋತ್ರಗಳು, ಕಂಡುಬರುತ್ತವೆ. ಇವೆಲ್ಲವುಗಳಲ್ಲಿ ಹಲವು ನಿರ್ಬಂದನೆಗಳನ್ನು ಹೊಂದಿ ರಚನೆಯಾಗಿವೆ. ಇವುಗಳಲ್ಲಿ ಶ್ರೇಷ್ಠ ಕನಿಷ್ಠ, ಉಚ್ಚ ನೀಚ, ಕುಲ ಎಂಬ ಭಾವನೆಗಳು ಕಾಣಬಹುದು. ಇದರಿಂದ ಈ ಜನಾಂಗಗಳಲ್ಲಿ ಕಲಹಗಳು, ಸಂಘರ್ಷಗಳು ನಡೆಯುತ್ತಲೆ ಇರುತ್ತವೆ. ಅಷ್ಟೇಅಲ್ಲದೆ ಸಾಕಷ್ಟು ಶೋಷಣೆಗಳು ನಡೆಯುತ್ತಿವೆ. ಈ ಜನಾಂಗಗಳಲ್ಲಿ ಕಾಡುತ್ತಿರುವ ಸಮಸ್ಯೆಗಳಲ್ಲಿ ಜಾತಿಯು ಕೂಡ ಒಂದಾಗಿದೆ.

ಕೊಳಚೆ ಪ್ರದೇಶ

ಬಹುತೇಕ ಸಮುದಾಯದ ಜನರು ಕಾಡಿನಿಂದ ನಾಡಿಗೆ ಬಂದು ವಿವಿಧ ನಗರಗಳಲ್ಲಿ ಕೊಳಚೆ ಪ್ರದೇಶದ ನಡುವೆ ವಾಸಮಾಡುತ್ತಿದ್ದಾರೆ. ಹಕ್ಕಿಪಕ್ಕಿ ಸಮುದಾಯಗಳು ಕಂಪ್ಲಿಯಲ್ಲಿ ಕೊಳಚೆ ಪ್ರದೇಶದಲ್ಲಿ ವಾಸಮಾಡುತ್ತಿರುವುದು ಕಂಡು ಬರುತ್ತದೆ. ಇಂತಹ ಪರಿಸರದಲ್ಲಿ ವಾಸಿಸುವುದರಿಂದ ಹಲವಾರು ರೀತಿಯ ಆರೋಗ್ಯ ಸಮಸ್ಯೆಗಳು ಎದುರಿಸುತ್ತಾರೆ. ಈ ಜನಾಂಗಕ್ಕೆ ಸ್ವಂತ ಮನೆ ಇಲ್ಲದಿರುವುದರಿಂದ ನಗರದಲ್ಲಿ ಎಲ್ಲಿ ಸ್ಥಳ ದೊರೆಯುತ್ತಿದೆಯೊ ಅಲ್ಲಿ ವಾಸ ಮಾಡಲು ಪ್ರಾರಂಭಿಸುತ್ತಾರೆಂಬುವುದು ತಿಳಿದು ಬರುತ್ತದೆ. ಇಲ್ಲಿಯವರೆಗೆ ಸರಕಾರಗಳು ಇವರಿಗೆ ಕನಿಷ್ಟ ಆಶ್ರಯಯೋಜನೆ ಮನೆಗಳಾದರೂ ಒದಗಿಸಿಕೊಟ್ಟಿಲ್ಲ. ಇನ್ನು ಕೂಡ ಕೊಳಚೆ ಪ್ರದೇಶಗಳು ಗುಡಿಸಲುಗಳು ಹಾಕಿಕೊಂಡು ದುರ್ಗಮಯವಾದ ಪರಿಸರದಲ್ಲಿ ನರಕ ಜೀವನವನ್ನು ಸಾಗಿಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗದು.

ಶಿಕ್ಷಣ

ಶಿಕ್ಷಣ ಪ್ರತಿಯೊಬ್ಬ ಪ್ರಜೆಗಳಿಗೆ ಮೂಲಭೂತ ಹಕ್ಕು ಎಂಬುವುದಾಗಿ ಸಂವಿಧಾನ ಉಲ್ಲೇಖಿಸಿದೆ. ೬ ರಿಂದ ೧೪ ವರ್ಷದ ಮಕ್ಕಳಿಗೆ ಉಚಿತವಾಗಿ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಿಕೊಡುತ್ತಿದೆ. ಅದನ್ನು ಸರಿಯಾದ ರೀತಿಯಿಂದ ಉಪಯೋಗಿಸಿಕೊಳ್ಳುವುದು ಈ ಸಮುದಾಯಕ್ಕೆ ತಿಳಿದಿಲ್ಲ. ಏಕೆಂದರೆ ಈ ಸಮುದಾಯದಲ್ಲಿ ಬಹಳಷ್ಟು ಅನಕ್ಷರಸ್ಥ ಜನರಿರುವುದರಿಂದ ಹಲವಾರು ಸಮಸ್ಯೆಗಳನ್ನು ಎದರಿಸುತ್ತಿದ್ದಾರೆ. ಇಲ್ಲಿನ ಬುಡುಕಟ್ಟು ಹಾಗೂ ಅಲೆಮಾರಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆಂಬುವುದು ತಿಳಿದು ಬಂದ ಮಹತ್ವದ ಅಂಶವಾಗಿದೆ. ಮಕ್ಕಳನ್ನು ಶಾಲೆಗೆ ಕಳುಹಿಸದೆ ಭಿಕ್ಷೆಗೆ ಕಳುಹಿಸುತ್ತಿರುವ ದೃಶ್ಯ ಕಾಣಬಹುದಾಗಿದೆ. ಆದ್ದರಿಂದ ಈ ಜನಾಂಗವು ಶಿಕ್ಷಣ ಸಮಸ್ಯೆಯು ಎದುರುಸುತ್ತಿದೆ. ಸರಕಾರಗಳು ಮತ್ತು ಸರಕಾರೇತರ ಸಂಘ ಸಂಸ್ಥೆಗಳು ಈ ಸಮುದಾಯಕ್ಕೆ ಶಿಕ್ಷಣವನ್ನು ಒದಗಿಸಲು ಪ್ರಾಮಾಣಿಕವಾಗಿ ಶ್ರಮಿಸಬೇಕಾದದ್ದು ಅತಿ ಅವಶ್ಯಕವಾಗಿದೆ.

ಆರ್ಥಿಕ ಸಮಸ್ಯೆ

ಈ ಜನಾಂಗಗಳು ಸಾಮಾಜಿಕವಾಗಿ ಶೈಕ್ಷಣಿಕವಾಗಿ ರಾಜಕೀಯವಾಗಿ ಹಿಂದುಳಿಯಲು ಪ್ರಮುಖ ಕಾರಣ ಆಥಿರ್ಕತೆ. ಆರ್ಥಿಕವಾಗಿ ಪ್ರಬಲರಾಗಿದ್ದರೆ ಯಾವುದೇ ಸಮಾಜವು ಬದಲಾವಣೆ ಹೊಂದಬಹುದು. ಆದರೆ ಬುಡುಕಟ್ಟು ಮತ್ತು ಅಲೆಮಾರಿ ಸಮುದಾಯಗಳು ಬಡತನ ರೇಖೆಗಿಂತ ಕೆಳಮಟ್ಟದ ಜೀವನ ಸಾಗಿಸುತ್ತಿರುವುದರಿಂದ ಅವರ ಬದುಕಿನಲ್ಲಿ ಬದಲಾಗುವ ಸನ್ನಿವೇಶಗಳು ಸಂದರ್ಭಗಳು ಬಹಳಷ್ಟು ಕಡಿಮೆ ಎಂದು ಹೇಳಬಹುದು. ಈ ಸಮುದಾಯದವರು ಇಂದಿಗೂ ಕೃಷಿ ಕೂಲಿ ಕಾರ್ಮಿಕರಾಗಿ ಹಾಗೂ ಕೈಗಾರಿಕೆ ಉದ್ಯಮಗಳಲ್ಲಿ ಕೂಲಿ ಆಳುಗಳಾಗಿ ಕೆಲವರು ವಿವಿಧ ರೀತಿಯ ತರಕಾರಿ, ಬಾಂಡೆ ಸಾಮಾನುಗಳನ್ನು ಮಾರಾಟ ಮಾಡುತ್ತ ಅತಂತ್ರದ ಬದುಕನ್ನು ಸಾಗಿಸುತ್ತಿದ್ದಾರೆ.

ರಾಜಕೀಯ ಸಮಸ್ಯೆ

ಹಂಪೆ ಪರಿಸರದಲ್ಲಿ ವಾಸಿಸುವ ಬುಡುಕಟ್ಟು ಅಲೆಮಾರಿ ಸಮುದಾಯಗಳು ರಾಜಕೀಯವಾಗಿ ಬಹಳಷ್ಟು ಹಿಂದುಳಿದಿವೆ. ಇವರಲ್ಲಿ ಅನಕ್ಷರತೆ, ಬಡತನ, ಜಾತಿ, ಒಳಪಂಗಡ ಮತ್ತು ಅಸಂಘಟನೆ ಕಂಡುಬರುವುದರಿಂದ ರಾಜಕೀಯ ಸೌಲಭ್ಯಗಳನ್ನು ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ. ಸ್ವಾತಂತ್ರ್ಯ ದೊರಕಿಸಿ ೬೩ ವರ್ಷಗಳು ಗತಿಸಿದರೂ ಕೂಡ ಸಮಾಜದ ಮುಖ್ಯ ವಾಹಿನಿಗೆ ಬರುವುದು ಸಾಧ್ಯವಾಗಿಲ್ಲ. ಇಂತಹ ಸಂದರ್ಭದಲ್ಲಿ ಅವರಿಗೆ ರಾಜಕೀಯವಾಗಿ ಮುಂದೆಬರಲು ಸಾಧ್ಯವಾಗುವುದಾದರು ಹೇಗೆ? ಅದರೂ ಕೂಡ ಮೀಸಲಾತಿ ಪ್ರಕ್ರಿಯೆಯಿಂದ ಇತ್ತೀಚೆಗೆ ಸ್ವಲ್ಪ ರಾಜಕೀಯ ಕಾವು ಬಡಿಯುತ್ತಿದೆ ಎಂದು ಹೇಳಬಹುದು.

ಏನೇ ಇದ್ದರೂ ಕೂಡ ಈ ಸಮುದಾಯಗಳು ರಾಜಕೀಯವಾಗಿ ಯಾವುದೇ ಸೌಲಭ್ಯಗಳನ್ನು ಹೊಂದಿಲ್ಲ ಎಂಬುದು ಕಂಡುಬರುತ್ತದೆ.

ಸರಕಾರದ ಸವಲತ್ತುಗಳು ಸರಿಯಾಗಿ ದೊರಕದೆ ಇರುವುದು

ಆದಿವಾಸಿಗಳಿಗಾಗಿ ಅದೆಷ್ಟೊ ಸೌಕರ್ಯಗಳನ್ನು ಸರಕಾರ ಸಂವಿಧಾನದಲ್ಲಿ ಹೊರಡಿಸಿದೆ. ಆದರೆ ಅವು ಹೆಸರಿಗೆ ಮಾತ್ರವಾಗಿವೆ. ಸರಿಯಾದ ರೀತಿಯಿಂದ ಫಲಕಾರಿಯಾಗುತ್ತಿಲ್ಲ ಏಕೆಂದರೆ ಇವರು ಅನಕ್ಷರಸ್ಥರಾಗಿರುವುದರಿಂದ ಇವರಿಗೆ ಬರುವಂತ ಸೌಲತ್ತುಗಳು ಕೈ ಸೇರುತ್ತಿಲ್ಲ. ಭಾರತೀಯ ಎಂಬ ಗುರುತಿಗೆ ಅವರಿಗೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಆಗಿಲ್ಲ. ಪಡಿತರ ಚೀಟಿ ಇಲ್ಲದಿರುವುದನ್ನು ಈ ಸಮುದಾಯಗಳಲ್ಲಿ ಕಾಣಬಹುದು. ಜಾತಿ ಪ್ರಮಾಣಪತ್ರ ಪಡೆಯುವುದಕ್ಕೂ ಇವರಲ್ಲಿ ಯಾವುದೇ ಪುರಾವೆಗಳಿಲ್ಲದೆ ತೊಂದರೆಗೆ ಒಳಗಾಗಿರುವುದುಂಟು.

* * *

ಅಧ್ಯಾಯ ೬

ಸಮಾರೋಪ

ಭಾರತೀಯ ಸಾಮಾಜಿಕ ವ್ಯವಸ್ಥೆಯು ವಿವಿಧ ರೀತಿಯ ಜನ ಸಮುದಾಯಗಳಿಂದ ಕೂಡಿದ ರಾಷ್ಟ್ರವಾಗಿದೆ. ಬಹುಮುಖಿ ಸಂಸ್ಕೃತಿಯನ್ನು ಹೊಂದಿರುವ ನಮ್ಮ ದೇಶದಲ್ಲಿ ಪ್ರತಿಯೊಂದು ಸಮುದಾಯದ ಜನ ಬೇರೆ ಬೇರೆ ಭಾಷೆ ಧರ್ಮ, ಜಾತಿ ಪಂಗಡ, ಪಂಥ, ರೂಢಿ, ಸಂಪ್ರದಾಯ ನೈತಿಕ ನಿಯಮಗಳು ಅವರದೇ ಆದಂತಹ ಜೀವನ ಕ್ರಮವನ್ನು ರೂಢಿಸಿಕೊಂಡು ಬದುಕನ್ನು ಸಾಗಿಸುತ್ತ ಬಂದಿದ್ದಾರೆ. ಆ ಸಮುದಾಯದಲ್ಲಿ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಹಾಗೂ ಆರ್ಥಿಕವಾಗಿ ಹಲವಾರು ವೈವಿಧ್ಯತೆಗಳು ಕಂಡು ಬರುತ್ತವೆ. ಅಂತಹ ಸಮುದಾಯಗಳಲ್ಲಿ ಬುಡುಕಟ್ಟು ಮತ್ತು ಇತರ ಅಲೆಮಾರಿ ಸಮುದಾಯಗಳು ಪ್ರಮುಖವಾಗಿವೆ.

ಈ ಬುಡುಕಟ್ಟು ಮತ್ತು ಇತರ ಅಲೆಮಾರಿ ಸಮುದಾಯಗಳು ತಮ್ಮದೆ ಆದಂತಹ ನಿರ್ದಿಷ್ಟ ಭೂ ಪ್ರದೇಶಹೊಂದಿ ಸಾಂಸ್ಕೃತಿಕ, ಧರ್ಮ, ನಂಬಿಕೆಗಳು ಆಚಾರ ವಿಚಾರಗಳಲ್ಲಿ ಅವರದೇ ಆದ ಜೀವನ ಪದ್ಧತಿಯನ್ನು ಹೊಂದಿರುವ ಸಮುದಾಯಗಳಾಗಿವೆ. ಇಂತಹ ಜನಾಂಗಗಳು ಕರ್ನಾಟಕದಲ್ಲಿ ಗುಲ್ಬರ್ಗ, ಬೀದರ್, ರಾಯಚೂರು, ಬಳ್ಳಾರಿ ಚಿತ್ರದುರ್ಗ , ದಕ್ಷಿಣ ಕನ್ನಡ, ಮುಂತಾದ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಿಂದ ೧೩ ಕಿ.ಮೀ. ದೂರವಿರುವ ಐತಿಹಾಸಿಕ ಪರಂಪರೆ ಸಾರುವ ತಾಣವಾಗಿರುವ ಹಂಪೆ ಪರಿಸರದಲ್ಲಿ ಹಲವು ಬುಡುಕಟ್ಟು ಮತ್ತು ಇತರೆ ಅಲೆಮಾರಿ ಸಮುದಾಯಗಳು ಕಂಡು ಬರುತ್ತವೆ. ಈ ಸಮುದಾಯಗಳ ಕುರಿತು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಜೀವನದ ಬಗ್ಗೆ ಪರಿಣಾಮಕಾರಿಯಾದ ಅಧ್ಯಯನಗಳು ಆಗಿಲ್ಲ ಎಂದು ಹೇಳಬಹುದು.

ನಮ್ಮ ಭಾರತ ಅಭಿವೃದ್ಧಿ ಹೊಂದಿತ್ತಿರುವ ರಾಷ್ಟ್ರವೆಂದು ಹೆಮ್ಮೆಯಿಂದ ಹೇಳುತ್ತಿರುವ ನಾವು ಸ್ವಾತಂತ್ರ್ಯ ದೊರಕಿಸಿ ೬೩ ವರ್ಷ ಕಳೆದರೂ ಸಹ ಈ ದೇಶದಲ್ಲಿ ಕಂಡುಬರುತ್ತಿರುವ ನೂರಾರು ಬುಡುಕಟ್ಟು ಜನಾಂಗಗಳು ಹಲವಾರು ಸಮಸ್ಯೆಗಳಿಂದ ಬಳಲುತ್ತ ಅತಂತ್ರ ಬದುಕನ್ನು ಸಾಗಿಸುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು.

ಮೊದಲನೆಯ ಅಧ್ಯಯನದಲ್ಲಿ ಹಂಪೆ ಪರಿಸರದಲ್ಲಿ ಕಂಡುಬರುವ ಹಲವು ಬುಡುಕಟ್ಟು ಸಮುದಾಯಗಳ ಬೇಡ, ಹಕ್ಕಿಪಿಕ್ಕಿ, ಲಂಬಾಣಿ, ದುರುಗ–ಮುರುಗಿ, ಹಾಗೂ ಇತರೆ ಅಲೆಮಾರಿ ಸಮುದಾಯಗಳ ಬದುಕಿನ ಸ್ಥಿತ್ಯಂತರಗಳು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸ್ಥಿತಿಗತಿಗಳು ಮತ್ತು ಅವರ ಜೀವನದ ವಿವಿಧ ಮೊಗ್ಗಲುಗಳನ್ನು ತಿಳಿದುಕೊಳ್ಳುವ ಉದ್ದೇಶವನ್ನು ಈ ಅಧ್ಯಯನದ ವ್ಯಾಪ್ತಿ ಈ ಸಮುದಾಯಗಳ ಅಧ್ಯಯನದ ಮಹತ್ವ ಹಾಗೂ ಈ ಸಮುದಾಯಗಳ ಬಗ್ಗೆ ಇಲ್ಲಿಯವರೆಗೆ ನಡೆದ ಅಧ್ಯಯನಗಳು ಮತ್ತು ಪ್ರಸ್ತುತ ಇಂದಿನ ದಿನಮಾನಗಳಲ್ಲಿ ಹಂಪೆ ಪರಿಸರದಲ್ಲಿ ಕಂಡುಬರುವ ಬುಡುಕಟ್ಟು ಸಮುದಾಯಗಳ ಅಧ್ಯಯನದ ಅವಶ್ಯಕತೆ ಕುರಿತು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಹಂಪೆ ಪರಿಸರದ ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆಯ ಆಧಾರವಾಗಿಟ್ಟುಕೊಂಡು ವಿವರಿಸಲಾಗಿದೆ. ಐತಿಹಾಸಿಕ ಪರಂಪರೆಯನ್ನು ಸಾರುವ ಹಂಪೆಯನ್ನು ಹಲವು ಸಾಮ್ರಾಜ್ಯಗಳು ಆಡಳಿತ ನಡೆಸಿವೆ. ಹಾಗೂ ವಿಶ್ವ ಪರಂಪರೆಯ ಐತಿಹಾಸಿಕ ಸ್ಥಳಗಳಲ್ಲಿ ಒಂದಾಗಿರುವ ಹಂಪೆಯು ಪೌರಾಣಿಕ, ಚಾರಿತ್ರಿಕ, ಹಿನ್ನೆಲೆಯನ್ನು ಹಲವು ಗ್ರಂಥಗಳ ಮಾಹಿತಿಗಳನ್ನು ಕುರಿತು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಹಂಪೆ ಪರಿಸರದಲ್ಲಿ ಕಂಡು ಬರುವ ಬೇಡ, ಹಕ್ಕಿಪಿಕ್ಕಿ, ಲಂಬಾಣಿ, ದುರುಗ–ಮುರುಗಿ ಇತರೆ ಅಲೆಮಾರಿ ಸಮುದಾಯಗಳನ್ನು ಕುರಿತು ಪರಿಚಯಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಬುಡುಕಟ್ಟು ಸಮುದಾಯಗಳ ಹಿಂದಿನ ಮತ್ತು ಇಂದಿನ ಪ್ರಸ್ತುತ ಸಂದರ್ಭಗಳಲ್ಲಿ ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಹಾಗೂ ಬದುಕಿನ ಸ್ಥಿತಿಗತಿಗಳು ಮತ್ತು ಧಾರ್ಮಿಕ ಜೀವನ ಹಾಗೆ ಹಂಪೆ ಪರಿಸರದಲ್ಲಿನ ವಾಸಿಸುವ ಬುಡುಕಟ್ಟು ಜನರು ಕುರಿತು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಬುಡುಕಟ್ಟುಗಳು ಯಾವ ರೀತಿ ಸಮಸ್ಯೆಗಳನ್ನು ಎದರುಸುತ್ತಿದ್ದಾರೆ? ಈ ಸಮಸ್ಯೆಯ ಉದ್ಬವವಾಗಲು ಜಾಗತೀಕರಣ ಹೇಗೆ ಪರಿಣಾಮ ಬೀರಿದೆ? ಎಂಬುವುದನ್ನು ಕೂಲಂಕುಶವಾಗಿ ಚರ್ಚಿಸಲಾಗಿದೆ.

ಸಲಹೆಗಳು

೧. ಹಂಪೆ ಪರಿಸರದಲ್ಲಿ ವಾಸಿಸುವ ಹಲವು ಬುಡಕಟ್ಟು ಸಮುದಾಯಗಳಿಗೆ ಸರಕಾರ ವಸತಿ ಸೌಕರ್ಯಗಳನ್ನು ಒದಗಿಸಿಕೊಡಬೇಕು ಹಾಗೂ ಹಲವಾರು ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುತ್, ಕಲಿಕೆಗೆ ಶಾಲೆ, ಆಸ್ಪತ್ರೆ, ಸೌಲಭ್ಯ ಒದಗಿಸಿಕೊಡಲು ಪ್ರಯತ್ನಿಸಬೇಕಾಗಿದೆ.

೨. ಬುಡುಕಟ್ಟು ಸಮುದಾಯಗಳಿಗೆ ಸರಕಾರದಿಂದ ದೊರೆಯುವ ಸೌಲಭ್ಯಗಳ ಅವುಗಳ ಬಗ್ಗೆ ಅವರಿಗೆ ಅರಿವು ಮೂಡಿಸುವಂತೆ ಜಾಗೃತಿ ಕ್ರಮ ಕೈಗೊಳ್ಳಬೇಕು .

೩. ಇಲ್ಲಿನ ಸಮುದಾಯಗಳಿಗಿರುವ ಕಲಾ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹ ನೀಡಬೇಕಾದ ಅವಶ್ಯವಿದೆ.

೪. ಮಹಿಳೆ ಮತ್ತು ಮಕ್ಕಳು ಎಂದರೆ ಯಾವುವು? ವಿವರಿಸಿ. ಸಮಸ್ಯೆಗಳು ಎದುರುಸುತ್ತಿದ್ದಾರೆ ಆದ್ದರಿಂದ ಸರಕಾರವು ಅವರ ಸಮಸ್ಯೆಗಳ ಅವಲೋಕಿಸಿ ಪರಿಹರಿಸಲು ಪ್ರಯತ್ನಿಸಬೇಕು.

೫. ಬುಡುಕಟ್ಟು ಸಮುದಾಯಗಳ ಜನರ ಬದುಕು-ಬವಣೆಗಳ ಕುರಿತು ತಿಳಿದುಕೊಳ್ಳಲು ಮತ್ತು ಅವರ ಸಮಸ್ಯೆಗಳನ್ನು ಪರಿಹರಿಸಲು ಸರಕಾರ ಹಾಗೂ ಸರಕಾರೇತರ ಸಂಘ ಸಂಸ್ಥೆಗಳು ಸಂಯುಕ್ತವಾಗಿ ಕಾರ್ಯನಿರ್ವಹಿಸಬೇಕಾದ ಅವಶ್ಯಕತೆ ಇದೆ.

ಅಧ್ಯಯನದ ಫಲಿತಗಳು

"ಹಂಪೆ ಪರಿಸರದ ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿಗಳು" ಕುರಿತು ಅಧ್ಯಯನದಿಂದ ಕಂಡುಕೊಂಡ ಫಲಿತಗಳು

೧. ವಿಶಿಷ್ಟ ಸಂಸ್ಕೃತಿಯಿಂದ ಕೂಡಿದ ಬೇಡ ಸಮುದಾಯವು ತನ್ನದೇ ಆದ ಆಚಾರ-ವಿಚಾರ, ನಂಬಿಕೆಗಳು, ಸಂಪ್ರದಾಯಗಳು, ವೈವಾಹಿಕ ಸಂಬಂಧಗಳು ಹಾಗೂ ಜಾತಿ ಪಂಚಾಯಿತಿ ಇಲ್ಲಿಗೆ ಬಹಳಷ್ಟು ವೈವಿಧ್ಯಮಯವಾಗಿ ಕಂಡು ಬರುತ್ತದೆ.

೨. ಬಡತನ, ನಿರುದ್ಯೋಗ, ಅನಕ್ಷರತೆ, ಮೌಢ್ಯತೆ, ಆರೋಗ್ಯ ಸಮಸ್ಯೆಗಳು, ಭಿಕ್ಷಾಟನೆ, ಹಲವು ಸಮಸ್ಯೆಗಳು ಎದುರಿಸುತ್ತಿರುವುದು ತಿಳಿದುಬರುತ್ತದೆ. ಇವತ್ತಿನ ನಗರೀಕರಣ ಜಾಗತೀಕರಣದ ಸಂದರ್ಭದಲ್ಲಿಯೂ ಅವರ ಧಾರ್ಮಿಕ ಆಚಾರಣೆ, ನಂಬಿಕೆ, ದೈವಗಳಲ್ಲಿ ಯಾವುದೇ ರೀತಿ ಬದಲಾವಣೆಗಳನ್ನು ಕಾಣದೆ ಅವುಗಳಿಗೆ ಬದ್ಧರಾಗಿ ಬದುಕನ್ನು ಸಾಗಿಸುತ್ತಿದ್ದಾರೆ.

೩. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದರೂ ಕೂಡ ರಾಜಕೀಯವಾಗಿ ಈ ಸಮುದಾಯ ಸ್ಥಾನಮಾನಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದೆ. ಮತ್ತು ಈ ಸಮುದಾಯ ಕೃಷಿ ಕೂಲಿ ಕಾರ್ಮಿಕರಾಗಿ, ಗಣಿಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ವಿವಿಧ ವ್ಯಾಪಾರಗಳನ್ನು ಮಾಡುತ್ತ ಜೀವನವನ್ನು ನಡೆಸುತ್ತಿದ್ದಾರೆ.

೪. ಹಂಪೆ ಪರಿಸರದಲ್ಲಿ ಕಂಡುಬರುವ ಇನ್ನೊಂದು ಸಮುದಾಯವೆಂದರೆ ಹಕ್ಕಿಪಿಕ್ಕಿ ಸಮುದಾಯ. ಇವರಿಗೆ ನಿರ್ಧಿಷ್ಟ ನೆಲೆಯಾಗಲಿ, ವಾಸಿಸುವ ಮನೆಯಾಗಲಿ ಇಲ್ಲ ಮತ್ತು ಯಾವುದೆ ರೀತಿಯ ಸೌಲಭ್ಯಗಳಿಲ್ಲದೆ ಶೈಕ್ಷಣಿಕವಾಗಿ ಸಾಮಾಜಿಕವಾಗಿ ರಾಜಕೀಯವಾಗಿ, ಆರ್ಥಿಕವಾಗಿ, ಹಿಂದುಳಿದ ಸಮುದಾಯವಾಗಿದೆ. ಇವರು ಹಂಪೆಯ ಹತ್ತಿರವಿರುವ ಕಂಪ್ಲಿಯ ಗ್ರಾಮದಲ್ಲಿ ಕಂಡುಬರುತ್ತಾರೆ. ಕೂಲಿ ಮಾಡಿ ಬದುಕುವ ಈ ಸಮುದಾಯ ಬಡತನ, ಅನಕ್ಷರತೆಯಂತಹ ಸಮಸ್ಯೆಗಳಿಗೆ ಸಿಕ್ಕ ಬದುಕು ಅತಂತ್ರವಾಗಿದೆ.

೫. ವಿಶಿಷ್ಟ ಸಂಸ್ಕೃತಿ, ಉಡುಗೆ-ತೊಡುಗೆ, ಧಾರ್ಮಿಕ ಆಚರಣೆ, ಸಂಪ್ರದಾಯಗಳೊಂದಿಗೆ ಬಹಳಷ್ಟು ವಿಭಿನ್ನತೆಯೊಂದಿಗೆ ಕಂಡುಬರುವ ಲಂಬಾಣಿ ಜನಾಂಗವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಬಹಳಷ್ಟು ಹಿಂದುಳಿದಿದೆ. ಇಲ್ಲಿನ ಜನರು ಪೂನಾ, ಮುಂಬೈ, ಬೆಂಗಳೂರು ನಗರಗಳಿಗೆ ದುಡಿಯಲು ವಲಸೆ ಹೋಗುತ್ತಿರುವುದು ಕಂಡುಬರುತ್ತದೆ.

೬. ದುರುಗ-ಮುರಗಿ ಸಮುದಾಯವು ಕಮಲಾಪುರ ಮತ್ತು ಕಂಪ್ಲಿ ಯಲ್ಲಿ ಹೆಚ್ಚು ಕಂಡು ಬರುತ್ತಾರೆ. ಇವರಲ್ಲಿಯೂ ಕೂಡ ಭಿಕ್ಷಾಟನೆ, ಬಡತನ, ಅನಕ್ಷರತೆ, ಮೌಢ್ಯತೆ ಮುಂತಾದ ಸಮಸ್ಯೆಗಳನ್ನು ಎದರುಸುತ್ತಿದ್ದಾರೆ. ದಿನಗೂಲಿ ಮಾಡುವುದು, ಮೀನು ಹಿಡಿಯುವುದು, ಪ್ಲಾಸ್ಟಿಕ್ ವಸ್ತುಗಳನ್ನು ಮಾರಾಟ ಮಾಡುವುದು ಕಂಡು ಬರುತ್ತದೆ.

೭. ಹಂಪೆ ಪರಿಸರದಲ್ಲಿ ಕಂಡುಬರುವ ಅಲೆಮಾರಿ ಸಮುದಾಯಗಳಾದ ಶಿಳ್ಳೆಕ್ಯಾತ, ಬುಡ್ಗ ಜಂಗಮ, ಯಳವರು, ಹಾವಾಡಿಗರು, ಹಗಲುವೇಷಗಾರರು ಮತ್ತು ಅಲೆಮಾರಿ ಸಮುದಾಯದವರು ಸಮಾಜದ ಮುಖ್ಯ ವಾಹಿನಿಯಿಂದ ಬಹಳಷ್ಟು ದೂರ ಉಳಿದಿದ್ದು ಬಡತನ ಅನಕ್ಷರತೆ, ಭಿಕ್ಷಾಟನೆ ಮುಂತಾದ ಸಮಸ್ಯೆಗಳು ಎದರುಸುತ್ತಿದ್ದಾರೆ. ಇವರ ಸಾಮಾಜಿಕ ಸ್ಥಿತಿಗತಿ ಬಹಳಷ್ಟು ಗಂಭೀರವಾಗಿದೆ.

ಹೀಗೆ ಹಂಪೆ ಪರಿಸರದಲ್ಲಿ ಕಂಡು ಬರುವ ಬುಡುಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿಗಳ ಅಧ್ಯಯನದಿಂದ ಮೇಲಿನ ಫಲಿತಗಳು ಕಂಡು ಬರುತ್ತವೆ. ಅವರ ಬದುಕನ್ನು ಅಭಿವೃದ್ಧಿ ಪಡಿಸಲು ಸರಕಾರಗಳು ಹೆಚ್ಚು ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

* * *

ಅನುಬಂಧ

೧. ಪರಾಮರ್ಶನ ಗ್ರಂಥಗಳು

೨. ವಕ್ತೃ ವಿವರ

೩. ನಕಾಶೆಗಳು

೪. ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಗಳು

೧. ಚಂದ್ರಶೇಖರ್ ವಿ.ಎಸ್., ಸಮಾಜ ವಿಜ್ಞಾನಗಳಲ್ಲಿ ಸಂಶೋಧನ ವಿಧಾನಗಳು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೨೦೦೧

೨. ಲಕ್ಷ್ಮಣ್ ತೆಲಗಾವಿ, ಸ್ಥಳೀಯ ಚರಿತ್ರೆ: ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೨೦೦೨

೩. ಚಂದ್ರಪೂಜಾರಿ ಎಂ. ಜಾಗತೀಕರಣ ಸಂದರ್ಭದಲ್ಲಿ ಬುಡಕಟ್ಟು ಅಭಿವೃದ್ಧಿ, ಪ್ರಭಾಕರ ಎ.ಎಸ್.(ಸಂ) ಆದಿವಾಸಿ ಅಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೬

೪. ಚಂದ್ರಪೂಜಾರಿ (ಎಂ), ಲೇ.ಸಂಶೋಧನ ಪ್ರಸ್ತುತ (ಮಂಟಪಮಾಲೆ ೧೫೪), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೨೦೦೮

೫. ಅಶೋಕ್‌ಕುಮಾರ್ ಯು.ಬಿ., ಕೃಷಿ ಕೂಲಿಕಾರರ ಬದುಕು, ಬವಣೆ (ಸಮಶಾಸ್ತ್ರೀಯ ಸಂಶೋಧನಾ ಅಧ್ಯಯನ) ಚೇತನ ಬುಕ್‌ಹೌಸ್, ಮೈಸೂರು, ೨೦೦೯

೬. ಚಂದ್ರಶೇಖರ ಟಿ.ಆರ್., ಕರ್ನಾಟಕ ಅಭಿವೃದ್ಧಿ ಮಾಹಿತಿಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೧೯೯೯

೭. ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ಎ.ಎಸ್., ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೨೦೦೪

೮. ಮಹದೇವ ಸಿ., ಚಿನ್ನಸ್ವಾಮಿ ಸೋಸಲೆ ಎನ್., ಹಂಪಿ ಅಂದು–ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೨೦೦೬

೯. ಮಹದೇವ ಸಿ., ಸುಬ್ಬಣ್ಣ ರೈ ಎ., ಮಾಧವ ಪೆರಾಜೆ, ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೨೦೦೨

೧೦. ಕೊಟ್ರಯ್ಯ ಸಿ.ಟಿ.ಎಂ. ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ: ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ ವಿದ್ಯಾರಣ್ಯ ೨೦೦೦

೧೧. ನೇಲಟೂರು ವೆಂಕಟರಾಮಯ್ಯ (ತೆಲುಗು ಮೂಲ) ಅನುವಾದ ಗುರುಮೂರ್ತಿ ಪೆಂಡಕೂರು: ಪ್ರಸಾರಾಂಗ ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ೨೦೦೭

೧೨. ಸುಚಿತಾನಂತ ಕೆ. ಮಲ್ಕಾಪೂರೆ, ಬೀದರ ಜಿಲ್ಲೆಯ ಬೇಡ ಬುಡಕಟ್ಟು: (ಒಂದು ಅರ್ಥಶಾಸ್ತ್ರೀಯ ಅಧ್ಯಯನ ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ) ಕನ್ನಡ ವಿ.ವಿ,ಹಂಪಿ ವಿದ್ಯಾರಣ್ಯ ೨೦೦೧

೧೩. ಚನ್ನ ಮಲ್ಲಪ್ಪ ಜುಬೀರ್, ಗುಲಬರ್ಗಾ ಜಿಲ್ಲೆಯ ಬುಡಕಟ್ಟು ರಾಜಕೀಯ ಅಧ್ಯಯನ: (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ) ಕನ್ನಡ ವಿ.ವಿ,ಹಂಪಿ ವಿದ್ಯಾರಣ್ಯ ೨೦೦೧

೧೪. ಚಿನ್ನಸ್ವಾಮಿ ಸೋಸಲೆ ಎನ್, ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ ; ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು ೫೬೦೦೦೩, ೨೦೦೧

೧೫. ಕೇಶವಪ್ರಸಾದ್, ಕಪ್ಪೆಹೊತಿಯರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು-೫೬೦೦೦೨, ೧೯೯೩

೧೬. ಕೇಶವನ್ ಪ್ರಸಾದ್ ಕೆ, ಮಲೆಮಾದೇಶ್ವರ: ಪ್ರಸಾರಾಂಗ, ಕನ್ನಡ ವಿ.ವಿ,ಹಂಪಿ ವಿದ್ಯಾರಣ್ಯ ೧೯೯೭

೧೭. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩ (ಹಂಪಿ ಶಾಸನಗಳು): ಕನ್ನಡ ವಿ.ವಿ,ಹಂಪಿ ವಿದ್ಯಾರಣ್ಯ ೨೦೦೧

೧೮. ವೀಣಾ ಎಂ.ಪಿ, ಮನೆ, ಸಮಾಜ ಮತ್ತು ಸಂಸ್ಕೃತಿ: ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಅಪ್ರಕಟಿತ ಪ್ರಬಂಧ ೧೯೯೫

೧೯. ಸಣ್ಣ ರಾಮ, ಲಂಬಾಣಿ ಸಂಸ್ಕೃತಿ: ಮಲೆನಾಡು ಆಫಸೆಟ್ ಪ್ರಿಂಟರ್ಸ್, ಶಿವಮೊಗ್ಗ ೧೯೯೯

೨೦. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು: ಮೂಲಭಾರತಿ ಪ್ರಕಾಶನ, ಬೆಂಗಳೂರು ೨೦೦೦

೨೧. ಹಿರೇಮಠ ಎಸ್.ಎಸ್., ಕರ್ನಾಟಕ ಸಂಸ್ಕೃತಿ ಪರಂಪರೆ/ ಭಾಗ-೧, ಹಬ್ಬಗಳು/: ಸಮತಾ ಪ್ರಕಾಶನ, ಹರಪನಹಳ್ಳಿ, ೧೯೯೨

೨೨. ಹಿರೇಮಠ ಎಸ್.ಎಸ್., ದಲಿತ ಸಂಸ್ಕೃತಿ ಪರಂಪರೆ/ ಭಾಗ-೨ ಜಾತ್ರೆಗಳು: ಸಮತಾ ಪ್ರಕಾಶನ, ಹರಪನಹಳ್ಳಿ, ೧೯೯೩

೨೩. ಲಕ್ಕಪ್ಪಗೌಡ ಎಚ್.ಜೆ. (ಪ್ರ.ಸಂ) ಕರ್ನಾಟಕದ ಬುಡಕಟ್ಟುಗಳು ಸಂ.೧ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೬

೨೪. ಮೇತ್ರಿ ಕೆ.ಎಂ. ಬುಡಕಟ್ಟು ಕುಲ ಕಸುಬುಗಳು : ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ ೨೦೦೨

೨೫. ಮಾರುತಿ ವಿ.ಎಸ್. ಗೋಸಂಗಿ ಸಮುದಾಯ: ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ೨೦೦೨

೨೬. ಕೇಶವನ್ ಪ್ರಸಾದ್.ಕೆ., **ಬುಡಕಟ್ಟು ವಿಸ್ಮಯ**, ಅಭಿರುಚಿ ಪ್ರಕಾಶನ, ಮೈಸೂರು: ೨೦೦೫

೨೭. ಗಂಗಾಧರ ದೈವಜ್ಞ., **ಬುಡಕಟ್ಟು ಹುಟ್ಟು ಸಾವಿನ ನಡುವೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೨೦೦೦

೨೮. ಚಂದ್ರಪ್ಪ ಎನ್., **ಭಗವಾನ್ ಬಿರ್ಸ್ ಮುಂಡ**, ಮುಂಡ ಪ್ರಕಾಶನ, ಬೆಂಗಳೂರು: ೨೦೦೦

೨೯. ಚೆಲುವರಾಜು., **ಜುಂಜಪ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ: ೧೯೯೮

೩೦. ಜಿ.ವಿ.ಡಿ., **ಈಡಿಗರ ವಿವಾಹ ಪದ್ಧತಿ**, ತೇಜಶ್ವನಿ ಪ್ರಕಾಶನ, ತುಮಕೂರು: ೧೯೮೩

೩೧. ತಪಸ್ವಿಕುಮಾರ.ನಂ., **ಸಂಸ್ಕೃತಿ ವಿಕಾಸ**, ಚೇತನ ಬುಕ್‌ಹೌಸ್, ಮೈಸೂರು: ೨೦೦೦

೩೨. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸಂ ರಾಮಕೃಷ್ಣ.ಜಿ (ಅನು), **ಭಾರತ ದರ್ಶನ**, ನವಕರ್ನಾಟಕ ಪ್ರಕಾಶನ, ಬೆಂಗಳೂರು: ೧೯೯೫

೩೩. ಸುಬ್ರಮಣ್ಯ.ಜಿ., **ಭಾರತೀಯ ಸಮಾಜ**, ಸ್ವಪ್ನ ಬುಕ್‌ಹೌಸ್, ಬೆಂಗಳೂರು: ೨೦೦೬

೩೪. ಶಂಕರರಾವ್.ಚ.ನ., **ಭಾರತೀಯ ಸಮಾಜಶಾಸ್ತ್ರ ಚಿಂತನೆ**, ಸಿದ್ಧಲಿಂಗೇಶ್ವರ ಬುಕ್‌ಹೌಸ್, ಗುಲಬರ್ಗಾ: ೨೦೦೩

ಇಂಗ್ಲೀಷ್ ಪರಾಮರ್ಶನ ಗ್ರಂಥಗಳು

1. Edgar Thrston: Cast & Tribes or Surthem india, asian educational services New Delhi, 1987

2. Halabar B.G. Social Aspect of economic change among the Lambani's of Noth Karnataka, 1975

3. Herskovits M.J. cultural Anthropology, India Books House, New Delhi, 1974

4. Thurston E & Rangachari, Castes & Tribes of Southern India Vol-IV, Delhi, 1909

5. Sing K.S., The Scheduel Castes Vol-II, Oxford University, Delhi, 1993

6. Nanjundayya & Iyer, The Mysore Tribes & Castes, Vol-II, Bangalore, 1928

7. Sherring M.A., Hindu Tribes & Castes, Vol-I Cosmo Delhi, 1979

8. Kamaladevi Chattopadyaya, 1978, Tribalism in India, New Delhi, Vikas Publishing

ಪಿಎಚ್.ಡಿ. ಮತ್ತು ಎಂ.ಫಿಲ್ ಪ್ರಬಂಧಗಳು

೧. ಕೊಂತಮ್ ಸತೀಶ, ಸಂತೆ ಮತ್ತು ಬುಡಕಟ್ಟು ಸಮುದಾಯ (ಅಪ್ರಕಟಿತ ಎಂ.ಫಿಲ್ ಕಿ.ಸಂ.ಪ್ರಬಂಧ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೨೦೦೫

೨. ಜಗದೀಶ ಕುಮಾರ್, ಬೇಡ ಬುಡಕಟ್ಟಿನ ಬೇಟೆ ಆಚರಣೆ (ಒಂದು ಸಮಾಜಶಾಸ್ತ್ರೀಯ ಅಧ್ಯಯನ (ಅಪ್ರಕಟಿತ ಎಂ.ಫಿಲ್ ಪ್ರಬಂಧ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೨೦೦೪

೩. ಹನುಮೇಶ.ಎಚ್., ಬದಲಾಗುತ್ತಿರುವ ಸಂದರ್ಭದಲ್ಲಿ ಡೊಂಬರ ಸಾಮಾಜಿಕ ಮತ್ತು ಆರ್ಥಿಕ ಜೀವನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಪ್ರಭಾಕರ್ ಎ.ಎಸ್., ಕರ್ನಾಟಕದ ಡೊಂಬರು ಒಂದು ಅಲೆಮಾರಿ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೫. ಬಸವರಾಜ ಎ.ಡಿ.ಕುಡುಬಿಯರ ಸಮಾಜಿಕ ಸಾಂಸ್ಕೃತಿಕ ಅಧ್ಯಯನ, (ಎಂ.ಫಿಲ್), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೬. ಬೋರಲಿಂಗಯ್ಯ.ಹಿ.ಚಿ., ಒಂದು ಬುಡಕಟ್ಟಿನ ಲೋಕದೃಷ್ಟಿ, (ಪಿಎಚ್.ಡಿ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೭. ವಿಜಯಲಕ್ಷ್ಮಿ.ಆರ್., ಲಂಬಾಣಿ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು, (ಎಂ.ಫಿಲ್ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೮. ಸುದರ್ಶನ್ ಕುಮಾರ ಎಂ., ಬದಲಾಗುತ್ತಿರುವ ಸಮಾಜದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಆರ್ಥಿಕ ಸ್ಥಿತಿ-ಗತಿ, (ಒಂದು ಸಮಾಜಶಾಸ್ತ್ರೀಯ ಅಧ್ಯಯನ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೯. ಲಕ್ಷ್ಮೀಪತಿ.ಜಿ., ಕರ್ನಾಟಕದ ಸಾಮಾಜಿಕ ಬದಲಾವಣೆ ಸಮಾಜಶಾಸ್ತ್ರೀ ಹಾಗೂ ಸಾಹಿತ್ಯ ನೋಡಿರುವ ಬಗೆ, (ಪಿಎಚ್.ಡಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೧೦. ಪ್ರಶಾಂತ್.ಎಚ್.ಡಿ., ಲಮಾಣಿಗರ ಸಾಮಾಜಿಕ ಬದಲಾವಣೆ, (ಪಿಎಚ್.ಡಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨. ವಕ್ತೃ ವಿವರ

ಊರು: **ಹಂಪಿ,** ಸಮುದಾಯ: ಸಿಳ್ಳೇಕ್ಯಾತರು

ಕ್ರಸಂ.	ಹೆಸರು	ವಯಸ್ಸು	ವೃತ್ತಿ
೧.	ಮುನಿಯಮ್ಮ	೩೩	ವ್ಯಾಪಾರ
೨.	ಶಾಂಭವಿ	೪೫	ವ್ಯಾಪಾರ
೩.	ಅನುಪೂರ್ಣ	೩೦	ಕೂಲಿ
೪.	ಗಾಳೆಪ್ಪ	೩೮	ಮೀನಿನ ವ್ಯಾಪಾರಿ
೫.	ಹೇಮಂತ	೨೫	ಕೂಲಿ
೬.	ವೀರೇಶ	೨೮	ಕೂಲಿ

ಊರು: **ಹಂಪಿ ಎಂ.ಪಿ.ಪ್ರಕಾಶನಗರ** ಸಮುದಾಯ: **ಊರುನಾಯಕರು**

೭.	ಜಾಗಿರದಾರ ರಾಮಣ್ಣ	೬೦	ಕೂಲಿ
೮.	ವೆಂಕಮ್ಮ	೪೫	ಕೂಲಿ
೯.	ಹೆಗಮ್ಮ	೫೦	ಕೂಲಿ

ಊರು: **ಹಂಪಿ ಎಂ.ಪಿ.ಪ್ರಕಾಶನಗರ** ಸಮುದಾಯ: **ಮ್ಯಾಸನಾಯಕರು**

೧೦.	ಬೋಸಮ್ಮ	೪೦	ಕೂಲಿ
೧೧.	ನಾಗರಾಜ	೨೫	ಕೂಲಿ, ಸಕ್ರೀಯರಾಜಕಾರಣ

ಊರು: **ಕಡ್ಡಿರಾಂಪುರ** ಸಮುದಾಯ: **ಊರುನಾಯಕರು**

೧೨.	ಎಂ.ವೆಂಕಟೇಶ	೪೫	ಕೂಲಿ
೧೩.	ಎನ್.ವೆಂಕಟೇಶ	೫೦	ಕೂಲಿ
೧೪.	ದುರ್ಗಪ್ಪ	೫೫	ಕೂಲಿ
೧೫.	ಭಾಗ್ಯಮ್ಮ	೬೫	ಕೂಲಿ

೧೬.	ಧರ್ಮಪ್ಪ	೫೫	ಗಣಿಕಾರ್ಮಿಕ
೧೭.	ಭೀಮವ್ವ	೬೦	ಕೂಲಿ

ಊರು: **ಕಮಲಾಪುರ (ಶ್ರೀಲಂಕ ಕಾಲೋನಿ)** ಸಮುದಾಯ: **ದುರುಗ ಮುರುಗ**

೧೮.	ರಾಜಪ್ಪ	೭೦	ಮೂಲಕಸುಬು ಭಿಕ್ಷಾಟನೆ
೧೯.	ಈರಣ್ಣ	೪೦	ಕೂಲಿ
೨೦.	ಧರ್ಮಣ್ಣ	೩೫	ಕೂಲಿ

ಊರು: **ಕಮಲಾಪುರ (ಶ್ರೀಲಂಕ ಕಾಲೋನಿ)** ಸಮುದಾಯ: **ಕಂಜರಭಟ್ಟ**

೨೧.	ಯಂಕಪ್ಪ	೬೦	ಕೂಲಿ
೨೨.	ಹುಲ್ಲೆಪ್ಪ	೭೦	ಕೂಲಿ
೨೩.	ರಾಮಪ್ಪ	೩೫	ಕೂಲಿ

ಊರು: **ಕಮಲಾಪುರ (ಶ್ರೀಲಂಕ ಕಾಲೋನಿ)** ಸಮುದಾಯ: **ಮೋಡಿಕಾರರು**

೨೪.	ಹಣಮಂತ	೩೦	ಹಾವಿನ ಆಟ
೨೫.	ರಾಮುಲ್ಲಾ	೪೫	ಹಾವಿನ ಆಟ
೨೬.	ಮಾರೆಪ್ಪ	೭೦	ಹಾವಿನ ಆಟ

ಊರು: **ಕಮಲಾಪುರ (ಶ್ರೀಲಂಕ ಕಾಲೋನಿ)** ಸಮುದಾಯ: **ಹಗಲುವೇಷಗಾರರು**

೨೭.	ಮಂಜಪ್ಪ	೩೨	ಮೂಲಕಸುಬು ಭಿಕ್ಷಾಟನೆ
೨೮.	ಶಂಕ್ರಪ್ಪ	೪೦	ಮೂಲಕಸುಬು ಭಿಕ್ಷಾಟನೆ

ಊರು: **ಕಮಲಾಪುರ (ರಾಮನಗರ ತಾಂಡ)** ಸಮುದಾಯ: **ಲಂಬಾಣಿ**

೨೯.	ಎಲ್.ಶಂಕರನಾಯಕ	೬೫	ಕೂಲಿ
೩೦.	ಯಮನ ನಾಯಕ	೭೦	ಕೂಲಿ
೩೧.	ಹಣಮ ನಾಯಕ	೪೫	ಕೂಲಿ (ಗೌಂಡಿ)

ಊರು: **ಬುಕ್ಕಸಾಗರ** ಸಮುದಾಯ: **ಗೊಸಂಗಿ**

೩೨.	ಗುಂಡಪಾಲ	೪೦	ಕೂಲಿ
೩೩.	ರಾಗು	೪೩	ಕೂಲಿ
೩೪.	ರಾಜೇಶ	೨೮	ಕೂಲಿ
೩೫.	ಜಿ.ಮಾದವರಾವ್	೭೦	ಕೂಲಿ
೩೬.	ವೆಂಕಟೇಶ	೪೦	ಕೂಲಿ

ಊರು: **ಕಮಲಾಪುರ (ಕೆರೆತಾಂಡ)** ಸಮುದಾಯ: **ಲಂಬಾಣಿಗರು**

೩೭.	ಕಮಲನಾಯಕ	೭೦	ಕೂಲಿ
೩೮.	ಧರ್ಮನಾಯಕ	೭೫	ವ್ಯವಸಾಯ
೩೯.	ಛಂದ್ಯಾನಾಯಕ	೪೫	ಪಟ್ಟಣಪಂಚಾಯಿತಿ ಸದಸ್ಯ
೪೦.	ಕೃಷ್ಣ	೫೫	ಕೂಲಿ
೪೧.	ಉನಿಕ್ಕಿಬಾಯಿ	೭೦	ಕೂಲಿ
೪೨.	ರತ್ನಿಬಾಯಿ	೫೦	ಕೂಲಿ
೪೩.	ಕಾಳಿಬಾಯಿ	೫೦	ಕೂಲಿ

ಊರು: **ಕಮಲಾಪುರ** ಸಮುದಾಯ: **ಮ್ಯಾಸನಾಯಕರು**

೪೪.	ಕೆ.ಬಸಪ್ಪ	೩೫	ಕೂಲಿ
೪೫.	ಮೈಲಪ್ಪ	೫೦	ಕೂಲಿ
೪೬.	ಪಂಪಾಪತಿ	೪೫	ಕೂಲಿ
೪೭.	ಬಸಮ್ಮ	೪೦	ಕೂಲಿ

ಊರು: **ಕಮಲಾಪುರ** ಸಮುದಾಯ: **ಊರುನಾಯಕರು**

೪೮.	ಮಲ್ಲಣ್ಣ	೩೮	ಕೂಲಿ
೪೯.	ಪಂಪಣ್ಣ	೨೫	ಇಟ್ಟಿಗೆ ತಯಾರಿಕ
೫೦.	ಹನುಮಕ್ಕ	೬೫	ಕೂಲಿ

ಊರು: **ವೆಂಕಟಾಪುರ** ಸಮುದಾಯ: **ಬುಡ್ಗಜಂಗಮರು**

೫೧.	ಸಿದ್ಧಪ್ಪ	೫೮	ಪ್ಲಾಸ್ಟಿಕ್‌ಕೊಡ ವ್ಯಾಪಾರಿ
೫೨.	ಬಸವರಾಜ	೫೦	ಕೂಲಿ
೫೩.	ಹಸನಪ್ಪ	೪೫	ಕೂಲಿ
೫೪.	ಮಾಂತೇಶ	೩೫	ಕೂಲಿ

ಊರು: **ಕಂಪ್ಲಿ** ಸಮುದಾಯ: **ಹಕ್ಕಿಪಿಕ್ಕಿ**

೫೫.	ಅಂಬುಲಾಲ ನಾಯಕ	೭೫	ಕೂಲಿ
೫೬.	ಶ್ರೀಕಾಂತ ಹೆಚ್.ಪಿ	೪೦	ಕೂಲಿ
೫೭.	ರಾಮು ಹೆಚ್.ಪಿ	೩೫	ಕೂಲಿ
೫೮.	ಶಿಕಾರಿ ರಾಮು	೩೮	ಸಮುದಾಯ ಸಂಘಟನೆ ಕಾರ್ಯದರ್ಶಿ
೫೯.	ಛತ್ತರಸಿಂಗ್	೩೫	ಕೂಲಿ
೬೦.	ಹೀರೂ	೩೦	ಕೂಲಿ

ಊರು: **ಕಂಪ್ಲಿ** ಸಮುದಾಯ: **ಸಿಂದೋಳಿ**

೬೧.	ರಾಹುಲ ನಾಗಪ್ಪ	೩೮	ಭಿಕ್ಷಾಟನೆ
೬೨.	ಯೆರಾನಾಗಣ್ಣ	೨೫	ಕೂಲಿ
೬೩.	ತಿಪ್ಪಯ್ಯ	೨೮	ಕೂಲಿ
೬೪.	ಮಾರೆಕ್ಕ	೫೨	ಕೂಲಿ


ಊರು: **ಕಂಪ್ಲಿ** ಸಮುದಾಯ: **ಸುಡುಗಾಡುಸಿದ್ದರು**

೬೫.	ಸಣ್ಣ ಹುಲಿಗಪ್ಪ	೭೫	ಭಿಕ್ಷಾಟನೆ
೬೬.	ಸಣ್ಣ ಮರೆಪ್ಪ	೭೦	ಭಿಕ್ಷಾಟನೆ
೬೭.	ನಾಗರಾಜ	೫೫	ಕೂಲಿ
೬೮.	ರಂಗಪ್ಪ	೪೦	ಕೂಲಿ
೬೯.	ಪರಸುರಾಮ	೨೮	ಕೂಲಿ
೭೦.	ಯಲ್ಲಕ್ಕ	೬೦	ಕೂಲಿ
೭೧.	ಸಾರೇತಮ್ಮ	೬೫	ವ್ಯವಸಾಯ

* * *

೩. ನಕ್ಷೆಗಳು

ಕರ್ನಾಟಕ ನಕಾಶೆ



ಹೊಸಪೇಟೆ ತಾಲ್ಲೂಕು ನಕಾಶೆ



೪. ಛಾಯಾಚಿತ್ರಗಳು



ಮ್ಯಾಸನಾಯಕರ ಮನೆದೇವರು (ಗಾದರಿಪಾಲನಾಯಕ)



ಊರುನಾಯಕರು & ಮ್ಯಾಸನಾಯಕರು ಯುಗಾದಿ ಹಬ್ಬದ ಆಚರಣೆಯ ಸನ್ನಿವೇಶ



ಊರುನಾಯಕರು ಆಚರಿಸುವ ಹಿರಿಯರ ದಿನಾಚರಣೆ



ಹಕ್ಕಿ ಪಿಕ್ಕಿ ಕಾಲೋನಿ ಕಂಪ್ಲಿ-ಕೊಳಚೆ ಪ್ರದೇಶದಲ್ಲಿ ವಾಸಿಸಿರುವ ದೃಶ್ಯ



ಕೆರೆತಾಂಡಾದಲ್ಲಿ ಲಂಬಾಣಿ ಸಮುದಾಯದವರು ವಾಸಿಸುವ ಗುಡಿಸಲು ಮನೆಯ ಚಿತ್ರಣ



ಕಂಪ್ಲಿ– ದುರಗ,ಮುರಗಿ ಸಮುದಾಯದವರು ಪ್ಲಾಸ್ಟಿಕ್ ಸಾಮಾನುಗಳನ್ನು ಮಾರಾಟ & ಸಂಗ್ರಹಿಸಿದ್ದ ದೃಶ್ಯ



ಕಮಲಾಪುರ (ಶ್ರೀಲಂಕಾ ಕಾಲೋನಿ)–ಮೀನಿನ ಬಲೆಯನ್ನು ಹೆಣೆಯುತ್ತಿರುವ ದುರಗ,ಮುರಗಿ ಸಮುದಾಯ ವ್ಯಕ್ತಿಯ ಚಿತ್ರ



ಅಲೆಮಾರಿ ಸಮುದಾಯಗಳು ಪರ್ಯಾಯ ಉದ್ಯೋಗದಲ್ಲಿ ತೂಡಗಿ ಸಂಗ್ರಹಿಸಿರುವ ಪ್ಲಾಸ್ಟಿಕ್ ಸಾಮಾಗ್ರಿಗಳ ದೃಶ್ಯ-ವೆಂಕಟಾಪುರ



ಕಂಪ್ಲಿ–ಸುಡುಗಾಡು ಸಿದ್ದರು ನ್ಯಾಯ ಪಂಚಾಯತಿಯಲ್ಲಿ ತೊಡಗಿರುವ ಸನ್ನಿವೇಶ



ಕಂಪ್ಲಿ–ಸುಡುಗಾಡು ಸಿದ್ದರು & ಹಗಲುವೇಷಗಾರರು ವಾಸಿಸುವ ಸ್ಥಳ



ಹಂಪಿ–ಶಿಳ್ಳೆಕ್ಯಾತ ಸಮುದಾಯದವರು ಹೋಟೆಲ್ ಉದ್ಯೋಗದಲ್ಲಿ ತೊಡಗಿರುವ ಚಿತ್ರ



ಕಮಲಾಪುರ (ಶ್ರೀಲಂಕಾ ಕಾಲೋನಿ)–ಹಾವಡಿಗರು ಹಾವಾಡಿಸುವ ಚಿತ್ರ